ಉಪನ್ಯಾಸ ಗ್ರಂಥಮಾಲೆ

೧೫

ಮಹಾಕವಿ ಮಿಲ್ಟನ್

(ಜೀವನ-ಕೃತಿ-ಪರಿಚಯ)

ಡಾ|| ಜಿ. ಎಸ್. ಆಮೂರ

ಕರ್ನಾಟಕ ವಿಶ್ವವಿದ್ಯಾಲಯ

ಧಾ ರ ವಾ ಡ

ಜುಲೈ, ೧೯೭೨

Narasimha Murthy B.A.

ಮಹಾಕವಿ ಮಿಲ್ಟನ್

ಉಪನ್ಯಾಸ ಗ್ರಂಥಮಾಲೆ

೧೫

ಮಹಾಕವಿ ಮಿಲ್ಟನ್

(ಜೀವನ–ಕೃತಿ–ಪರಿಚಯ)

ಡಾ॥ ಜಿ. ಎಸ್. ಆಮೂರ,
ಎಂ.ಎ., ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಜುಲೈ, ೧೯೭೨

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮೊದಲನೆಯ ಮುದ್ರಣ : ೨,೦೦೦ ಪ್ರತಿಗಳು
ಮಾರ್ಚ್, ೧೯೫೯

ದ್ವಿತೀಯ ಮುದ್ರಣ : ೨,೦೦೦ ಪ್ರತಿಗಳು
ಮೇ, ೧೯೬೬

ತೃತೀಯ ಮುದ್ರಣ : ೫,೦೦೦ ಪ್ರತಿಗಳು
ಜುಲೈ, ೧೯೭೨

ಬೆಲೆ : ೨೫ ಪೈಸೆ

ಮುದ್ರಕರು :

ಸದಾನಂದ ಎಸ್. ಪವಾರ
ಸದಾನಂದ ಪ್ರಿಂಟರ್ಸ್, ಹಳೇ ದಲಾಲ ಮಾರ್ಕೆಟ್,
ಧಾರವಾಡ–೧

ಮಾಲೆಯ ಮುನ್ನುಡಿ

(ಪ್ರಥಮ ಮುದ್ರಣ)

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಗಳ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪ ನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಹೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯ ಮತ್ತು ಅದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆ ಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿ ಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶ ವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸ ಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರು ಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವ ವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜ ವಾಗಿಯೂ ಸಂತೋಷದ ಸಂಗತಿಯಾಗಿದೆ.

ಉಪನ್ಯಾಸಗಳನ್ನು ಕೊಡಿಸಿದಷ್ಟಕ್ಕೆ ತೃಪ್ತಿಗೊಳ್ಳದೆ ಇವುಗಳಲ್ಲಿ ಕೆಲವನ್ನಾದರೂ ಗ್ರಂಥರೂಪದಲ್ಲಿ ಬರೆಯಿಸಿ, ಸುಲಭವಾದ ಬೆಲೆಗೆ ಪ್ರಕಟಿಸಿ ಕನ್ನಡ ಜನದಲ್ಲೆಲ್ಲ ಹರಡಬೇಕೆಂಬ ಯೋಜನೆ ಈಗ ಹತ್ತು ವರ್ಷಗಳ ಪೂರ್ವದಲ್ಲಿಯೇ ಈ 'ಉಪನ್ಯಾಸ ಗ್ರಂಥಮಾಲೆ'ಯ ರೂಪದಲ್ಲಿ ಮೂರ್ತಗೊಂಡು ಮುನ್ನಡೆದಿದೆ. ಈ ಮಾಲೆಯಲ್ಲಿ ಇದುವರೆಗೆ ಬೇರೆ ಬೇರೆ ವಿಷಯಗಳನ್ನು ಕುರಿತು ೫೦ ಪುಸ್ತಕಗಳು ಪ್ರಕಟವಾಗಿವೆ. ಅಲ್ಪಾವಧಿಯಲ್ಲಿಯೇ ಈ ಪುಸ್ತಕಗಳ ಸಾವಿರಾರು ಪ್ರತಿಗಳು ಮಾರಾಟಗೊಂಡಿವೆ. ಕೆಲವು ಪುಸ್ತಕಗಳು ಮೂರು-ನಾಲ್ಕು ಆವೃತ್ತಿಗಳನ್ನೂ ಕಾಣುತ್ತಿರುವದು ಮಾಲೆಯ ಉಪಯುಕ್ತತೆಗೂ ಜನಪ್ರಿಯತೆಗೂ ಸಾಕ್ಷಿಯಾಗಿದೆ.

ನಮ್ಮ ಪ್ರಾರ್ಥನೆಗೆ ಮನ್ನಣೆಕೊಟ್ಟು, ಉಪನ್ಯಾಸಕರು ಪುಸ್ತಕಗಳನ್ನು ಬರೆದುಕೊಡುತ್ತಿರುವುದು ಶ್ಲಾಘ್ಯವಾದ ವಿಷಯ. ಇದಕ್ಕಾಗಿ ಈ ಲೇಖಕ ಮಹಾಶಯರಿಗೆ ವಿಶ್ವವಿದ್ಯಾಲಯದ ವಂದನೆಗಳನ್ನು ಸಂತೋಷದಿಂದ ಸಲ್ಲಿಸುತ್ತೇನೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ನಮ್ಮ ಈ ಯೋಜನೆಯನ್ನು ಮೆಚ್ಚಿಕೊಂಡು ಉಪನ್ಯಾಸಶಿಬಿರಗಳಿಗೂ ಈ ಪುಸ್ತಿಕೆಗಳ ಪ್ರಕಟನೆಗೂ ಧನಸಹಾಯವೀಯುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ಈ ಕಿರುಹೊತ್ತಿಗೆಗಳ ಪ್ರಸಾರ ನೂರ್ಮಡಿಗೊಂಡು ತನ್ಮೂಲಕ ನಮ್ಮ ಜನತೆಯ ಜ್ಞಾನಾಸಕ್ತಿ ಪುಷ್ಟಿಗೊಳ್ಳಲೆಂದು ಹಾರೈಸುತ್ತೇನೆ.

ಧಾರವಾಡ
೧-೧-೧೯೫೯

ಡಿ. ಸಿ. ಪಾವಟೆ
ಕುಲಪತಿ
ಕರ್ನಾಟಕ ವಿಶ್ವವಿದ್ಯಾಲಯ

ಎರಡು ಮಾತು

ಕಿತ್ತೂರಿನಲ್ಲಿ ಕಳೆದ ಜೂನ ತಿಂಗಳಲ್ಲಿ ನಡೆದ ಉಪನ್ಯಾಸ ಶಿಬಿರಕ್ಕೆ ನನ್ನನ್ನು ಆಮಂತ್ರಿಸಿ, ಅಲ್ಲಿ ಅಂದು ನಾನು ಮಾಡಿದ ಭಾಷಣವನ್ನು ಗ್ರಂಥರೂಪದಲ್ಲಿ ಪ್ರಕಟಿಸುವ ಕೃಪೆಯನ್ನು ಕರ್ನಾಟಕ ವಿಶ್ವವಿದ್ಯಾಲಯವು ನನಗೆ ನೀಡಿದೆ. ಈ ಉಪಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸಲೋಸುಗ ಈ ಎರಡು ಮಾತುಗಳನ್ನಿಲ್ಲಿ ಆಡುತ್ತಿದ್ದೇನೆ.

ನಮ್ಮ ಕವಿಗಳಂತೆಯೇ ಇಂಗ್ಲಿಶ್ ಕವಿಗಳ ಜೀವನ-ಕೃತಿ-ಪರಿಚಯವೂ ನಮ್ಮ ಜನತೆಗೆ ಆಗಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು, ಮಿಲ್ಟನ್ ಕವಿಯ ಬಗ್ಗೆ ಮಾತನಾಡುವ ಹಾಗೂ ಬರೆಯುವ ಸಾಹಸಕ್ಕೆ ಕೈಹಾಕಿದೆ. ಇದರಿಂದಾಗಿ ಸಾಹಿತ್ಯದತ್ತ ಓದುಗರ ಲಕ್ಷ್ಯ ಹೊರಳಿ ತಕ್ಕಮಟ್ಟಿಗೆ ಅದರ ಸ್ವಾರಸ್ಯವನ್ನರಿಯುವಂತಾದರೆ ನನ್ನ ಕಾರ್ಯಕ್ಕೆ ಸಫಲತೆ ದೊರಕಿದಂತೆ ಎಂದು ತಿಳಿದುಕೊಳ್ಳುತ್ತೇನೆ.

ಈ ಪುಸ್ತಿಕೆಯಲ್ಲಿ ಮಿಲ್ಟನ್ನನ ಜೀವನ ಚಿತ್ರಣವನ್ನು ಮುಖ್ಯವಾಗಿಟ್ಟುಕೊಂಡಿದ್ದಾಗಿದೆ. ಕೃತಿಗಳ ಪರಿಚಯ ಕೂಡ ತಕ್ಕಮಟ್ಟಿಗೆ ಬಂದಿದೆ ಎಂದುಕೊಂಡಿದ್ದೇನೆ. ಏಕೆಂದರೆ ಮಿಲ್ಟನ್ನನ ಜೀವನವನ್ನು ತಿಳಿಯುವದಕ್ಕೆ ಅವನ ಕೃತಿಗಳ ಅಭ್ಯಾಸ ಅವಶ್ಯವಾಗಿ ಬೇಕಾಗುತ್ತದೆ. ಇತರ ಸಾಹಿತಿಗಳ ವಿಷಯದಲ್ಲೂ ಈ ಮಾತನ್ನಾಡಬಹುದಾದರೂ ಮಿಲ್ಟನ್ನನ ವಿಷಯದಲ್ಲಿ ಇದು ಬಹಳ ಮಹತ್ವದ ಸತ್ಯವಾಗಿದೆ.

ಈ ಪುಸ್ತಿಕೆಯನ್ನು ಪ್ರಕಾಶಗೊಳಿಸುವಲ್ಲಿ ವಿಶೇಷ ಆಸ್ಥೆ ವಹಿಸಿ ಸಲಹೆ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನ ಶಾಖೆಯ ನಿರ್ದೇಶಕರಿಗೆ ನನ್ನ ನೆನಕೆಗಳು ಸಲ್ಲಬೇಕು.

ಕೃಪಾನಿವಾಸ,
ವಿಸ್ತರಣ, ಗದಗ
೧—೧—೧೯೫೪

ಜಿ. ಎಸ್. ಆಮೂರ

ಮೂರನೆಯ ಆವೃತ್ತಿಗಾಗಿ

ಮಹಾಕವಿ ಮಿಲ್ಟನ್ ಆರು ವರ್ಷಗಳ ನಂತರ ಪುನರ್ಮುದ್ರಿತವಾಗುತ್ತಿದೆ. ಈ ಅವಧಿಯಲ್ಲಿ ನಾನು ಧಾರವಾಡ ವನ್ನು ಬಿಟ್ಟು ಔರಂಗಾಬಾದಿಗೆ ಬಂದದ್ದರಿಂದ ನನ್ನಲ್ಲಿ ಬದಲಾ ವಣೆ ಸಾಕಷ್ಟಾಗಿದೆ. ಆದರೆ, ಪುಸ್ತಿಕೆ ಮಾತ್ರ ಇದ್ದಂತೆಯೆ ಪ್ರಕಟವಾಗುತ್ತಿದೆ. ಹೆಸರುಗಳ ಉಚ್ಚಾರದಲ್ಲಿಯ ಕೆಲ ದೋಷ ಗಳನ್ನು ತಿದ್ದುವದಕ್ಕಾಗಿ ಹೊಸ ಆವೃತ್ತಿಯ ಲಾಭ ಪಡೆದಿದ್ದೇನೆ. ಪುಸ್ತಿಕೆಯನ್ನು ಮೆಚ್ಚಿಕೊಂಡ ಸಹೃದಯರಿಗೆ, ಅದನ್ನು ಬರೆಯು ವುದಕ್ಕೆ ಮುಖ್ಯ ಪ್ರೇರಕರಾದ ಮಿತ್ರ ಚೆನ್ನವೀರ ಕಣವಿಯವರಿಗೆ ವಂದನೆಗಳು.

೨೧೨/೨ ಸಮರ್ಥನಗರ,
ಔರಂಗಾಬಾದ
೩೧-೭-೧೯೭೨

ಜಿ. ಎಸ್. ಆಮೂರ



ಮಹಾಕವಿ ಮಿಲ್ಟನ್

(೧೬೦೮—೧೬೭೪)

ಪರಿವಿಡಿ

ಮಹಾಕವಿ ಮಿಲ್ಟನ್

++++++

೧. ಪ್ರಾಸ್ತಾವಿಕ

ಪಾಶ್ಚಾತ್ಯ ಸಾಹಿತ್ಯದಲ್ಲಿ ಮಿಲ್ಟನ್ನನ ಸ್ಥಾನ ಬಹು ದೊಡ್ಡದು. ಇಂಗ್ಲಿಶ್ ಭಾಷೆಯಲ್ಲಿ ಅದ್ವಿತೀಯವಾದ ಮಹಾಕಾವ್ಯವನ್ನು ಸೃಷ್ಟಿಸಿದ ಕೀರ್ತಿ ಇವನದು. ಗ್ರೀಸಿಗೆ ಹೋಮರನಿದ್ದಂತೆ, ಭಾರತಕ್ಕೆ ವ್ಯಾಸ ವಾಲ್ಮೀಕಿಗಳಿದ್ದಂತೆ, ಇಟಲಿಗೆ ವ್ಹರ್ಜಿಲ್, ಡಾಂಟೆ ಇದ್ದಂತೆ ಇಂಗ್ಲಂಡಿಗೆ ಮಿಲ್ಟನ್. ಅವನ ಮೇರುಕೃತಿಯಾದ **ಪ್ಯಾರಡೈಜ್ ಲಾಸ್ಟ್** (*Paradise Lost*) ಇಂಗ್ಲಿಷ್ ಭಾಷೆಯಷ್ಟೇ ಅಮರವಾದುದು.

ಹದಿನೇಳನೆಯ ಶತಮಾನದ ಇಂಗ್ಲಂಡಿನಲ್ಲಿ ಆಗಿ ಹೋದ ಈ ಕವಿಯ ಸಾಧನೆಯಷ್ಟೇ ಜೀವನವೂ ವೈಶಿಷ್ಟ್ಯಪೂರ್ಣವಾಗಿದೆ. ಇತ್ತೀಚೆಗೆ ಅವನ ಜೀವನ ಚರಿತ್ರೆಯನ್ನು ಬರೆದಿರುವ ರೆಕ್ಸ ವಾರ್ನರ್ ಅವರು ಹೇಳಿದಂತೆ ಸರ್ವವಿಧ

ದಲ್ಲಿಯೂ ಇವನೊಬ್ಬ ಅಸಾಮಾನ್ಯ ವ್ಯಕ್ತಿ. ಸತತವಾದ ಪರಿಶ್ರಮದಿಂದ ಮಿಲ್ಟನ್ ಗ್ರೀಕ್, ಹಿಬ್ರೂ, ಲ್ಯಾಟಿನ್ ಮತ್ತು ಇಂಗ್ಲಿಶ್ ಸಾಹಿತ್ಯಗಳಲ್ಲಿ ಅಪಾರವಾದ ಪಾಂಡಿತ್ಯ ವನ್ನು ದೊರಕಿಸಿದ. ಎಳೆತನದಲ್ಲಿಯೇ ತನ್ನ ಜೀವನ ಕ್ಕೊಂದು ಮಹಾನ್ ಧ್ಯೇಯವನ್ನು ರೂಪಿಸಿಕೊಂಡು **ಪ್ಯಾರಡೈಜ್ ಲಾಸ್ಟ**ದಂತಹ *(Paradise Lost)* ಶ್ರೇಷ್ಠ ಕೃತಿಯನ್ನು ರಚಿಸಿದ. ಪರಮ ಧಾರ್ಮಿಕನಾಗಿ, ಅಚಲವಾದ ಶ್ರದ್ಧೆಯಿಂದ, ಯಾವುದಕ್ಕೂ ಬಗ್ಗದ ತತ್ವನಿಷ್ಠೆಯಿಂದ ತನ್ನ ಜೀವನವನ್ನು ನಡೆಯಿಸಿದ. ಇದಲ್ಲದೆ ಅವನ ಕಾಲದಲ್ಲಿ ನಡೆದ ಸಾಮಾಜಿಕ–ರಾಜಕೀಯ ಕ್ರಾಂತಿಯಲ್ಲಿ ಮಹತ್ವದ ಪಾತ್ರ ವನ್ನು ವಹಿಸಿ ಅಖಂಡ ಧೈರ್ಯ ಸಾಹಸಗಳಿಂದ ಹೋರಾ-ಡಿದ. ನಾಡಿನ ಉದ್ಧಾರಕ್ಕಾಗಿ ತನ್ನ ಲೇಖನಿಯನ್ನು ಮುಡುಪಿಟ್ಟ. ವೈಯಕ್ತಿಕ ಜೀವನದಲ್ಲಿ ಒದಗಿ ಬಂದ ಅನೇಕ ಕಷ್ಟ ನಷ್ಟಗಳಿಗೆ ಎಳ್ಳಷ್ಟೂ ಸೊಪ್ಪುಹಾಕದೆ, ತನ್ನ ವಯಸ್ಸಿನ ೪೦ ನೇ ವರ್ಷದಲ್ಲಿಯೇ ಅಂಧತ್ವಕ್ಕೆ ಗುರಿ ಯಾದರೂ ಕೂಡ, ಕೊನೆಯ ಉಸಿರಿರುವವರೆಗೆ ತನ್ನ ಧ್ಯೇಯಗಳಿಗಾಗಿ ಹೋರಾಡಿದ. ಪಾಂಡಿತ್ಯ, ಪ್ರತಿಭೆ, ದೇಶಪ್ರೇಮ, ಧೈರ್ಯಸಾಹಸಗಳು, ಧಾರ್ಮಿಕತೆ, ತತ್ವನಿಷ್ಠೆ— ಇವೆಲ್ಲವುಗಳನ್ನು ಮಿಲ್ಟನ್ನನ ವ್ಯಕ್ತಿತ್ವದಲ್ಲಿ ನಾವು ಕಾಣುತ್ತೇವೆ.

೨. ಮಿಲ್ಟನ್ ಮನೆತನ

ಶೇಕ್ಸಪಿಯರ್ ವಿಶ್ವಕವಿಯೆಂದು ವಿಖ್ಯಾತನಾಗಿದ್ದರೂ ಅವನ ಜೀವನ ವೃತ್ತಾಂತ ನಮಗೆ ಖಚಿತವಾಗಿ ತಿಳಿದಿರುವುದು ಅತ್ಯಲ್ಪ. ಆದರೆ ಮಿಲ್ಟನ್ನನ ಮಾತು ಹಾಗಲ್ಲ. ತಾನು ರಚಿಸಿದ ಅನೇಕ ಕೃತಿಗಳಲ್ಲಿ ಸ್ವತಃ ಕವಿಯೇ ತನ್ನ ಚರಿತ್ರದ ಅಂಶಗಳನ್ನು, ವಿಚಾರ-ನಂಬುಗೆಗಳನ್ನು, ಮಾನಸಿಕ-ಆಧ್ಯಾತ್ಮಿಕ ಬೆಳವಣಿಗೆಯನ್ನು ಸ್ಫುಟವಾಗಿ ಬಿಂಬಿಸಿದ್ದಾನೆ. ಇದರಿಂದಾಗಿ ಮಿಲ್ಟನ್ನನ ಜೀವನ ಕೃತಿಗಳ ಪರಿಚಯ ಮಾಡಿಕೊಳ್ಳಲು ನಮಗೆ ಬಹಳಷ್ಟು ಅನುಕೂಲವಾಗಿದೆ. ಇದಲ್ಲದೆ, ಪ್ರೊ. ಮೇಸನ್, ಸರ್ ವಾಲ್ಟರ್ ರ್‍ಯಾಲೆ, ಮಾರ್ಕ ಪೆಟಿಸನ್, ಪ್ರೊ. ಟಿಲ್-ಯಾರ್ಡ್, ಹ್ಯಾನ್‌ಫರ್ಡ್, ರೆಕ್ಸ ವಾರ್ನರ್‌ರಂತಹ ಪ್ರತಿ-ಭಾವಂತ ವಿಮರ್ಶಕ-ಚರಿತ್ರಕಾರರು ಕವಿಯ ಜೀವನ-ಸಾಧನೆಗಳನ್ನು ಕೂಲಂಕಷವಾಗಿ ವರ್ಣಿಸಿರುವದರಿಂದ ಓದುಗರಿಗೆ ಅಪಾರವಾದ ಸಹಾಯವಾಗಿದೆ. ಕೆಲ ವಿವಾದಾತ್ಮಕ ವಿಷಯಗಳು ಉಳಿದುಕೊಂಡಿದ್ದರೂ ಮುಖ್ಯವಾದ ಅಂಶಗಳ ಬಗ್ಗೆ ಸಾಕಷ್ಟು ಏಕರೂಪವಾದ ಅಭಿಪ್ರಾಯ ಮೂಡಿಕೊಂಡಿದೆ.

ಮಿಲ್ಟನ್ ಮನೆತನ ಮೂಲತಃ ಆಕ್ಸಫರ್ಡಶಯರಿನದಾದರೂ ಕವಿ ಜಾನ್ ಮಿಲ್ಟನ್ ಹುಟ್ಟಿದುದು ಮತ್ತು ಬಹುಕಾಲ ಬಾಳಿದುದು ಲಂಡನ್ನಿನಲ್ಲಿಯೇ. ಇವನ ತಂದೆಯು

ಹೆಸರು ಜಾನ್ ಮಿಲ್ಟನ್; ಅಜ್ಜ ರಿಚರ್ಡ್ ಮಿಲ್ಟನ್. ಮಿಲ್ಟನ್ ಮನೆತನದಲ್ಲಿ ಧಾರ್ಮಿಕ ವಿಷಯಗಳಿಗೆ ವಿಶೇಷ ವಾದ ಮಹತ್ವ ಕೊಡಲ್ಪಡುತ್ತಿದ್ದಿತು. ರಿಚರ್ಡ್ ಮಿಲ್ಟನ್ನನಿಗೆ ಸಾಕಷ್ಟು ಆಸ್ತಿ-ಪಾಸ್ತಿಗಳಿದ್ದರೂ ಅವನ ಮಗ ಜಾನ್ ಮಿಲ್ಟನ್ ತನ್ನ ತಂದೆಯ ಇಚ್ಛೆಗೆ ಪ್ರತಿಕೂಲವಾಗಿ ಚರ್ಚ್ ಆಫ್ ಇಂಗ್ಲಂಡ್ ಸೇರಿಕೊಂಡಿದ್ದಕ್ಕಾಗಿ ಅವೆಲ್ಲವಕ್ಕೂ ಎರವಾಗಬೇಕಾಯಿತು. ಆದರೆ ಧೈರ್ಯಶಾಲಿಯೂ, ಸ್ವತಂತ್ರ ವಿಚಾರವೃತ್ತಿಯವನೂ ಆದ ಈತ ಲಂಡನ್ನಿಗೆ ಬಂದು, ಅಲ್ಲಿಯೇ ನೆಲಿಸಿ ವಕೀಲರಿಗೆ ಮತ್ತು ಪಕ್ಷಗಾರರಿಗೆ ಬೇಕಾ ಗುವ ಕಾಗದ ಪತ್ರಗಳನ್ನು ತಯಾರಿಸಿಕೊಡುವ ವೃತ್ತಿಯ ನ್ನಾಶ್ರಯಿಸಿ ಅದರಲ್ಲಿಯೇ ಸಾಕಷ್ಟು ಹಣವನ್ನು ಗಳಿಸಿದ. ಅಲ್ಲದೆ, ಕವಿ ಮಿಲ್ಟನ್ನನ ಜೀವನದಲ್ಲಿ ವಿಶೇಷವಾದ ಆಸ್ಥೆ ವಹಿಸಿ ಅವನು ನಿರಾತಂಕವಾಗಿ ತನ್ನ ಓದುಬರೆಹ, ಸಾಹಿತ್ಯಸೇವೆಗಳನ್ನು ನಡೆಯಿಸಿಕೊಂಡು ಬರುವುದಕ್ಕೆ ಅನುಕೂಲ ಮಾಡಿಕೊಟ್ಟ. ಇದಲ್ಲದೆ, ಇವನು ಸ್ವತಃ ಕುಶಲ ಸಂಗೀತಜ್ಞನಾದುದರಿಂದ ಮಗನಲ್ಲಿಯೂ ಸಂಗೀತದ ಸಹಜ ವಾದ ಅಭಿರುಚಿ ಹುಟ್ಟುವುದಕ್ಕೆ ಕಾರಣನಾದ. ಕವಿಯ ತಾಯಿಯ ವಿಷಯವಾಗಿ ನಮಗೆ ಸಾಕಷ್ಟು ತಿಳಿದಿಲ್ಲವಾದರೂ ಅವಳು ಉದಾರ ಹೃದಯದವಳೂ, ಮರ್ಯಾದೆವಂತಳೂ ಆಗಿದ್ದಳೆನ್ನುವುದಕ್ಕೆ ಆಧಾರಗಳು ಸಾಕಷ್ಟಿವೆ.

ಜಾನ್ ಮಿಲ್ಟನ್ನನ ಮಕ್ಕಳಲ್ಲಿ ಹಿರಿಯವಳು ಆ್ಯನ್; ನಂತರದವನೇ ಕವಿ ಜಾನ್; ಕೊನೆಯವನು ಕ್ರಿಸ್ತಫರ್, ಜಾನನಿಗಿಂತ ಏಳು ವರುಷ ಚಿಕ್ಕವನು.

೩. ಶಾಲೆ ಮತ್ತು ಕಾಲೇಜು

ಮಿಲ್ಟನ್ ಶಾಲೆಗೆ ಹೋಗಲು ಪ್ರಾರಂಭಿಸಿದುದು ತನ್ನ ಹನ್ನೆರಡನೆಯ ವಯಸ್ಸಿಗೆ. ಆದರೆ ಅದಕ್ಕೂ ಮೊದಲೇ ಮನೆಯಲ್ಲಿ ಅವನ ಶಿಕ್ಷಣ ಪ್ರಾರಂಭವಾಗಿತ್ತು. ಮೊತ್ತ ಮೊದಲು ಅವನಿಗೆ ಕಲಿಸಿದ ಶಿಕ್ಷಕರಲ್ಲಿ ಮುಖ್ಯನಾದವ ಟಾಮಸ್ ಯಂಗ್. ಮಿಲ್ಟನ್ನನಿಗೆ ತನ್ನ ತಂದೆಯ ಬಗ್ಗೆ ಇದ್ದಷ್ಟು ಗೌರವ ಯಂಗನ ಬಗೆಗೂ ಇದ್ದಿತು. ಅಷ್ಟೊಂದು ಪ್ರಭಾವವನ್ನು ಯಂಗ್ ಅವನ ಮೇಲೆ ಬೀರಿದ್ದ. ಮಿಲ್ಟನ್ನ ನಲ್ಲಿ ಕೊನೆಯವರೆಗೂ ಬೇರೂರಿದ್ದ ಕ್ರೈಸ್ತ ಧರ್ಮಾಧಿಕಾರಿ ಗಳ ವಿಷಯಕ ದ್ವೇಷಕ್ಕೆ ಯಂಗನೇ ಬಹುಮಟ್ಟಿಗೆ ಕಾರಣ ನೆಂದು ಕೆಲವರ ಅಭಿಪ್ರಾಯವಾಗಿದೆ.

ಲಂಡನ್ನಿನ ಪ್ರಸಿದ್ಧ ಶಾಲೆಯಾದ ಸೇಂಟ್ ಪಾಲ್ಸ್ ಸ್ಕೂಲಿನಲ್ಲಿ ಮಿಲ್ಟನ್ನನ ವಿದ್ಯಾಭ್ಯಾಸ ಮುಂದುವರಿಯಿತು. ಅಲೆಕ್ಸಾಂಡರ್ ಗಿಲ್ ಎಂಬ ವಿದ್ವಾಂಸರು ಅಲ್ಲಿ ಆಗ ಮುಖ್ಯಾಧ್ಯಾಪಕರಾಗಿದ್ದರು- ಅವರ ಸಾಹಿತ್ಯಪ್ರೇಮ ಮಿಲ್ಟನ್ನ ನಲ್ಲಿಯೂ ಅಚ್ಚಳಿಯದಂತೆ ಮೂಡಿಬಂದಿತು. ಮಿಲ್ಟನ್ ಮೊದಲಿನಿಂದಲೂ ಗಂಭೀರ ಸ್ವಭಾವದವನು. ಜ್ಞಾನಾರ್ಜ ನೆಯ ಹಿರಿಯಾಶೆ ಅವನಲ್ಲಿ ಮೊದಲಿನಿಂದಲೂ ಬಲಗೊಂಡಿತ್ತು. "ನಾನು ಹನ್ನೆರಡು ವರ್ಷದ ವಯಸ್ಸಿನವನಾದಾಗಿನಿಂದ

ಮಧ್ಯರಾತ್ರಿಯ ಮೊದಲು ಅಭ್ಯಾಸವನ್ನು ನಿಲ್ಲಿಸಿದ್ದುದು ಅಥವಾ ಮಲಗಿದ್ದುದು ಬಹಳ ಅಪರೂಪ" ಎಂದು ಕವಿ ತಾನೇ ಬರೆದಿದ್ದಾನೆ. ಶಾಲೆಯಲ್ಲಿದ್ದಾಗ ಮಿಲ್ಟನ್ನನಿಗೆ ಅವನ ಜೀವನದಲ್ಲಿಯೇ ಅತ್ಯಂತ ಆತ್ಮೀಯನಾದ ಚಾರ್ಲ್ಸ್ ಡಾಯೋಡಾಟಿಯ ಪರಿಚಯವಾಯಿತು. ಡಾಯೋಡಾಟಿಯಲ್ಲಿ ಮಿಲ್ಟನ್ನನಿಗೆ ಯಾರಲ್ಲಿಲ್ಲದ ನಂಬುಗೆ ಮತ್ತು ವಿಶ್ವಾಸ. ತನ್ನ ಜೀವನದ ಆಶೆ-ಆಕಾಂಕ್ಷೆಗಳನ್ನೆಲ್ಲ ಅವನೆದುರು ಬಿಚ್ಚಿಡುವುದು ಅವನಿಗೆ ಅಭ್ಯಾಸವಾಗಿದ್ದಿತು. ಮುಂದೆ ತನ್ನ ವಯಸ್ಸಿನ ಮೂವತ್ತನೆಯ ವರುಷದಲ್ಲಿ ಡಾಯೋಡಾಟಿ ತೀರಿಕೊಂಡಾಗ ಮಿಲ್ಟನ್ನನಿಗಾದ ದುಃಖ ಅಷ್ಟಿಷ್ಟಲ್ಲ. **ಎಪಿಟಾಫಿಯಮ್ ಡಾಮೋನಿಸ್** ಎಂಬ ಹೆಸರಿನ ಸುಂದರವಾದ ಲ್ಯಾಟಿನ್ ಕವಿತೆಯಲ್ಲಿ ಅವನ ನೋವು ಕಾವ್ಯರೂಪದಲ್ಲಿ ಹೊರಹೊಮ್ಮಿದುದನ್ನು ನಾವು ಕಾಣುತ್ತೇವೆ.

೧೬೨೫ ರ ಫೆಬ್ರುವರಿ ೧೨ ರಂದು ಮಿಲ್ಟನ್ ಉಚ್ಚ ಶಿಕ್ಷಣಕ್ಕಾಗಿ ಕೇಂಬ್ರಿಜ್‌ದ ಕ್ರೈಸ್ತ ಕಾಲೇಜನ್ನು ಸೇರಿದ. ಸುಮಾರು ಏಳೂವರೆ ವರ್ಷ, ಎಂದರೆ ೧೬೩೨ ರ ಜುಲೈ ೩ ರಂದು ಎಂ. ಎ. ಪದವಿಯನ್ನು ಸಂಪಾದಿಸುವವರೆಗೆ, ಅಲ್ಲಿಯೇ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿದ. ೧೬ ವರುಷಗಳ ನಂತರ ತನ್ನ ಕಾಲೇಜು ಜೀವನದ ಬಗ್ಗೆ ಬರೆಯುತ್ತ ಮಿಲ್ಟನ್ ತನ್ನನ್ನು ತನ್ನ ಗುರುಗಳು ಪ್ರೀತಿಗೌರವಗಳಿಂದ ಕಾಣುತ್ತಿದ್ದರೆಂದೂ, ಎಂ. ಎ. ಪದವಿಯನ್ನು

ದೊರಕಿಸಿದ ನಂತರವೂ ತಾನು ಕಾಲೇಜಿನಲ್ಲಿಯೇ ಉಳಿಯ ಬೇಕೆಂದು ಬಯಸಿದರೆಂದೂ ಹೇಳಿದ್ದಾನೆ. ಇದು ನಿಜವಾದರೂ ೧೬೨೬ ರಲ್ಲಿ ಒಂದು ಟರ್ಮಿನಷ್ಟು ಕಾಲ ಮಿಲ್ಟನ್ ಕಾಲೇಜಿ ನಿಂದ ಹೊರಗೆ ಹೋಗಬೇಕಾಯಿತು. ಇದರ ಕಾರಣ ತನ್ನ ಟ್ಯೂಟರ್‌ನೊಂದಿಗೆ ಮಿಲ್ಟನ್ ಅವಿಧೇಯತೆಯಿಂದ ನಡೆದು ಕೊಂಡುದೇ ಇರಬೇಕೆಂದು ತರ್ಕಿಸಲಾಗಿದೆ. ಸ್ವತಂತ್ರ ವಿಚಾರದವನಾದ ಮತ್ತು ಸ್ವತಃ ವಿದ್ವಾಂಸನಾದ ಮಿಲ್ಟನ್ನನು ತನ್ನ ಟ್ಯೂಟರನಲ್ಲಿ ಕುಂದುಕೊರತೆಗಳನ್ನು ಕಂಡಿರಬೇಕು. ಮತ್ತು ಆ ಟ್ಯೂಟರನು ಮಿಲ್ಟನ್ನನ ಸ್ವಭಾವವನ್ನು ಅರಿತು ಕೊಳ್ಳಲು ಅಸಮರ್ಥನಾಗಿರಬೇಕು. ಇಲ್ಲವಾದರೆ ಈ ಕಟು ಅನುಭವಕ್ಕೆ ಆಸ್ಪದವಿರುತ್ತಿರಲಿಲ್ಲವೆಂದು ತೋರುತ್ತದೆ. ಕಾಲೇಜು ಜೀವನದಲ್ಲಿಯ ಇಂತಹ ತೊಂದರೆಗಳು ಮಿಲ್ಟನ್ನ ನನ್ನು ಕಾಡಿದಂತೆ ಇನ್ನಿತರ ಕೆಲ ಪ್ರತಿಭಾವಂತ ಸಾಹಿತಿ ಗಳನ್ನೂ ಕಾಡಿದುದನ್ನು ನಾವು ನೋಡುತ್ತೇವೆ. ೧೮ ನೆಯ ಶತಮಾನದ ಇಂಗ್ಲಂಡಿನ ಪ್ರಸಿದ್ಧ ಸಾಹಿತಿಯಾದ ಡಾ. ಜಾನ್‌ಸನ್ನನಿಗೂ ಕೂಡ ಇದೇ ರೀತಿಯ ಅನುಭವ ಬಂದಿತು. ಅದೇ ಮೇರೆಗೆ ೧೯ ನೆಯ ಶತಮಾನದಲ್ಲಿ ಆಗಿಹೋದ ಕವಿ ಶೆಲೆ ಕಾಲೇಜಿನಿಂದ ಹೊರದೂಡಲ್ಪಟ್ಟನು.

ದೈಹಿಕ ಮತ್ತು ಮಾನಸಿಕ ಪಾವಿತ್ರ್ಯಕ್ಕೆ ಮಿಲ್ಟನ್ ಚಿಕ್ಕಂದಿನಿಂದಲೂ ಹೆಚ್ಚಿನ ಮಹತ್ವವನ್ನು ಕೊಡುತ್ತ ಬಂದಿ ದ್ದನು. ಕಾಲೇಜಿನಲ್ಲಿದ್ದಾಗ ಉಳಿದ ತರುಣರಂತೆ ಮದ್ಯ ಕುಡಿಯುವದೇ ಮೊದಲಾದ ವಿಲಾಸ ಜೀವನವನ್ನನುಸರಿಸದೆ

ಬಹು ಸಂಯಮದಿಂದ ಜೀವನವನ್ನು ನಡೆಯಿಸಿದ್ದನು. ಇದರಿಂದಾಗಿ ಮತ್ತು ಸುಂದರ ಮೈಬಣ್ಣ ಅವನಿಗಿದ್ದುದ ರಿಂದ ಕಾಲೇಜಿನಲ್ಲಿ ಅವನನ್ನು 'ಲೇಡಿ' ಎಂದು ಕರೆದು ಹಾಸ್ಯ ಮಾಡುತ್ತಿದ್ದರು. ಇದು ಮಿಲ್ಟನ್ನನನ್ನು ಸಾಕಷ್ಟು ನೋಯಿಸಿರಬೇಕು; ಏಕೆಂದರೆ, ತನ್ನ ಇಪ್ಪತ್ತನೆಯ ವಯಸ್ಸಿ ನಲ್ಲಿ, ಕಾಲೇಜಿನ ಪರಿಪಾಠದಂತೆ, ಉಳಿದ ವಿದ್ಯಾರ್ಥಿಗಳನ್ನು ದ್ದೇಶಿಸಿ ಮಾತನಾಡುವಾಗ ಈ ತರಹದ ಟೀಕೆಗಳನ್ನು ಮಿಲ್ಟನ್ ಬಲವಾಗಿ ಪ್ರತಿಭಟಿಸಿದ್ದುಂಟು.

ಮಿಲ್ಟನ್ನನ ಭಾವೀ ಜೀವನವನ್ನು ರೂಪಿಸುವಲ್ಲಿ ಅವನ ಕಾಲೇಜು ದಿನಗಳು ಮಹತ್ವದ ಪಾತ್ರವನ್ನು ವಹಿಸಿದವು. ಏಕೆಂದರೆ, ಅವನು ಕಾಲೇಜಿನಲ್ಲಿ ದೊರಕಿಸಿದ ಶಿಕ್ಷಣ ಮತ್ತು ಗೈದ ಪರಿಶ್ರಮ ಮುಂಬರುವ ಸಾಹಿತ್ಯಸೃಷ್ಟಿಯ ಭದ್ರವಾದ ಅಡಿಗಲ್ಲಾಗಿ ನಿಂತುಕೊಂಡವು. ಇದಲ್ಲದೆ, ಅವನ ಬಾಳಿಗೆ ಬೆಳಕನ್ನು ನೀಡಿದ ಮಹಾನ್ ಧ್ಯೇಯಗಳು ಜಾಗ್ರತ ಗೊಂಡುದೂ ಇಲ್ಲಿಯೇ. ಎಂ. ಎ. ಪದವಿಯನ್ನು ಸಂಪಾ ದಿಸಿ ಕೇಂಬ್ರಿಜ್ ಬಿಡುವ ಮೊದಲೇ ಅದೆಷ್ಟೋ ಮಹತ್ವದ ನಿರ್ಣಯಗಳನ್ನು ಮಿಲ್ಟನ್ ಕೈಕೊಂಡಿದ್ದ. ಮುಂದೆ ತಾನು ಸೃಷ್ಟಿಸಲಿರುವ ಮಹಾಕೃತಿಯ ವಸ್ತುವಾವುದಿರಬೇಕು ಎನ್ನುವ ಪ್ರಶ್ನೆಯೂ ಅವನೆದುರು ಆಗಲೇ ನಿಂತಿತ್ತು. ತಾನೊಬ್ಬ ಮಹಾಕವಿಯಾಗಬೇಕು; ಹಾಗಾಗಬೇಕೆಂದೇ ದೈವಸಂಕಲ್ಪವಿದೆ ಎಂದು ಅವನಿಗೆ ಆಗಲೆ ಮನವರಿಕೆಯಾಗಿತ್ತು. ಅದರ ಜೊತೆಗೆ, ಅಂತಹ ಮಹತ್ಸಾಧನೆಗೆ ಅನಂತವಾದ ಸಿದ್ಧತೆಯು

ಅವಶ್ಯಕತೆಯಿದೆ ಎನ್ನುವುದರ ಅರಿವೂ ಅವನಲ್ಲಿ ಚೆನ್ನಾಗಿ ಮೂಡಿದ್ದಿತು. ಕವಿಯಾಗುವದಕ್ಕೆ ಎಂತಹ ಯೋಗ್ಯತೆಯಿರಬೇಕೆನ್ನುವವನ್ನೂ ಅವನು ಬಹು ಚೆನ್ನಾಗಿ ತಿಳಿದುಕೊಂಡಿದ್ದ. ಕವಿಯಾಗಬೇಕಾದವನು ಭಾಷೆ-ಸಾಹಿತ್ಯಗಳ ನಿಕಟವಾದ ಪರಿಚಯವುಳ್ಳವನಲ್ಲದೆ ಪರಿಶುದ್ಧ ಜೀವನವನ್ನು ನಡೆಯಿಸುವಂತಹನೂ ಆಗಿರಬೇಕು ಎಂಬುದು ಮಿಲ್ಟನ್ನನ ನಂಬುಗೆಯಾಗಿದ್ದಿತು. "ಒಳ್ಳೆಯ ಲೇಖಕನಾಗಲಿಚ್ಛಿಸುವವನು ತಾನೇ ಒಂದು ನಿಜವಾದ ಕಾವ್ಯದಂತಿರಬೇಕು. ಎಂದರೆ, ಅವನಲ್ಲಿ ಉತ್ತಮೋತ್ತಮವಾದ ಕೀರ್ತಿಕರವಾದ ಗುಣಗಳು ಕೂಡಿಕೊಂಡಿರಬೇಕು." ಎಂದು ತನ್ನದೊಂದು ಕೃತಿಯಲ್ಲಿ ಮಿಲ್ಟನ್ ವಿವರಿಸಿದ್ದಾನೆ. ಅವನ ಈ ವ್ಯಾಖ್ಯೆ ಉತ್ತಮ ಕವಿ ಮತ್ತು ಉತ್ತಮ ಕಾವ್ಯ ಇವುಗಳ ಬಗ್ಗೆ ಅವನು ಬೆಳೆಯಿಸಿಕೊಂಡು ಬಂದಿದ್ದ ಭವ್ಯ ಕಲ್ಪನೆಯನ್ನು ಬಹಳ ಮನೋಹರವಾಗಿ ಚಿತ್ರಿಸುತ್ತದೆ.

ಮಿಲ್ಟನ್ನನ ಸಾಹಿತ್ಯಸೃಷ್ಟಿಯ ನಾಂದಿಯೂ ಅವನ ಕಾಲೇಜು ಜೀವನದಲ್ಲಿಯೇ ಆಯಿತೆಂದು ಹೇಳಬೇಕು. ತನ್ನ ವಯಸ್ಸಿನ ೧೫ ನೆಯ ವರುಷದಲ್ಲಿಯೇ ಲ್ಯಾಟಿನ್ ಭಾಷೆಯಲ್ಲಿ ಮಿಲ್ಟನ್ ಕಾವ್ಯವನ್ನು ರಚಿಸಿದನೆಂದು ಹೇಳಲಾಗುತ್ತಿದ್ದರೂ ೧೬೨೯ ರಲ್ಲಿ ಅವನು ಬರೆದು ಮುಗಿಸಿದ "**ಕ್ರೈಸ್ತನ ಜನ್ಮದಿನದ ಮುಂಜಾವಿನಲ್ಲಿ**" ಎಂಬ ಅವನ ಇಂಗ್ಲಿಶ್ ಕವಿತೆಯೆ ಅವನ ಮೊತ್ತಮೊದಲಿನ ಮಹತ್ವದ ಕೃತಿಯೆಂದು ಒಪ್ಪಲಾಗುತ್ತಿದೆ. ಈ ಕವಿತೆಯನ್ನು ಇಂಗ್ಲಿಶ್ ಭಾಷೆಯಲ್ಲಿಯ ಸುಂದರವಾದ ಕವಿತೆಗಳಲ್ಲೊಂದು ಎಂದು ಪರಿ

ಗಣಿಸಲಾಗುತ್ತಿದೆ. ಈ ಕವಿತೆಯ ಪ್ರಸ್ತಾವನೆಯಲ್ಲಿ ಕವಿ ದೇವಪುತ್ರ ಕ್ರೈಸ್ತನು ಮನುಷ್ಯನ ಉದ್ಧಾರಕ್ಕೋಸ್ಕರ ದೇದೀಪ್ಯಮಾನವಾದ ತನ್ನ ಲೋಕವನ್ನು ಬಿಟ್ಟು ಭೂಮಿಗಿಳಿದು ಬರುವ ಶುಭಮೂಹೂರ್ತದಲ್ಲಿ ಅವನಿಗೆ ತನ್ನ ಕಾವ್ಯದ ಕಾಣಿಕೆಯನ್ನಿತ್ತು ಸ್ವಾಗತ ಬಯಸುತ್ತಾನೆ. ನಂತರ ಕ್ರೈಸ್ತನ ಅವತಾರದ ವೇಳೆಗೆ ಜಗತ್ತಿನ ತುಂಬೆಲ್ಲ ಹಬ್ಬಿದ ದಿವ್ಯಶಾಂತಿಯ ವರ್ಣನೆಯನ್ನಿತ್ತು ಆಗ ದೇವತೆಗಳ ಕಂಠಗಳಿಂದ ಹೊರಹೊಮ್ಮಿದ ಆನಂದದ ಸಂಗೀತ ಹೇಗಿತ್ತೆಂಬುದನ್ನು ಚಿತ್ರಿಸುತ್ತಾನೆ. ಹಿಂದೆಂದೂ ಕೇಳಿಬರದ ಆ ದಿವ್ಯ ಗಾನಸುಧೆಯನ್ನು ಸವಿದು ಪ್ರಕೃತಿ, ಸ್ವರ್ಗ ಮತ್ತು ಭೂಮಿಗಳು ಒಂದಾಗುವ ದಿನಗಳು ಬಂದವೆಂದು ನಲಿದಾಡುತ್ತಾನೆ. ಆದರೆ ಕೊನೆಯ ತೀರ್ಪಿನ ದಿನ (Judgment Day) ಬರುವವರೆಗೆ ಹಾಗಾಗುವದು ಸಾಧ್ಯವಿಲ್ಲವೆನ್ನುವುದು ಕವಿಗೆ ಗೊತ್ತಿದೆ. ಎಂತಲೇ ಕ್ರೈಸ್ತನ ಉದಯದಲ್ಲಿ ಮುಂಬರುವ ವೈಭವದ ಒಂದು ಹೊಂಗನಸನ್ನು ಕಂಡು ಅವನು ಸಮಾಧಾನ ಹೊಂದುತ್ತಾನೆ.

ಈ ಕವಿತೆಯಲ್ಲದೆ ಇನ್ನೂ ಕೆಲವು ಚಿಕ್ಕ ಕವಿತೆಗಳನ್ನೂ ಮಿಲ್ಟನ್ ತನ್ನ ಕಾಲೇಜು ದಿನಗಳಲ್ಲಿ ಬರೆದನು. ಆದರೂ ಮಿಲ್ಟನ್ನನಿಗೆ ತನ್ನ ಸಾಧನೆಯ ಬಗೆಗೆ ಸಮಾಧಾನವಿರಲಿಲ್ಲ. “ತನ್ನ ಆಯುಷ್ಯ ವೇಗದಿಂದ ಹಾರಿಹೋಗುತ್ತಿದೆ; ಆದರೆ ತನ್ನ ಬಾಳಿನ ತೋಟದಲ್ಲಿ ವಸಂತನ ಆಗಮನವಿಲ್ಲ; ಮೊಗ್ಗುಗಳಿಲ್ಲ; ಹೂವುಗಳಿಲ್ಲ” ಎಂದು ಮುಂತಾಗಿ ತನ್ನ ಚಿಂತೆಯನ್ನವನು ಮನೋವೇದಕವಾಗಿ ಚಿತ್ರಿಸಿದ್ದಾನೆ.

೪. ಹಾರ್ಟನ್ ದಿನಗಳು

ಮಿಲ್ಟನ್ನನು ಕಾಲೇಜಿನಿಂದ ಮರಳಿದ ವರ್ಷವೇ ಅವನ ತಂದೆ ತನ್ನ ವ್ಯವಸಾಯದಿಂದ ನಿವೃತ್ತನಾಗಿ ಬಕಿಂಗ ಹ್ಯಾಮ್‌ಶಯರಿನಲ್ಲಿಯ ಹಾರ್ಟನ್ ಎಂಬ ಹಳ್ಳಿಯಲ್ಲಿ ನೆಲೆಸಿದನು. ಮುಂದಿನ ಐದು ವರ್ಷಗಳಷ್ಟು ಕಾಲ ಮಿಲ್ಟನ್ ಅಲ್ಲಿಯೇ ಇದ್ದು ತನ್ನ ಸಾಹಿತ್ಯಾಭ್ಯಾಸವನ್ನು ಮುಂದು ವರಿಸಿದನು. ಅವನ ತಂದೆಗೆ ಮೊದಮೊದಲು ಇದು ರುಚಿಸ ಲಿಲ್ಲ. ತನ್ನ ಮಗ ಧರ್ಮಗುರುವೆಂದಾಗಲಿ ಅಥವಾ ವಕೀಲ ನೆಂದಾಗಲಿ ಯಾವದೊಂದು ಮಹತ್ವದ ವೃತ್ತಿಯನ್ನಾಶ್ರಯಿಸ ಬೇಕೆಂದು ಅವನ ಇಚ್ಛೆಯಿತ್ತು. ಆದರೆ ಯಾವುದಕ್ಕೂ ಅವನು ಬಲವಂತ ಮಾಡಲಿಲ್ಲ. ಇದು ಅವನ ದೊಡ್ಡ ಮನಸ್ಸು.

ಈ ಐದು ವರುಷಗಳಷ್ಟು ಕಾಲ ಮಿಲ್ಟನ್ ಗೈದ ಕೃಷಿ ಅಸ್ಟಿಷ್ಟಲ್ಲ. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿಯ ಮಹಾಕೃತಿಗಳನ್ನವನು ಆಳವಾಗಿ ಅಭ್ಯಸಿಸಿದ. ಗಣಿತ ದಂತಹ ಹೊಸ ವಿಷಯಗಳಲ್ಲಿ ಆಸ್ಥೆವಹಿಸಿ ಅವುಗಳ ಪರಿಚಯ ಮಾಡಿಕೊಂಡ. ಸಂಗೀತದಲ್ಲಿದ್ದ ಅಭಿರುಚಿಯನ್ನು ಬೆಳೆಯಿಸಿ ಕೊಂಡ. ಇವಲ್ಲದೆ, ಇಟಾಲಿಯನ್ ಸಾಹಿತ್ಯ, ಇತಿಹಾಸ ಮತ್ತು ತತ್ವಜ್ಞಾನಗಳಲ್ಲಿಯೂ ಶ್ರಮಿಸಿದ. ಅವನ ಈ ಪರಿಶ್ರಮವನ್ನು ಲಕ್ಷಿಸಿ ಹಚಿನ್ಸನ್‌ರವರು “ಮಿಲ್ಟನ್ನನು

ತನ್ನ ಜೀವನಕಾರ್ಯಕ್ಕಾಗಿ ಶ್ರಮಿಸುವವರಲ್ಲಿ ತೋರಿದ ತಾಳ್ಮೆ ಮತ್ತು ಪರಿಪೂರ್ಣತೆಗಳನ್ನು ಮತ್ತಾವ ಕವಿಯೂ ತೋರಿಲ್ಲ" ಎಂದು ಬರೆದಿದ್ದಾರೆ. ಈ ಅವಧಿಯಲ್ಲಿ ಮಿಲ್ಟನ್ ರಚಿಸಿದ ಕಾವ್ಯಕೃತಿಗಳಲ್ಲಿ ಮುಂದಿನವುಗಳು ಮುಖ್ಯವಾಗಿವೆ :

ಲಾಲೆಗ್ರೊ (L'Allegro), **ಇಲ್ ಪೆನ್ಸೊರೋಜೊ** (Il Pensoroso), **ಕೋಮಸ್** (Comus) ಮತ್ತು **ಲಿಸಿಡಾಸ್** (Lycidas) ಈ ಕೃತಿಗಳು ಮಿಲ್ಟನ್ನನ ಸಾಹಿತ್ಯ ಸೃಷ್ಟಿಯಲ್ಲಿಯೇ ಅತ್ಯಂತ ಮನೋಹರವಾದವುಗಳು ಎಂದು ವಿಮರ್ಶಕ ಜಾನ್ ಬೇಲಿಯುವರ ಅಭಿಪ್ರಾಯವಾಗಿದೆ. ಮಿಲ್ಟನ್ ಒಂದು ವೇಳೆ **ಪ್ಯಾರಡೈಜ ಲಾಸ್ಟನ್ನು** ರಚಿಸಿರದಿದ್ದರೂ ಕೂಡ ಕೇವಲ ಈ ಕೃತಿಗಳ ಆಧಾರದಿಂದಲೇ ಇಂಗ್ಲಿಶ್ ಕಾವ್ಯದ ಇತಿಹಾಸದಲ್ಲಿ ಅಜರಾಮರವಾದ ಕೀರ್ತಿಯನ್ನು ಅವನು ಗಳಿಸಬಹುದಿತ್ತು ಎಂದು ಇನ್ನೊಬ್ಬ ವಿಮರ್ಶಕರು ನುಡಿದಿದ್ದಾರೆ.

ಇವುಗಳಲ್ಲಿ **ಲಾಲೆಗ್ರೊ** ಮತ್ತು **ಇಲ್ ಪೆನ್ಸೊರೋಜೊ** ಒಂದು ಜೋಡಿ; ಪರಸ್ಪರ ಪೂರಕಗಳು. ಅವುಗಳ ರಚನೆಯಲ್ಲಿ ಅನೇಕ ಸಾಮ್ಯಗಳನ್ನು ನಾವು ಕಾಣುತ್ತೇವೆ. ವಸ್ತುವಿನಲ್ಲಿಯೂ ಏಕರೂಪತೆಯಿದೆ. ಎರಡೂ ಪ್ರಕೃತಿಯ ವರ್ಣನೆಗಳೆ. ಆದರೆ **ಲಾಲೆಗ್ರೋ**ದಲ್ಲಿ ಪ್ರಕೃತಿಯನ್ನು ನೋಡುವ ಕಣ್ಣು ಮನಸ್ಸುಗಳು ಆನಂದದಿಂದ ತುಂಬಿದ್ದರೆ **ಇಲ್ ಪೆನ್ಸೊರೋಜೊ**ದಲ್ಲಿ ಅವುಗಳನ್ನು ಒಂದು

ವಿಧವಾದ ಗಾಂಭೀರ್ಯ, ಧ್ಯಾನ ಆವರಿಸಿದಂತಿವೆ ಜೀವನ ವನ್ನು ಕಾಣುವ ಎರಡು ಮುಖ್ಯ ದೃಷ್ಟಿಗಳನ್ನು ಕವಿ ಇಲ್ಲಿ ಚಿತ್ರಿಸಿರುವನ್ನು ನಾವು ಕಾಣುತ್ತೇವೆ. ಪಾಶ್ಚಾತ್ಯ ಅಭಿಜಾತ ಸಾಹಿತ್ಯದಲ್ಲಿ ಮಿಲ್ಟನ್ನನಿಗಿದ್ದ ಪರಿಣತಿಯ ಒಂದು ಝಳಕೂ ಇಲ್ಲಿ ನಮಗೆ ತೋರಿಬರುತ್ತದೆ. ಇದಲ್ಲದೆ ಈ ಕೃತಿಗಳ ಬಂಧ ಲಯಗಳಲ್ಲಿ ಮಿಲ್ಟನ್ನನ ಕವಿತ್ವದಲ್ಲಿ ಹಾಸು-ಹೊಕ್ಕಾಗಿ ಸೇರಿಕೊಂಡ ಸಂಗೀತದ ಪ್ರಭಾವವೂ ಸ್ಪಷ್ಟವಾಗಿ ಮೂಡಿಬಂದಿದೆ.

'ಲಾಲೆಗ್ರೊ' ದಲ್ಲಿ ಕವಿಯು ಹರುಷದೇವತೆಗೆ ಸ್ವಾಗತ ವನ್ನು ಬಯಸಿದ್ದಾನೆ. ಅವಳೊಡನೆ ಅವಳ ಪರಿವಾರವಾದ ಹಾಸ್ಯ, ಲೀಲೆ, ಸಂತೋಷ ಮೊದಲಾದವಕ್ಕೂ ಸ್ವಾಗತವಿದೆ. ಅವಳ ಆಗಮನದ ಕಾಲ ಬೆಳಗಿನ ಮುಂಜಾವು; ಪ್ರಕೃತಿ ಯಲ್ಲೆಲ್ಲಿ ಆನಂದ ತುಂಬಿರುವ ಸಮಯ ಹಕ್ಕಿಗಳ ಸಹಜ ಗಾನ, ಹೂ-ಬಳ್ಳಿಗಳ ಚೆಲುವು ಹೃದಯವನ್ನು ತುಂಬಿಸು ವಂಥದು. ಮುಂದೆ ಹೊತ್ತೇರಿದಂತೆ ದೃಶ್ಯ ಬದಲಾಗುತ್ತದೆ. ರೈತರು ಪ್ರಕೃತಿಯ ಮಡಿಲಲ್ಲಿ ಅವಳ ಮಕ್ಕಳಾಗಿ ದುಡಿಯು ತ್ತಿರುವದನ್ನು, ದುಡಿದನಂತರ ದಣಿದು ಊಟಮಾಡುವದನ್ನು, ಮತ್ತೆ ವಿರಾಮದ ದಿನವಿದ್ದರೆ ಅವರಲ್ಲಿಯ ತರುಣ ತರುಣಿ ಯರು ಮೇಳೈಸಿ ಕುಣಿಯುತ್ತಿರುವದನ್ನು ನಾವು ಕಾಣು ತ್ತೇವೆ. ಸಂಧ್ಯಾಕಾಲ ಸಮೀಪಿಸಲು ನಮ್ಮೆದುರಿನ ನೋಟ ಮತ್ತೊಮ್ಮೆ ಬದಲಾಗುತ್ತದೆ. ಆಗ ನಾವು ಕಾಣುವುದು ಹಳ್ಳಿಯ ಜೀವನದಲ್ಲಿ ಸಾಮಾನ್ಯವಾಗಿ ನೋಡಸಿಗುವ

ಮನೋರಂಜನೆಯ ದೃಶ್ಯ,—ಹಳ್ಳಿಗರು ಒಟ್ಟುಗೂಡಿ ಕಥೆಗಳನ್ನು ಕೇಳುವುದು, ಗುಡಿಸಲುಗಳಲ್ಲಿ ಪಾನೀಯಗಳನ್ನು ಸೇವಿಸುವುದು ಮುಂತಾಗಿ. ಅಲ್ಲಿಗೆ ಈ ಸಂತಸದ ಉತ್ಸವ ಆ ದಿನದ ಮಟ್ಟಿಗೆ ಕೊನೆಗೊಳ್ಳುತ್ತದೆ.

'ಲಾಲೆಗ್ರೊ' ದಲ್ಲಿ ಆನಂದಸ್ಪಂದನವನ್ನು ನಾವು ಅನುಭವಿಸಿದರೆ **'ಇಲ್ ಪೆನ್ಸೊರೋಜೊ'** ದಲ್ಲಿ ಗಾಂಭೀರ್ಯದ ಧ್ಯಾನ ಸ್ಥಿತಿಯ ಒಂದು ಅನುಭವ ನಮಗೆ ಸಿಗುತ್ತದೆ. ಇಲ್ಲಿ ಹರುಷದೇವತೆಗೆ ಸ್ಥಾನವಿಲ್ಲ. ಇಲ್ಲಿ ಸ್ವಾಗತ ದೊರೆಯುವದು ಧ್ಯಾನದೇವತೆಗೆ. ಅವಳ ಪರಿವಾರ ಶಮೆ, ದಮೆ, ವಿರಾಮ ಮತ್ತು ಚಿಂತನೆ; ಅವಳ ಆಗಮನದ ವೇಳೆ ಸಂಜೆ. ಆಗಾಗ ಕೇಳಬರುವ ನೈಟಿಂಗೇಲ ಪಕ್ಷಿಯ ಹಾಡು, ಸಂಜೆಯ ಗಂಟೆಯ ನಾದ ಇವುಗಳನ್ನು ಬಿಟ್ಟರೆ ಎಲ್ಲೆಲ್ಲಿಯೂ ನಿಶ್ಶಬ್ದತೆ. ಮುಂದೆ, ಪ್ರಶಾಂತವಾದ ವಾತಾವರಣದ ನಡುವೆ ಧ್ಯಾನಸ್ಥನಾಗಿ ಅಥವಾ ಬಿಚ್ಚನ್ನ ಕೋಣೆಯಲ್ಲಿ ಉರಿಯುತ್ತಿರುವ ಅಗ್ನಿಯೆದುರು ಕುಳಿತು ತತ್ವಚಿಂತನೆಯಲ್ಲಿ ನಿರತನಾಗಿರುವ ಸಾಧಕನ ಚಿತ್ರ ನಮ್ಮ ಕಣ್ಣೆದುರು ಬರುತ್ತದೆ. ನಂತರ ಬೆಳಗಿನ ನೋಟ. ಆದರೆ ಈ ಬೆಳಗು ಸ್ವಚ್ಛವಾದ ಆನಂದತುಂದಿಲವಾದ ಬೆಳಗಲ್ಲ. ಆಕಾಶದಲ್ಲಿ ಮೋಡಗಳು ಮುಸುಕಿವೆ. ಗಾಳಿಗೆ ಗಿಡಗಳು ಕಂಪಿಸುತ್ತಿವೆ. ರಾತ್ರಿಯಲ್ಲಿ ಒಟ್ಟುಗೂಡಿದ ಮಳೆ ಹನಿಗಳು ಒಂದೊಂದಾಗಿ ಕೆಳಬೀಳುತ್ತಿವೆ. ಹೊತ್ತೇರಿದಂತೆ ಮತ್ತೆ ದೃಶ್ಯ ಬದಲಾಗುತ್ತದೆ. ಜಲಪ್ರಪಾತಗಳ ಬಳಿ ಹಾಯಾಗಿ

ಒರಗಿಕೊಂಡು ವಿಶ್ರಾಂತನಾದ ಪ್ರೇಕ್ಷಕ ನಮ್ಮೆದುರಿಗಿದ್ದಾನೆ. ಆವನ ಹೃದಯದಲ್ಲಿ ದಿವ್ಯಸಂಗೀತ ಮಿಡಿಯುತ್ತಿದೆ. ಆ ಅನುಭವದಿಂದ ಆಕರ್ಷಿತನಾದ ಆತ ಅದನ್ನೇ ಚಿಂತಿಸುತ್ತಿ ಧ್ಯಾನಸ್ಥನಾಗುತ್ತಾನೆ.

ಕೋಮಸ್ (Comus), ಮಾಸ್ಕ್ (Masque) ಎಂಬ ವಿಶಿಷ್ಟ ನಾಟ್ಯಪ್ರಕಾರಕ್ಕೆ ಸೇರಿದ್ದು. ಇದನ್ನು ಮಿಲ್ಟನ್‌ನಿಂದ ಬರೆಯಿಸಿದವನು ಅವನ ಗೆಳೆಯನಾದ ಮತ್ತು ಪ್ರಸಿದ್ಧ ಸಂಗೀತಜ್ಞನಾದ ಹೆನ್ರಿ ಲಾಜ್ ಎಂಬವನು. ೧೬೩೪ ರ ಸೆಪ್ಟಂಬರ ೨೯ ರಂದು ಲಡ್ಲೋ ಕಾಸಲ್ ಎಂಬಲ್ಲಿ ಅರ್ಲ್ ಆಫ್ ಬ್ರಿಜ್‌ವಾಟರ್‌ರವರು ಲಾರ್ಡ ಪ್ರೆಸಿಡೆಂಟ್ ಆಫ್ ವೇಲ್ಸ್ ಎಂದು ಅಧಿಕಾರ ಗ್ರಹಣ ಮಾಡುವ ಸುಸಮಯದಲ್ಲಿ ಇದನ್ನು ಪ್ರಥಮತಃ ಪ್ರದರ್ಶಿಸಲಾಯಿತು. ಈ ಗೀತನಾಟಕಕ್ಕೆ ಹೆನ್ರಿ ಲಾಜ್ ಸಂಗೀತವನ್ನು ಒದಗಿಸಿದ್ದಲ್ಲದೆ ಅದರಲ್ಲಿ ನಟನೆಂದು ಕೂಡ ಕೆಲಸ ಮಾಡಿದನು. ಅರ್ಲ್ ಆಫ್ ಬ್ರಿಜ್‌ವಾಟರರ ಮಕ್ಕಳಾದ ಲೇಡಿ ಎಲಿಸ್ ಎಗರ್ಟನ್, ವ್ಹಾಯ್ಕೌಂಟ್ ಬ್ರ್ಯಾಕ್ಲೆ ಮತ್ತು ಟಾಮಸ್ ಎಗರ್ಟನ್ ಇವರು ಹೆನ್ರಿ ಲಾಜ್‌ನೊಂದಿಗೆ ಈ ನಾಟಕವನ್ನು ಅಭಿನಯಿಸಿದರು.

ಈ ನಾಟಕದಲ್ಲಿ ಬರುವ ಪಾತ್ರಗಳ ವಿವರ ಹೀಗಿದೆ; **೧. ಕೋಮಸ್**. ಇಂದ್ರಿಯಲೋಲುಪನಾದ ರಾಕ್ಷಸ, ಯಕ್ಷಿಣೀ ವಿದ್ಯೆಯಲ್ಲಿ ಪರಿಣತನಾದವನು. **೨. ರಕ್ಷಕ ದೇವತೆ :** ಪರಮಾತ್ಮನ ಆಜ್ಞೆಯಂತೆ ಸ್ವರ್ಗದಿಂದಿಳಿದು ಬಂದ

ದೈವೀ ಶಕ್ತಿ. ೩. **ಈರ್ವರು ಸಹೋದರರು ಮತ್ತು ಅವರ ಸಹೋದರಿ** : ಈ ಮೂವರು ಬೇರಾರೂ ಅಲ್ಲದೆ ಅರ್ಲ್ ಆಫ್ ಬ್ರಿಜ್‌ವಾಟರರ ಮಕ್ಕಳ. ತಂದೆಯ ಅಧಿಕಾರಗ್ರಹಣಮಹೋತ್ಸವದಲ್ಲಿ ಭಾಗವಹಿಸಲು ಪ್ರವಾಸವನ್ನು ಕೈಕೊಂಡವರು.

ನಾಟಕದ ಪ್ರಾರಂಭದಲ್ಲಿ, ರಕ್ಷಕದೇವತೆ ತನ್ನ ದಿವ್ಯ ಲೋಕವನ್ನು ಬಿಟ್ಟು ಭೂಮಿಗಿಳಿದು ಬಂದುದರ ಕಾರಣವನ್ನು ತಿಳಿಸಿ ಹೇಳುತ್ತಾಳೆ. ಅರ್ಲ್ ಆಫ್ ಬ್ರಿಜ್‌ವಾಟರರ ತರುಣ ಮಕ್ಕಳು ತಮ್ಮ ತಂದೆಯ ಅಧಿಕಾರಗ್ರಹಣದ ಉತ್ಸವದಲ್ಲಿ ಭಾಗವಹಿಸಲು ಲಡ್ಲೋವಿಗೆ ಹೊರಟಿದ್ದಾರೆ ಆದರೆ ಮಾರ್ಗದಲ್ಲಿ ಅವರು ಭಯಾನಕವಾದ ಅಡವಿಯೊಂದನ್ನು ದಾಟಬೇಕಾಗುತ್ತದೆ. ಈ ಅಡವಿ ಕೋಮಸ್ ಮತ್ತು ಅವನ ಪರಿವಾರದ ವಾಸಸ್ಥಳವಾಗಿರುತ್ತದೆ. ಬ್ರಿಜ್‌ವಾಟರರ ಮಕ್ಕಳ ಪವಿತ್ರ ಜೀವನವನ್ನು ಮೆಚ್ಚಿದ ಪರಮಾತ್ಮನು ಅವರನ್ನು ಕೋಮಸ್ ರಾಕ್ಷಸನಿಂದ ರಕ್ಷಿಸಲು ಈ ದೇವತೆಯನ್ನು ಕಳುಹಿಸಿದ್ದಾನೆ.

ನಂತರ ಕೋಮಸ್ ತನ್ನ ವಿಚಿತ್ರ ಪರಿವಾರದೊಂದಿಗೆ ಆಗಮಿಸಿ ನಿರ್ಲಜ್ಜೆಯಿಂದ ನರ್ತಿಸುವದನ್ನು ನಾವು ನೋಡುತ್ತೇವೆ. ಈ ವಿಕಟ ನೃತ್ಯ ಅರ್ಧಕ್ಕೆ ನಿಲ್ಲಿಸಲ್ಪಡುತ್ತದೆ. ಏಕೆಂದರೆ ಕೋಮಸ್‌ನಿಗೆ ಅವನ ಮಂತ್ರವಿದ್ಯೆಯ ಮೂಲಕ ಸುಂದರ ತರುಣಿಯೋರ್ವಳ— ಲೇಡಿ ಎಲಿಸ್‌ಳ — ಆಗಮನದ ವೃತ್ತಾಂತ ತಿಳಿದುಬರುತ್ತದೆ. ಮತ್ತು ಅವಳನ್ನು ಮೋಸಗೊಳಿಸಿ ಶೀಲಭ್ರಷ್ಟಳನ್ನಾಗಿ ಮಾಡುವ

ಕ್ರೋಸುಗ ಸಿದ್ಧತೆ ನಡೆಯಬೇಕಾಗುತ್ತದೆ. ಲೇಡಿ ಎಲಿಸ್ ತನ್ನ ಸಹೋದರರನ್ನು ಕಟ್ಟಡವಿಯಲ್ಲಿ ಕಳೆದುಕೊಂಡಿದ್ದಾಳೆ. ರಾತ್ರಿ ಹೆಚ್ಚುತ್ತಿದೆ. ಆದರೆ ದೇವರಲ್ಲಿ ಅಪಾರವಾದ ನಂಬುಗೆ ಅವಳಿಗಿರುವದರಿಂದ ಅವಳು ಕೈಕಾಲು ಕಳೆದು ಕೊಂಡಿಲ್ಲ. ತನ್ನ ಶೀಲದ ಸಾಮರ್ಥ್ಯವನ್ನು ನಂಬಿ ಧೈರ್ಯಸ್ಥ ಳಾಗಿಯೇ ಇದ್ದಾಳೆ. ಕೋಮಸ್ ಅವಳನ್ನು ಸಂಧಿಸಿ ಅವಳ ಸಹೋದರರನ್ನು ಕಂಡಿದುದಾಗಿ ಹೇಳಿ ಅವರ ಬಳಿಗೆ ಅವಳನ್ನು ಕರೆದೊಯ್ಯುವ ನೆವದಲ್ಲಿ ತನ್ನ ಅರಮನೆಗೆ ಕರೆ ತರುತ್ತಾನೆ.

ದೃಶ್ಯ ಬದಲಾದಾಗ, ತಮ್ಮ ಸಹೋದರಿಯನ್ನು ಕಾಣದೆ ಕಳವಳಕ್ಕೊಳಗಾಗಿರುವ ಬಂಧುಗಳನ್ನು ನಾವು ಕಾಣು ತ್ತೇವೆ. ಅವರಲ್ಲಿ ಹಿರಿಯವ ಹೆಚ್ಚು ತಿಳಿದವನು. ಪರಮಾ ತ್ಮನ ನ್ಯಾಯ ಕರುಣೆಗಳಲ್ಲಿ ಅತ್ಯಂತ ವಿಶ್ವಾಸವುಳ್ಳವನು. ಆದುದರಿಂದ ತನ್ನ ಸಚ್ಛೀಲ ಸಹೋದರಿಗೆ ಕೇಡೆಂದಿಗೂ ಆಗಲಾರದು ಎಂದು ದೃಢವಾಗಿ ನಂಬಿದ್ದಾನೆ. ಚಿಕ್ಕವನಿಗೂ ಶ್ರದ್ಧೆಯಿದೆ. ಆದರೆ ಇನ್ನೂ ಅದಷ್ಟು ಬಲಗೊಂಡಿಲ್ಲ. ಇದಲ್ಲದೆ ವಯಸ್ಸಿಗೆ ಸಹಜವಾದ ಒಂದು ಅಳುಕಿನ ಅಂಶ ಕೂಡ ಅವನಲ್ಲಿದೆ. ತನ್ನ ಸಹೋದರಿ ಕಷ್ಟನಷ್ಟಗಳಿಗೀ-ಡಾಗಿರಬಹುದು ಎಂದು ಅವನು ದುಃಖಪಡುತ್ತಿರುತ್ತಾನೆ. ಇವರೀರ್ವರೂ ಪರಸ್ಪರ ಮಾತನಾಡುತ್ತಿರುವಾಗ ರಕ್ಷಕ ದೇವತೆ ಥರ್ಸಿಸ್ ಎಂಬ ಇವರ ಆಳಿನ ವೇಷದಲ್ಲಿ ಇವರಿದ್ದ ಲ್ಲಿಗೆ ಬರುತ್ತಾನೆ. ಮತ್ತು ಅವರ ಸಹೋದರಿಗೊದಗಿದ

ಸಂಕಟವನ್ನವರಿಗೆ ತಿಳಿಸುತ್ತಾನೆ. ಕೂಡಲೆ ಬಂಧುಗಳೆಲ್ಲರೂ ಅವಳ ಸಹಾಯಕ್ಕೋಸುಗ ಧಾವಿಸುತ್ತಾರೆ.

ತನ್ನ ಸರ್ವ ವಿದ್ಯೆಯನ್ನು ಪ್ರಯೋಗಿಸಿದರೂ ಕೋಮಸ್ ನಿಗೆ ತರುಣಿಯನ್ನು ಗೆಲ್ಲುವುದು ಸಾಧ್ಯವಾಗಿರುವುದಿಲ್ಲ. ಐಶ್ವರ್ಯದ ಆಮಿಷಕ್ಕೆ, ಸುಖದ ಆಶೆಗೆ ಅವಳು ಬಲಿ ಬೀಳುವುದಿಲ್ಲ. ಇದಲ್ಲದೆ ಅವನ ಪಕ್ಷವನ್ನು ಖಂಡಿಸಿ ಅವನು ನಾಚುವಂತೆ ಧರ್ಮದ, ಸತ್ಯದ ನಿಜಸ್ವರೂಪವನ್ನು ಅವಳು ಅವನಿಗೆ ತಿಳಿಸಿಕೊಡುತ್ತಾಳೆ. ಕೋಮಸ್ ರೊಚ್ಚಿಗೆದ್ದು ಬಲಪ್ರಯೋಗ ಮಾಡುವದರಲ್ಲಿದ್ದಾಗ ಅಲ್ಲಿಗೆ ಸಹೋದರರ ಆಗಮನವಾಗುತ್ತದೆ. ಸಾಬ್ರಿನಾ ಎಂಬ ಜಲ-ದೇವತೆಯ ಸಹಾಯದ ಮೂಲಕ ಅವಳ ವಿಮೋಚನೆಯಾಗುತ್ತದೆ. ಅಲ್ಲಿಗೆ ಈ ನಾಟಕ ಮುಗಿಯುತ್ತದೆ.

ಈ ನಾಟಕದ ರಚನೆ, ನಿರ್ವಹಣೆಯಲ್ಲಿ ಪ್ರತಿನಿಮಿಷಕ್ಕೂ ಮಿಲ್ಟನ್ನನ ಪ್ರತಿಭೆಯ ಕೈವಾಡವನ್ನು ನಾವು ಕಾಣುತ್ತೇವೆ. ಸಾಮಾನ್ಯವಾಗಿ 'ಮಾಸ್ಕ್' ಎಂಬ ನಾಟ್ಯರೂಪದಲ್ಲಿ ಸುಸಂಬದ್ಧ ಕಥೆ ಅಥವಾ ಸುವ್ಯಕ್ತ ವಿಚಾರಸರಣಿ ಇರುವುದು ಕಡಿಮೆ. ಹಾಡು, ಕುಣಿತ ಇವುಗಳ ಪ್ರಾಬಲ್ಯವೇ ಅಲ್ಲಿ ಹೆಚ್ಚಾಗಿ ನೋಡಸಿಗುತ್ತದೆ. **ಕೋಮಸ್**ದಲ್ಲಿ ಸುಂದರಗೀತೆಗಳಿಗೆ ಕೊರತೆಯಿಲ್ಲ. ಅದರಂತೆಯೇ ಕಣ್ಣನ್ನು ತಣಿಸುವ ಒಂದು ನೃತ್ಯವೈಭವವು ಅಲ್ಲಿವೆ.

ಆದರೆ ಕವಿ ಇಷ್ಟರಿಂದ ತೃಪ್ತನಾಗದೆ ನಾಟಕದಲ್ಲಿ ತನ್ನ ಉತ್ತುಂಗ ವಿಚಾರಗಳಿಗೆ ಅಭಿವ್ಯಕ್ತಿಯನ್ನು ದೊರೆಕಿಸಿ ಕೊಟ್ಟಿದ್ದಾನೆ. ಸಧರ್ಮಪಾಲನೆಯಲ್ಲಿ, ಸಚ್ಛೀಲ ವರ್ಧನೆ ಯಲ್ಲಿ ಪರಮಾತ್ಮನಿಗಿರುವ ಆಸ್ಥೆಯನ್ನು, ಚಾರಿತ್ರ್ಯದ ಬಲವಿಶೇಷವನ್ನು ಅವನು ಇಲ್ಲಿ ಬಹಳ ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾನೆ.

ಲಿಸಿಡಾಸ್ ಪ್ರಕಟವಾದುದು ೧೬೩೮ರಲ್ಲಿ. ೧೬೩೭ರ ಆಗಸ್ಟದ ೧೦ನೆಯ ದಿನಾಂಕದಂದು ಎಡ್ವರ್ಡ್ ಕಿಂಗ್ ಎಂಬ ವಿದ್ವಾಂಸ ಸಮುದ್ರದಲ್ಲಿ ಮುಳುಗಿ ಅಕಾಲ ಮರಣ ಕ್ಕೀಡಾದನು. **ಲಿಸಿಡಾಸ್,** ಮಿಲ್ಟನ್ನನು ಅವನಿಗೆ ಅರ್ಪಿಸಿದ ಒಂದು ಕಾಣಿಕೆ.

ಶೆಲೆ ಕವಿಯು **ಎಡೊನೆಯಿಸ್**ದಂತೆ **ಲಿಸಿಡಾಸ್** ಕೂಡ ಒಂದು ಸುಂದರವಾದ ಶೋಕಗೀತ. "ಪ್ಯಾಸ್ಟೊ ರಲ್" ಎಂದು ಗುರುತಿಸಲ್ಪಡುವ ಕಾವ್ಯಪ್ರಕಾರಕ್ಕೆ ಸೇರಿ ದುದು. ಸ್ಟಾಫರ್ಡ್ ಬ್ರುಕ್‌ರವರು ಹೇಳಿದಂತೆ "ಈ ಕವಿತೆಯ ಉದ್ದೇಶ ತೀವ್ರವಾದ ದುಃಖದ ಅನುಭವವನ್ನು ವ್ಯಕ್ತಗೊಳಿಸುವುದಾಗಿರದೆ, ಕವಿಗೆ ತನ್ನ ಮಿತ್ರನ ವಿಷಯ ಕ್ಕಿರುವ ಮೆಚ್ಚಿಕೆಯನ್ನು, ಅವನ ಅಗಲುವಿಕೆಯಿಂದ ತನಗಾದ ವಿಷಾದವನ್ನು ಕಲೆಯ ವಿಶಿಷ್ಟರೂಪದಲ್ಲಿ ಪ್ರಕಟಗೊಳಿಸುವು ದಾಗಿದೆ." ಈ ದೃಷ್ಟಿಯಿಂದ ಇದೊಂದು ಬಹು ಯಶಸ್ವಿ ಯಾದ ಕವಿತೆ.

ಲಿಸಿಡಾಸ್‌ದೊಂದಿಗೆ ಮಿಲ್ಟನ್ನನ ಜೀವನದಲ್ಲಿಯ ಒಂದು ಮಹತ್ವದ ಅಧ್ಯಾಯ ಮುಗಿಯುತ್ತದೆ. ಉತ್ತಮ ಕೃತಿಗಳ ರಚನೆಯನ್ನು ಕವಿ ಈಗಾಗಲೆ ಕೈಕೊಂಡು ಪೂರೈಸಿದ್ದರೂ ಅವನ ದೃಷ್ಟಿಯಲ್ಲಿ ಮುಂಬರುವ ಅದ್ಭುತ ಕಾರ್ಯಕ್ಕೆ ಇದೊಂದು ಸಿದ್ಧತೆ ಮಾತ್ರ. ಅವನ ಕಣ್ಣೆದುರು ಯಾವಾಗಲೂ ನಿಂತಿರುವುದು ಮಹಾಕಾವ್ಯದ ಒಂದು ಆದರ್ಶ; ಅದಕ್ಕಾಗಿಯೇ ಇದೆಲ್ಲ ಸಿದ್ಧತೆ. ಈ ವೇಳೆಗೆ ಮಿಲ್ಟನ್ ತನ್ನ ಮಿತ್ರ ಡಾಯೋಡಾಟಿಗೆ ಬರೆದ ಪತ್ರವೊಂದರಲ್ಲಿ ಕವಿಯ ಮನಃಸ್ಥಿತಿಯ ಒಂದು ಪಡಿನೆಳಲನ್ನು ನಾವು ಕಾಣುತ್ತೇವೆ: "ನಾನಾವುದರ ಧ್ಯಾನದಲ್ಲೀಗ ತೊಡಗಿದ್ದೇನೆಂದು ಕೇಳಿದ್ದೀಯ, ಗೆಳೆಯ? ನಾನು ಧೇನಿಸುತ್ತಿರುವುದು ಈಶ್ವರನ ಕರುಣೆಯಿಂದ ಗಳಿಸಬಹುದಾದ ಅಮರ ಕೀರ್ತಿಯನ್ನು. ನಾನೀಗ ಮಾಡುತ್ತಿರುವುದೇನೆನ್ನುವಿಯ? ರೆಕ್ಕೆಗಳನ್ನು ಬಲಿಯಗೊಡುತ್ತಿದ್ದೇನೆ; ಉಡ್ಡಯನಕ್ಕಾಗಿ ಅವುಗಳನ್ನಣಿಗೊಳಿಸುತ್ತಿದ್ದೇನೆ."

೫. ಇಟಲಿ

ಲಾಲೆಗ್ರೋ, ಕೋಮಸ್ ಮೊದಲಾದ ಕೃತಿಗಳ ರಚನೆಯಲ್ಲಿ ಮಿಲ್ಟನ್ ತನ್ನ ಲೇಖನಿಯನ್ನು ಚೆನ್ನಾಗಿ ಪಳಗಿಸಿಕೊಂಡಿದ್ದರೂ ಮಹಾಕಾವ್ಯದ ರಚನೆಗೆ ಬೇಕಾಗುವ ಜ್ಞಾನಾನುಭವ ತನ್ನಲ್ಲಿ ಇನ್ನೂ ಪಕ್ವಗೊಂಡಂತೆ ಅವನಿಗೆ ಎನಿಸಲಿಲ್ಲ. ಅದಕ್ಕೆಂದೇ ೧೬೩೮ರ ವಸಂತದಲ್ಲಿ ಇಟಲಿಯ ಪ್ರವಾಸವನ್ನು ಕೈಕೊಂಡ. ಇಷ್ಟೊತ್ತಿಗೆ ಅವನ ತಾಯಿ ತೀರಿಕೊಂಡು ಕೆಲದಿನಗಳಾಗಿದ್ದುವು.

ಮಿಲ್ಟನ್ ಪ್ಯಾರಿಸ್ ಮುಖಾಂತರವಾಗಿ ತನ್ನ ಪ್ರಯಾಣವನ್ನು ಬೆಳೆಸಿದ. ಪ್ಯಾರಿಸ್‌ನಲ್ಲಿ ಇಂಗ್ಲೆಂಡಿನ ರಾಯಭಾರಿ ಲಾರ್ಡ ಸ್ಕೂಡಾಮೋರರವರು ಬಹು ಆದರದಿಂದ ಅವನನ್ನು ಬರಮಾಡಿಕೊಂಡು ಆಗ ಪ್ಯಾರಿಸಿನಲ್ಲಿ ಸ್ವೀಡನ್ನಿನ ರಾಯಭಾರಿಯಾಗಿದ್ದ ಹ್ಯೂ ಗ್ರೋಶಸ್ ಎಂಬ ವಿದ್ವಾಂಸರ ಪರಿಚಯವನ್ನು ಅವನಿಗೆ ಮಾಡಿ ಕೊಟ್ಟರು. ಪ್ಯಾರಿಸ್ಸಿನಿಂದ ಹೊರಟು ಮಿಲ್ಟನ್ ಇಟಲಿಯ ಪ್ರಸಿದ್ಧ ನಗರವಾದ ಫ್ಲಾರೆನ್ಸಿಗೆ ಬಂದನು. ಅಲ್ಲಿಯ ಸಾಹಿತಿಗಳು ಪ್ರೀತ್ಯಾದರಗಳಿಂದ ಅವನನ್ನು ಸ್ವಾಗತಿಸಿದರಲ್ಲದೆ ಅವನ ಲ್ಯಾಟಿನ್ ಕವಿತೆಗಳನ್ನು ಬಹುವಾಗಿ ಹೊಗಳಿದರು.

ಫ್ಲಾರೆನ್ಸಿನಲ್ಲಿ ಮಿಲ್ಟನ್ನನಿಗೆ ಪ್ರಸಿದ್ಧ ವಿಜ್ಞಾನಿಯಾದ ಗೆಲಿಲಿಯೋನ ಭೆಟ್ಟಿಯಾಯಿತು. ದುರ್ದೈವಿ ಗೆಲಿಲಿಯೋ ಆಗ ಬಂದಿವಾಸವನ್ನನುಭವಿಸುತ್ತಿದ್ದ. ಫ್ಲಾರೆನ್ಸಿನಿಂದ ಮಿಲ್ಟನ್ ರೋಮಕ್ಕೆ ಪ್ರಯಾಣ ಬೆಳೆಸಿದ. ಅಲ್ಲಿ ಎರಡು ತಿಂಗಳ ಕಾಲವಿದ್ದು ನೇಪಲ್ಸ ನಗರಕ್ಕೆ ಭೇಟಿಕೊಟ್ಟ. ನೇಪಲ್ಸಿನಲ್ಲಿ ಅವನಿಗೆ ಗವಾನಿ ಬೆಟಿಸ್ಟಾ ಮ್ಯಾನ್ಸೊ (Manso) ರವರ ಪರಿಚಯುವಾಯಿತು. ಉಚ್ಚ ಸ್ಥಾನಮಾನಗಳುಳ್ಳ ಮ್ಯಾನ್ಸೊ ತನ್ನ ಸಾಹಿತ್ಯ ಪ್ರೇಮಕ್ಕಾಗಿ ಪ್ರಸಿದ್ಧನಾಗಿದ್ದ. ಪ್ರಸಿದ್ಧ ಇಟಾಲಿಯನ್ ಕವಿಗಳಾದ ಟ್ಯಾಸ್ಸೊ ಮತ್ತು ಮ್ಯಾರಿನಿ ಇವರ ನಿಕಟವಾದ ಪರಿಚಯು ಅವನಿಗಿದ್ದಿತು. ಮ್ಯಾನ್ಸೊ ಮಿಲ್ಟನ್ನನನ್ನು ಬರಮಾಡಿಕೊಂಡು ಯೋಗ್ಯರೀತಿಯಿಂದ ಅವನನ್ನು ಗೌರವಿಸಿದ. ಧಾರ್ಮಿಕ ವಿಷಯುಗಳಲ್ಲಿ ಅವರಲ್ಲಿ ಭಿನ್ನಾಭಿಪ್ರಾಯುಗಳಿದ್ದ ಮೂಲಕ ಮತ್ತು ಮಿಲ್ಟನ್ನನ ಅಭಿಪ್ರಾಯುಗಳು ಇಟಲಿಯ ಅಧಿಕೃತ ಅಭಿಪ್ರಾಯುಗಳಿಗೆ ವಿರುದ್ಧವಾಗಿದ್ದುದರಿಂದ ಮ್ಯಾನ್ಸೊ ತನಗೆ ಬೇಕೆನಿಸಿದಷ್ಟು ಸಲಿಗೆಯಿಂದ ಮಿಲ್ಟನ್ನನೊಡನೆ ವರ್ತಿಸಲಾಗಲಿಲ್ಲ. ನೇಪಲ್ಸಿನಿಂದ ಗ್ರೀಸ್, ಸಿಸಿಲಿ ದೇಶಗಳಿಗೆ ಭೆಟ್ಟಿಕೊಡಬೇಕೆಂದು ಮಿಲನ್ನನ ಇಚ್ಛೆಯಿದ್ದಿತು. ಆದರೆ ಈ ಮಧ್ಯೆ ಇಂಗ್ಲಂಡಿನಲ್ಲಿ ಅರಸು ಚಾರ್ಲ್ಸ್ ಮತ್ತು ಅವನ ಪ್ರಜೆಗಳ ನಡುವೆ ನಡೆದಿದ್ದ ಸಂಘರ್ಷಣೆಯ ಸುದ್ದಿ ಅವನಿಗೆ ತಲುಪಲು ಅವನ ಮನಸ್ಸು ತಾಯಿನಾಡಿನತ್ತ ಹೊರಳಿತು. "ನನ್ನ ದೇಶಬಾಂಧವರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಪರದೇಶಗಳಲ್ಲಿ

ಸುಖಪ್ರವಾಸವನ್ನನುಭವಿಸುವುದು ನಾಚಿಕೆಗೇಡು ಎಂದು ನಾನು ವಿಚಾರಿಸಿದೆ.” ಎಂದು ಮಿಲ್ಟನ್ ಆಗಿನ ತನ್ನ ಭಾವನೆಗಳನ್ನು ವರ್ಣಿಸಿದ್ದಾನೆ. ೧೬೩೯ ರ ಆಗಸ್ಟ ತಿಂಗಳಲ್ಲಿ, ಎಂದರೆ ಸುಮಾರು ಒಂದೂಕಾಲು ವರುಷದ ನಂತರ, ಮಿಲ್ಟನ್ ಸ್ವದೇಶಕ್ಕೆ ಮರಳಿದ.

೬. ಗದ್ಯ ಲೇಖನಗಳು

ಇಟಲಿಯ ಪ್ರವಾಸದಿಂದ, ಅಲ್ಲಿಯ ವಿದ್ವಾಂಸರ, ಸಾಹಿತಿಗಳ ಸಹವಾಸದಿಂದ ಮಿಲ್ಟನ್ನನ ಮಹತ್ವಾಕಾಂಕ್ಷೆ ಮತ್ತಷ್ಟು ಬಲಗೊಂಡಿತ್ತು. ತನ್ನಲ್ಲಿ ಅಮರವಾದ ಕೃತಿಯೊಂದನ್ನು ರಚಿಸುವ ಸಾಮರ್ಥ್ಯವಿದೆಯೆನ್ನುವ ವಿಶ್ವಾಸವೂ ಬೆಳೆದು ಬಂದಿತ್ತು. ಆದರೆ ಪರಿಸ್ಥಿತಿಯ ಒತ್ತಡದ ಮೂಲಕ ಇಪ್ಪತ್ತು ವರುಷಗಳ ದೀರ್ಘಕಾಲ ಅವನು ಕಾವ್ಯವನ್ನು ದೂರಿಡಬೇಕಾಯಿತು.

ಇಂಗ್ಲಂಡಿಗೆ ಮರಳಿದನಂತರ ಮಿಲ್ಟನ್ ಲಂಡನ್ನಿನಲ್ಲಿ ವಾಸವಾಗಿದ್ದ. ಈ ದಿನಗಳಲ್ಲಿ ಅವನು ಶಿಕ್ಷಣದಲ್ಲಿ ವಿಶೇಷವಾದ ಆಸ್ಥೆ ವಹಿಸಿದ. ತನ್ನ ಧ್ಯೇಯಗಳನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕಿಳಿಸಲು ತನ್ನ ಅಕ್ಕನ ಮಕ್ಕಳಾದ ಎಡ್ವರ್ಡ್ ಮತ್ತು ಜಾನ್ ಅವರ ಶಿಕ್ಷಣವನ್ನು ಕೈಕೊಂಡ. ಮಿಲ್ಟನ್ನನ ದೃಷ್ಟಿಯಲ್ಲಿ ಶಿಕ್ಷಣ ಸಹಜಸಾಧ್ಯವಾದ ವಿಷಯವಾಗಿರಲಿಲ್ಲ. ಶಿಕ್ಷಣಕ್ಕೆ ಅವನು ಕೊಟ್ಟ ವ್ಯಾಖ್ಯೆಯಿಂದಲೇ ಈ ಮಾತನ್ನು ನಾವು ತಿಳಿಯಬಹುದು "ಶಾಂತಿ ಕಾಲದಲ್ಲಾಗಲಿ ಯುದ್ಧಕಾಲದಲ್ಲಾಗಲಿ ಯಾವುದು ಮಾನವನಿಗೆ ತನಗೆ ಮತ್ತು ಪರರಿಗೆ ಸಂಬಂಧಿಸಿದ ಕರ್ತವ್ಯ

ಗಳನ್ನು ನ್ಯಾಯ, ಕುಶಲತೆ, ಔದಾರ್ಯಗಳಿಂದ ನೆರವೇರಿಸಲು ಶಕ್ತಿಯನ್ನು ತಂದುಕೊಡುವುದೋ ಅದೇ ಸಂಪೂರ್ಣ ಶಿಕ್ಷಣ."

ಮಹಾಕಾವ್ಯದ ರಚನೆ ದೇವದತ್ತವಾದ ತನ್ನ ಕರ್ತವ್ಯವೆಂದು ಮಿಲ್ಟನ್ನನು ತಿಳಿದುಕೊಂಡಿದ್ದರೂ, ದೇಶದ ಸ್ವಾತಂತ್ರ್ಯ ರಕ್ಷಣೆಯಲ್ಲಿ ತನ್ನ ಸರ್ವಶಕ್ತಿಯನ್ನು ಈ ದಿನಗಳಲ್ಲಿ ವಿನಿಯೋಗಿಸಲು ಅವನು ಹಿಂದೆ ಮುಂದೆ ನೋಡಲಿಲ್ಲ. ಸ್ವದೇಶ — ಸ್ವಾತಂತ್ರ್ಯಗಳ ಪ್ರೇಮ ಮಿಲ್ಟನ್ನನಲ್ಲಿ ರಕ್ತಗತವಾಗಿ ಬೆಳೆದು ಬಂದಿತ್ತು. ಎಂತಲೇ ದೇಶದ ಸಾಮಾಜಿಕ ರಾಜಕೀಯ ಜೀವನದಲ್ಲಿ ವಿಶೇಷವಾದ ಆಸ್ಥೆಯನ್ನು ಅವನು ತೋರಿದ. ಈ ವೇಳೆಗೆ ಅಧಿಕಾರದಲ್ಲಿದ್ದ ಲಾಂಗ್ ಪಾರ್ಲಿಮೆಂಟು ಧಾರ್ಮಿಕ ಸುಧಾರಣೆಗಳತ್ತ ವಿಶೇಷ ಲಕ್ಷ್ಯವಿತ್ತಿತ್ತು. ಮಿಲ್ಟನ್ನನೂ ಉತ್ಸಾಹದಿಂದ ಈ ರಂಗಕ್ಕೆ ಧುಮುಕಿದ. ೧೬೪೧ — ೪೨ ರಲ್ಲಿ ಬರೆಯಲ್ಪಟ್ಟ ಅವನ ಮೊದಲನೆಯ ಐದು ಪ್ರಚಾರಲೇಖನಗಳು ಧಾರ್ಮಿಕ ಸ್ವಾತಂತ್ರ್ಯದ ಹ್ರಾಸಕ್ಕೆ ಧರ್ಮಾಧಿಕಾರಿಗಳೇ (Bishops) ಕಾರಣರೆಂದು ಪ್ರತಿಪಾದಿಸುತ್ತವೆ. ಧರ್ಮಾಧಿಕಾರಿಗಳ ಉಚ್ಚಾಟನೆಯಿಲ್ಲದೆ ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಯಾಗಲಾರದು ಎಂದು ಮಿಲ್ಟನ್ನನ ದೃಢವಾದ ನಂಬಿಗೆಯಾಗಿದ್ದಿತು.

ಈ ಸುಮಾರಿಗೆ ಮಿಲ್ಟನ್ ವಿವಾಹಿತನಾದ ಮೇರಿ

ಪಾವೆಲ್ಲಳೊಂದಿಗೆ ಆದ ಅವನ ಮದುವೆ ೧೬೪೨ ರಲ್ಲಿಯೇ ಅಥವಾ ೧೬೪೩ ರಲ್ಲಿಯೇ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಗಳಿವೆ. ಅದೇನೇ ಇದ್ದರೂ ಮಿಲ್ಟನ್ನನ ಸಂಗಾತಿಯ ಆಯ್ಕೆ ಮಾತ್ರ ಸರಿಯಾಗಿರಲಿಲ್ಲ. ಪಾವೆಲ್ ಮನೆತನ ಅರಸುಪಕ್ಷಕ್ಕೆ ಸೇರಿದ್ದುದು. ಮಿಲ್ಟನ್ ಅರಸನ ಪಕ್ಷವನ್ನು ವಿರೋಧಿಸುವವ. ಇದಲ್ಲದೆ ವಯಸ್ಸಿನಲ್ಲಿಯೂ ಅವರೀರ್ವರಲ್ಲಿ ವಿಷಮತೆಯಿದ್ದಿತು ಮಿಲ್ಟನ್ನನ ವಯಸ್ಸು ಮೂವತ್ತೈದಾಗಿ ದ್ದರೆ ಮೇರಿಯ ವಯಸ್ಸು ಕೇವಲ ಹದಿನೇಳು. ಮೇರಿಯ ಜೀವನ ಹೆಚ್ಚಾಗಿ ವಿಲಾಸದಲ್ಲಿಯೇ ಕಳೆದಿತ್ತು. ಮಿಲ್ಟನ್ನನು ಸಾದಾ ಜೀವನಕ್ಕೆ ಹೆಚ್ಚು ಮಹತ್ವ ಕೊಡುವವ. ಹೀಗಾಗಿ ಮಿಲ್ಟನ್ನನ ಜೊತೆಜೀವನ ಮೇರಿಗೆ ಕಠಿಣವೂ ನೀರಸವೂ ಎನಿಸಿತು. ಮದುವೆಯಾಗಿ ಒಂದು ತಿಂಗಳು ಕಳೆಯುವ ಮೊದಲೇ ತವರುಮನೆಗೆ ಹೊರಟುಹೋದ ಮೇರಿ ತಿರುಗಿ ಬರಲು ನಿರಾಕರಿಸಿದಳು.

ಇದರಿಂದಾಗಿ ಮಿಲ್ಟನ್ ಬಲವಾದ ಆಘಾತಕ್ಕೊಳ ಗಾದ. ಈ ಕಟು ಅನುಭವವೇ ಅವನನ್ನು ವಿವಾಹವಿಚ್ಛೇ ದನವನ್ನು ಸಮರ್ಥಿಸಿ ಪ್ರಚಾರ ಲೇಖನಗಳನ್ನು ಬರೆಯಲು ಪ್ರಚೋದಿಸಿರಬೇಕೆಂದು ನಂಬಲಾಗಿದೆ.

“ ಶಿಕ್ಷಣವನ್ನು ಕುರಿತು ” ಮತ್ತು “ ಏರಿಯೋ ಪೆಜಿಟಿಕಾ ” ಇವು ೧೬೪೪ ರಲ್ಲಿ ಮಿಲ್ಟನ್ ಬರೆದ ಪ್ರಚಾರ ಲೇಖನಗಳು. ಮೊದಲನೆಯುದರಲ್ಲಿ ಪರಿಪೂರ್ಣ ಶಿಕ್ಷಣದ

ಯೋಜನೆಯೊಂದನ್ನು ಅವನು ಓದುಗರ ಮುಂದೆ ಇಟ್ಟಿದ್ದಾನೆ. ಎರಡನೆಯದರಲ್ಲಿ ಮುದ್ರಣ ಸ್ವಾತಂತ್ರ್ಯದ ಬಲವಾದ ಸಮರ್ಥನೆಯಿದೆ. ಇವೆರಡೂ ಲೇಖನಗಳು ಮಿಲ್ಟನ್ನನ ಗದ್ಯ ಲೇಖನಗಳಲ್ಲಿಯೇ ಶ್ರೇಷ್ಠವಾದವುಗಳು ಎಂದು ಹೆಸರುಗೊಂಡಿವೆ.

೧೬೪೫ ರಲ್ಲಿ ಮಿಲ್ಟನ್ನನ ವೈಯಕ್ತಿಕ ಜೀವನದಲ್ಲಿ ಮಹತ್ವದ ಒಂದು ಘಟನೆ ನಡೆಯಿತು. ಕ್ರಾಮವೆಲ್ಲನ ವಿಜಯ ನಿಶ್ಚಿತವಾದಂತಾಗಿದ್ದುದರಿಂದ ಅರಸುಪಕ್ಷವನ್ನು ಬೆಂಬಲಿಸಿದ್ದ ಪಾವೆಲ್ ಮನೆತನ ಅಂಜಿಕೆಗೊಳಗಾಗಿತ್ತು. ಹೇಗಾದರೂ ತಮ್ಮ ಮಗಳು ಮೇರಿ ಮತ್ತೆ ಮಿಲ್ಟನ್ನನನ್ನು ಸೇರುವಂತಾದರೆ ಸಾಕೆಂದು ಅವಳ ತಂದೆತಾಯಿಗಳು ಬಯಸಿದರು. ಕೆಲ ಸ್ನೇಹಿತರ ಮಧ್ಯಸ್ಥಿಕೆಯಿಂದಾಗಿ ಮಿಲ್ಟನ್ನನು ಮೇರಿಯನ್ನು ಮರಳಿ ಸ್ವೀಕರಿಸಲು ಒಪ್ಪಿಕೊಂಡ. ಅವರ ವೈವಾಹಿಕ ಜೀವನಕ್ಕೆ ಮತ್ತೊಮ್ಮೆ ಮೊದಲಾಯಿತು. ಆದರೆ, ಮೇರಿ ಬಹುದಿನ ಬಾಳಲಿಲ್ಲ. ಜಾನ್ ಎಂಬ ಮಗನಿಗೆ ಮತ್ತು ಮೂರು ಹೆಣ್ಣುಮಕ್ಕಳಿಗೆ ಜನ್ಮವಿತ್ತು ೧೬೫೨ ರಲ್ಲಿ ಅವಳು ತೀರಿಕೊಂಡಳು. ಮಗ ಜಾನ್ ಕೂಡ ಕೆಲ ದಿನಗಳಲ್ಲಿಯೇ ತಾಯಿಯನ್ನು ಹಿಂಬಾಲಿಸಿದನು.

ಇದೇ ವರುಷ ಮಿಲ್ಟನ್ನನ ಮೊಟ್ಟಮೊದಲನೆಯ ಕವಿತಾ ಸಂಗ್ರಹ ಪ್ರಕಟಿಸಲ್ಪಟ್ಟಿತು.

೧೬೪೯ ಜನವರಿ ೩೦ ನೆಯ ತಾರೀಖಿನಂದು ಚಾರ್ಲ್ಸ್

ದೊರೆಯನ್ನು ಗಲ್ಲಿಗೇರಿಸಲಾಯಿತು ಮುಂದೆ ಕೆಲ ದಿನಗಳಲ್ಲಿಯೇ Tenure of Kings and Magistrates ಎನ್ನುವ ಲೇಖನವನ್ನು ಮಿಲ್ಟನ್ ಬರೆದು ಪ್ರಕಟಿಸಿದ. ಇದರಲ್ಲಿ ಚಾರ್ಲ್ಸನ ಹೆಸರನ್ನೆತ್ತಿ ಅವನು ಬರೆಯಲಿಲ್ಲವಾದರೂ ಅವನಿಗಾದ ಶಿಕ್ಷೆಯ ಒಂದು ಸಮರ್ಥನೆ ಅದರ ಉದ್ದೇಶ ವಾಗಿತ್ತು. ಆಳುವವರೊಡನೆ ಪ್ರಜೆಗಳು ಇಟ್ಟುಕೊಳ್ಳುವ ಸಂಬಂಧ ಸ್ವಸಂತೋಷದ್ದಾಗಿದ್ದು ಅದನ್ನವರು ಬೇಕಾದಾಗ ಕಡಿದುಕೊಳ್ಳಬಲ್ಲರು ಎನ್ನುವ ವಾದಸರಣಿ ಈ ಲೇಖನ ದಲ್ಲಿದೆ.

೧೬೪೯ ರ ಮಾರ್ಚ ತಿಂಗಳಲ್ಲಿ ಮಿಲ್ಟನ್ನನು ಕೌನ್ಸಿಲ್ ಆಫ್ ಸ್ಟೇಟಿಗೆ ವಿದೇಶ ಭಾಷೆಗಳ ಕಾರ್ಯದರ್ಶಿಯೆಂದು ನೇಮಕ ಹೊಂದಿದ್ದಲ್ಲದೆ ಸುಮಾರು ೧೧ ವರ್ಷಗಳ ಕಾಲ ಆ ಅಧಿಕಾರದಲ್ಲಿದ್ದನು ಇಲ್ಲಿ ಅವನ ಮುಖ್ಯ ಕೆಲಸ ವಿದೇಶ ಗಳಿಗೆ ಕಳಿಸಲ್ಪಡುತ್ತಿದ್ದ ಕಾಗದಪತ್ರಗಳನ್ನು ಗಂಭೀರವಾದ ಲ್ಯಾಟಿನ್ನಿನಲ್ಲಿ ಭಾಷಾಂತರಿಸುವದಾಗಿತ್ತು. ಇದಲ್ಲದೆ ಕೌನ್ಸಿಲ್ ಆಫ್ ಸ್ಟೇಟಿನ ರಾಜಕೀಯ ನೀತಿಯನ್ನು ಸಮರ್ಥಿಸುವುದ ರಲ್ಲಿಯೂ ಅವನು ತನ್ನ ಲೇಖನಿಯನ್ನು ಉಪಯೋಗಿಸ ಬೇಕಾಗುತ್ತಿತ್ತು. ಮೊದಲನೆಯ ಚಾರ್ಲ್ಸನನ್ನು ಗಲ್ಲಿಗೇರಿಸಿ ದ್ದರೂ ಅರಸುಪಕ್ಷ ಇನ್ನೂ ಸಾಕಷ್ಟು ಬಲಿಷ್ಠವಾಗಿಯೇ ಇದ್ದಿತು. ೧೬೪೯ ರ ಫೆಬ್ರುವರಿಯಲ್ಲಿ ಚಾರ್ಲ್ಸನೇ ಬರೆದುದೆಂದು ಹೇಳಲಾದ ಐಕಾನ್ ಬೆಸಿಲಿಕ್ ಎಂಬ ಪುಸ್ತಿಕೆ ಹೊರಬಿದ್ದಿತು. ಈ ಪುಸ್ತಿಕೆಯಲ್ಲಿ ಅರಸನು

ಮರಣಪೂರ್ವದಲ್ಲಿ ಅನುಭವಿಸಿದ ಸಂಕಷ್ಟಗಳ ವರ್ಣನೆ ಮಿದ್ದಿತು. ಪುಸ್ತಿಕೆ ಸಾಕಷ್ಟು ಜನಪ್ರಿಯತೆಯನ್ನು ಗಳಿಸಲು ಕೌನ್ಸಿಲ್ ಆಫ್ ಸ್ಟೇಟಿಗೆ ಹೆದರಿಕೆಯುಂಟಾಗಿ ಅದನ್ನು ಖಂಡಿಸುವ ಕಾರ್ಯವನ್ನು ಮಿಲ್ಟನ್ನನಿಗೆ ಒಪ್ಪಿಸಿತು. ಆಗ ಅವನು "ಆಯಕೊನೊಕ್ಲಾಸ್ಟ" ಎಂಬ ಲೇಖನ ವನ್ನು ಬರೆದ. ಚಾರ್ಲ್ಸನ ವೈಯಕ್ತಿಕ ಜೀವನವನ್ನು ಅಸತ್ಯಪೂರ್ಣವಾಗಿ, ಅವನಿಗೆ ಅನ್ಯಾಯ ಬಗೆಯುವ ರೀತಿ ಯಲ್ಲಿ ಈ ಲೇಖನ ಬರೆಯಲ್ಪಟ್ಟಿದೆ ಎಂದು ಅನೇಕರ ನಂಬಿಗೆಯಾಗಿದೆ.

ತನ್ನ ಪಕ್ಷದ ಸಮರ್ಥನೆಯಲ್ಲಿ ಮಿಲ್ಟನ್ ತೋರುತ್ತಿದ್ದ ಉತ್ಸಾಹ, ವಹಿಸುತ್ತಿದ್ದ ಶ್ರಮ ಅಷ್ಟಿಷ್ಟಲ್ಲ. ಪರರ ತೃಪ್ತಿ ಗಾಗಿ ತಾನು ದುಡಿಯುತ್ತಿಲ್ಲ; ತನ್ನ ಧ್ಯೇಯಗಳಿಗಾಗಿ ಹೋರಾಡುತ್ತಿದ್ದೇನೆ ಎನ್ನುವ ಒಂದು ಹುಮ್ಮಸ್ಸಿನಿಂದ ಅವನು ತನ್ನ ಕಾರ್ಯವನ್ನು ಪೂರೈಸುತ್ತಿದ್ದ. ಆದರೆ ಈ ಅವಿರತ ವಾದ ಚಟುವಟಿಕೆಗಳು ಅವನ ದೇಹದ ಮೇಲೆ ಅನಿಷ್ಟ ಪರಿಣಾಮಗಳನ್ನುಂಟುಮಾಡದೆ ಇರಲಿಲ್ಲ. ಮೊದಲಿನಿಂದಲೂ ಅವನ ಕಣ್ಣುಗಳು ಅಶಕ್ತವಾಗಿಯೆ ಇದ್ದುವು. ಈ ಹೊತ್ತಿಗೆಂದರೆ ಒಂದು ಕಣ್ಣು ಪೂರಾ ಕಾಣ ದಂತಾಗಿತ್ತು. ಹೀಗಿದ್ದರೂ ೧೬೪೯ರ ಸಪ್ಟಂಬರ ತಿಂಗಳಲ್ಲಿ "ಸಲ್ಮಾಶಿಯಸ್" ಎಂಬ ವಿದ್ವಾಂಸನಿಂದ ರಾಜಪಕ್ಷ ದವರು "ಡಿಫೆನ್ಸಿಯೋ ರೆಜಿಯಾ" (ಅರಸು ಸಮರ್ಥನೆ) ಎಂಬ ಲ್ಯಾಟಿನ್ ಪುಸ್ತಕವನ್ನು ಬರೆಯಿಸಿದಾಗ ಮಿಲ್ಟನ್ನನು

"ಇಂಗ್ಲೀಷು ಜನತೆಯ ಸಮರ್ಥನೆ" ಎಂಬ ತನ್ನ ಪುಸ್ತಕದಿಂದ ಉತ್ತರಕೊಟ್ಟನು. "ಸಲ್ಮಾಸಿಯಸ್"—ಕ್ಲಾಡ್ ದ ಸುಮೇ—ಲ್ಯಾಟಿನ್ ಭಾಷೆಯಲ್ಲಿ ಪಾರಂಗತನಾದ ವಿದ್ವಾಂಸನಾಗಿದ್ದ. ಮಿಲ್ಟನ್ ಕೂಡ ತನ್ನ ಉತ್ತರವನ್ನು ಲ್ಯಾಟಿನ್ನಿನಲ್ಲಿಯೇ ಬರೆದಿದ್ದನು. ಅವನ ವಿದ್ವತ್ತೆಯನ್ನು, ವಾದಸರಣಿಯನ್ನು ಯುರೋಪು ಮೆಚ್ಚಿಕೊಂಡಿತು. ಇದರಿಂದ ಮಿಲ್ಟನ್ನನ ಹೆಸರು ಯುರೋಪಿನಲ್ಲೆಲ್ಲ ಮನೆಮಾತಾಯಿತು. ಆದರೆ ಇಂದು ನಾವು ಈ ಪುಸ್ತಿಕೆಯನ್ನು ನೋಡಿದಾಗ ಮಿಲ್ಟನ್ನನಂತಹ ಘನವಂತನು ಕೂಡ ವಾದಕ್ಕೆ ಬಿದ್ದಾಗ ಎಷ್ಟೊಂದು ಕೀಳು ರೀತಿಯಿಂದ ನಡೆದುಕೊಂಡನೆಂಬುದನ್ನು ಕಂಡು ಖಿನ್ನರಾಗುತ್ತೇವೆ. ತನ್ನ ವಿರೋಧಿಯನ್ನು "ಪರಮ ಮೂರ್ಖ" "ಆಲಿಸಿ" "ಮೂರ್ಖ ಪಂಡಿತ" "ತಲೆ ಕೆಟ್ಟ ಕೋಗಿಲೆ" ಎಂದು ಮುಂತಾಗಿ ಹೀಯಾಳಿಸುವದಕ್ಕೂ ಮಿಲ್ಟನ್ ಹಿಂದೆ ಮುಂದೆ ನೋಡಿಲ್ಲ.

ತನ್ನ ೪೩ನೆಯ ವರುಷದಲ್ಲಿ ಮಿಲ್ಟನ್ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡು ಕುರುಡನಾದ. ಅವನಿಗಾಗದವರು ಇದು ದೇವರು ಅವನ ಕೃತಿಗಳಿಗಾಗಿ ಇತ್ತ ಶಿಕ್ಷೆ ಎಂದು ಆಡಿಕೊಂಡರು. ಆದರೆ ಮಿಲ್ಟನ್ ತನ್ನ ಸ್ಥೈರ್ಯವನ್ನಾಗಲಿ ಈಶ್ವರನಲ್ಲಿದ್ದ ಶ್ರದ್ಧೆಯನ್ನಾಗಲಿ ಕಳೆದುಕೊಳ್ಳಲಿಲ್ಲ. "ಅಂಧನಾಗುವದಕ್ಕಿಂತಲೂ ಅಂಧತ್ವವನ್ನು ಸಹಿಸಲಾಗದಿರುವುದು ಹೇಯವಾದುದು" ಎಂದು ಅವನು ಸಾರಿದ; ಮತ್ತು ತನ್ನ ಆ ಸ್ಥಿತಿಯಲ್ಲಿಯೂ ದೇವತಾನುಗ್ರಹದ ಒಂದು ಪ್ರಕಾರವನ್ನೇ ಕಂಡುಕೊಂಡ. ಒಬ್ಬ

ಲೌಕಿಕದ ಜಂಜಡದಿಂದ ಪಾರಾಗಿ ಪರಮ ಸತ್ಯದ ಚಿಂತನೆಯಲ್ಲಿ ಕಾಲಕಳೆಯುವ ಒಂದು ಸುಸಂಧಿಯನ್ನು ತನಗೆ ತನ್ನ ಅಂಧತ್ವ ತಂದುಕೊಟ್ಟಿದೆ ಎಂದು ಅವನು ದೃಢವಾಗಿ ನಂಬಿದ. ಸುಂದರವಾದ ಕವಿತೆಯೊಂದರಲ್ಲಿ ಮಿಲ್ಟನ್ ಆಗಿನ ತನ್ನ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ. "ಈಶ್ವರನು ಮಾನವರಿಂದ ದುಡಿಮೆಯನ್ನಾಗಲೀ ಅಥವಾ ತಾನೇ ಅವರಿಗಿತ್ತಿರುವ ದಾನಗಳನ್ನಾಗಲಿ ಅಪೇಕ್ಷಿಸುವದಿಲ್ಲ. ಯಾರು ಅವನ ಕರುಣಾಮಯವಾದ ಆಳಿಕೆಯನ್ನು ಶಿರಸಾ ವಹಿಸಿ ಒಪ್ಪುತ್ತಾರೋ ಅವರೇ ಅವನ ನಿಜವಾದ ಸೇವಕರು. ಈಶ್ವರನ ಆಜ್ಞೆ ಹೊರಬೀಳುವದೆ ತಡ ಅದನ್ನು ಪಾಲಿಸಲು ಸಾವಿರಾರು ಸೇವಕರು ಸಿದ್ಧರಿದ್ದಾರೆ. ಸಿದ್ಧತೆಯಿಂದ ಅವನ ಆಜ್ಞೆಯನ್ನು ಪ್ರತೀಕ್ಷಿಸುತ್ತ ಕಾಯುವುದೂ ಅವನ ಸೇವೆಯೇ." ಈಶ್ವರನಲ್ಲಿ ಮಿಲ್ಟನ್ನನಿಗಿದ್ದ ಶ್ರದ್ಧೆ ಎಷ್ಟು ಆಳವಾಗಿದ್ದಿತೆಂಬುದನ್ನು ಈ ಭಾವನೆಗಳು ಚೆನ್ನಾಗಿ ತೋರಿಸಿಕೊಡುತ್ತವೆ.

ಅಂಧತ್ವದಿಂದಾಗಿ, ಮಿಲ್ಟನ್ನನಿಗೆ ವಿದೇಶಿ ಭಾಷೆಗಳ ಕಾರ್ಯದರ್ಶಿಯೆಂದು ತನ್ನ ಕಾರ್ಯ ನಡೆಯಿಸಿಕೊಂಡು ಹೋಗುವುದು ಕಠಿಣವಾಯಿತು. ಆದರೂ ಅವನ ಚಟುವಟಿಕೆಗಳು ನಿಲ್ಲಲಿಲ್ಲ. ಮತ್ತೊಮ್ಮೆ ಅವನ ಲೇಖನಿಯ ಸೇವೆ ಅವನ ಪಕ್ಷಕ್ಕೆ ಅವಶ್ಯವಾಯಿತು. "ರಾಜರಕ್ತದ ಕರೆ" ಎಂಬ ಪುಸ್ತಕ ಪ್ರಕಟವಾಗಿ ಸರಕಾರವನ್ನು ಚಿಂತೆಗೊಳಗಾಗಿಸಿತ್ತು. ಅದಕ್ಕೆ ಉತ್ತರವನ್ನು ಕೊಡುವ

ಹೊಣೆಯನ್ನು ಮಿಲ್ಟನ್ನನೇ ಹೊರಬೇಕಾಗಿ ಬಂದಿತು. ಈ ಪುಸ್ತಕವನ್ನು **ಮೋರಸ್** ಎಂಬವನು ಬರೆದಿರಬೇಕೆಂದು ಸಾಮಾನ್ಯವಾಗಿ ನಂಬಲಾಗಿತ್ತು. ೧೬೫೪ ರ ಮೇ ತಿಂಗಳಲ್ಲಿ "ಇಂಗ್ಲಿಷ್ ಜನಾಂಗದ ದ್ವಿತೀಯ ಸಮರ್ಥನೆ" ಎಂಬ ಪುಸ್ತಕವನ್ನು ಮಿಲ್ಟನ್ ಪ್ರಕಟಿಸಿದ. ಇದರಲ್ಲಿ ಹೆಚ್ಚು ಭಾಗ ಮೋರಸ್ಸನ ಮತ್ತು ಅವನ ಬೆಂಬಲಿಗರ ವೈಯಕ್ತಿಕ ಮತ್ತು ಕುತ್ಸಿತ ಟೀಕೆಯಿಂದ ತುಂಬಿದ್ದಿತು. ಆದರೆ ಈ ಪುಸ್ತಕ ಮಿಲ್ಟನ್ನನ ಜೀವನ ಚರಿತ್ರೆಯ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಇಲ್ಲಿ ಆನುಷಂಗಿಕವಾಗಿ ಬರುವ ಮಿಲ್ಟನ್ನನ ಆತ್ಮಕಥೆ ಅವನ ಚರಿತ್ರಕಾರರಿಗೆ ಬಹಳಷ್ಟು ಸಹಾಯ ಕಾರಿಯಾಗಿದೆ.

೧೬೫೬ ರ ನವ್ಹಂಬರ ತಿಂಗಳಲ್ಲಿ ಮಿಲ್ಟನ್ ಕ್ಯಾಥರೀನ್ ಉಡ್‌ಕಾಕ್ ಎಂಬವಳನ್ನು ಮದುವೆಯಾದನು. ಆದರೆ ಅವಳೂ ಸಹ ಬಹಳ ದಿವಸ ಬದುಕಲಿಲ್ಲ. ೧೬೫೮ ನೆಯ ಫೆಬ್ರುವರಿ ತಿಂಗಳಲ್ಲಿಯೇ ಅವಳ ಅಂತ್ಯವಾಯಿತು. ಮಿಲ್ಟನ್ನನ ವೈಯಕ್ತಿಕ ಜೀವನದಲ್ಲಿ ಇದು ಮತ್ತೊಂದು ಆಘಾತ.

ರಾಷ್ಟ್ರದ ರಾಜಕೀಯದಲ್ಲಿಯೂ ಮಹತ್ವದ ಸ್ಥಿತ್ಯಂತರ ಗಳು ನಡೆದವು. ೧೬೫೩ ರಿಂದ ೧೬೫೮ ರ ವರೆಗೆ ಅವ್ಯಾಹತ ವಾಗಿ ನಡೆದ ಕ್ರಾಮವೆಲ್ಲನ ಸರ್ವಾಧಿಕಾರತ್ವ ಮುಗಿದು ಪಾರ್ಲಿಮೆಂಟು ಮತ್ತೆ ಬಲಗೊಂಡಿತು. ೧೬೬೦ ರ ಸುಮಾ ರಿಗೆ ಇಂಗ್ಲಂಡಿನಲ್ಲಿ ಮತ್ತೆ ರಾಜರ ಆಳಿಕೆ ಪ್ರಾರಂಭವಾ

ಯಿತು. ಎರಡನೆಯ ಚಾರ್ಲ್ಸ್ ಅರಸನಾದ ಕೂಡಲೆ ಕ್ರಾಮ ವೆಲ್ಲನ ಬೆಂಬಲಿಗರ ಉಚ್ಚಾಟನೆಯ ಕಾರ್ಯ ಕೈಗೊಳ್ಳಲ್ಪಟ್ಟಿತು. ಆದರೆ ಚಾರ್ಲ್ಸ್‌ನ ಗಲ್ಲಿನ ಶಿಕ್ಷೆಯನ್ನು ಡಾಣಾ ಡಂಗುರವಾಗಿ ಸಮರ್ಥಿಸಿದ್ದ ಮಿಲ್ಟನ್ ತನ್ನ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡರೂ ಜೀವಸಹಿತ ಪಾರಾದನು. ಕೆಲದಿನಗಳ ವರೆಗೆ ಸೆರೆಯಲ್ಲಿರಬೇಕಾಯಿತಾದರೂ ಅದಕ್ಕಿಂತ ಹೆಚ್ಚಿನ ಶಿಕ್ಷೆ ಅವನಿಗೆ ದೊರೆಯಲಿಲ್ಲ. ಆ್ಯಂಡ್ರ್ಯೂ ಮಾರ್ವೆಲ್ಲ ಮೊದಲಾದ ಅವನ ಮಿತ್ರರು ಅವನನ್ನುಳಿಸಿಕೊಳ್ಳಲು ಶ್ರಮಿಸಿದುದೆ ಇದಕ್ಕೆ ಕಾರಣವಾಗಿರಬೇಕೆಂದು ನಂಬಲಾಗಿದೆ.

೭. ಪ್ಯಾರಡೈಜ್ ಲಾಸ್ಟ್

ತನ್ನ ಜೀವನದ ಕೊನೆಯ ದಿನಗಳಲ್ಲಿ ಮಿಲ್ಟನ್ ಬಹಳ ಕಷ್ಟಗಳನ್ನನುಭವಿಸಬೇಕಾಯಿತು. ಅಂಧತ್ವದಿಂದ ಉಂಟಾದ ಪರಾಧೀನತೆ, ಮಕ್ಕಳ ಔದಾಸೀನ್ಯ, ಬಡತನ-ಇವೆಲ್ಲವುಗಳ ತಾಪದಿಂದ ಅವನು ಬಳಲಿದ. ಆದರೆ ಅವನ ಬಾಳಿನಲ್ಲಿ ಹಿಮಾಲಯದಂತೆ ಅಚಲವಾಗಿ ನಿಂತಿದ್ದ ಶ್ರದ್ಧೆ-ಸ್ಥೈರ್ಯಗಳು ಒಂದಂಗುಲವೂ ಅಗಲಲಿಲ್ಲ. ತನ್ನ ಭೂತ ಜೀವನದ ಯಾವ ಕೃತಿಯ ಬಗೆಗೂ ಮಿಲ್ಟನ್ ಪಶ್ಚಾತ್ತಾಪ ಪಡಲಿಲ್ಲ. ಈ ದಿನಗಳಲ್ಲಿ ಬಂದ ಕಷ್ಟಗಳನ್ನು ಧೈರ್ಯದಿಂದ ಸಹಿಸಿದನಿಷ್ಟೆ ಅಲ್ಲದೆ **ಪ್ಯಾರಡೈಜ್ ಲಾಸ್ಟ್**ದಂತಹ ಮೇರು ಕೃತಿಯ ರಚನೆಯನ್ನು ಪೂರೈಸಿ ತನ್ನ ಕೀರ್ತಿ ವಿಶ್ವದಲ್ಲಿ ಆಚಂದ್ರಾರ್ಕವಾಗಿ ನಿಲ್ಲುವಂತೆ ಮಾಡಿದ.

ಪ್ಯಾರಡೈಜ್ ಲಾಸ್ಟ್ ೨೦ನೆಯ ಅಗಸ್ಟ ೧೬೬೭ರಂದು ಪ್ರಕಾಶಿತವಾದರೂ ೧೬೬೬ರ ಕೊನೆಯ ಒಳಗಾಗಿಯೇ ಅದು ಪೂರ್ಣವಾಗಿ ರಚಿತವಾಗಿತ್ತು ಎಂದು ನಂಬಲಾಗಿದೆ. ಒಂದು ದೃಷ್ಟಿಯಿಂದ **ಪ್ಯಾರಡೈಜ್ ಲಾಸ್ಟ್** ಕೃತಿಯ ರಚನೆಗೆ ಆರಂಭವಾದುದು ಮಿಲ್ಟನ್‌ನ ಜಾಗ್ರತ ಜೀವನ ಮೊದಲುಗೊಂಡಂದಿನಿಂದಲೇ ಎಂದು ಹೇಳಬಹುದು. ಅಂತಹ

ಕೃತಿಯ ರಚನೆಗಾಗಿಯೇ ಅವನು ತನ್ನ ಬಾಲ್ಯ–ತಾರುಣ್ಯ ಗಳಲ್ಲೆಲ್ಲ ಶ್ರಮಿಸಿ ಎಲ್ಲ ತರಹದ ಸಿದ್ಧತೆಯನ್ನೂ ಮಾಡಿಕೊಂಡಿದ್ದನು. ಇಂಗ್ಲಿಷ್, ಲ್ಯಾಟಿನ್, ಗ್ರೀಕ್, ಹಿಬ್ರೂ ಭಾಷೆಗಳ ಮೇಲೆ ಪ್ರಭುತ್ವವನ್ನು ಸಂಪಾದಿಸಿದ್ದಲ್ಲದೆ ದೇಶವಿದೇಶಗಳಲ್ಲಿ ಪರ್ಯಟನ ಮಾಡಿ ತನ್ನ ಅನುಭವವನ್ನು ವಿಸ್ತಾರವಾಗಿ ಬೆಳೆಸಿಕೊಂಡಿದ್ದನು. ಶ್ರೇಷ್ಠ ಸಾಹಿತ್ಯವನ್ನು ನಿರ್ಮಿಸುವವನ ಬಾಳು ಒಳ್ಳೆಯದೂ ಪವಿತ್ರವಾದುದೂ ಇರಬೇಕೆಂದು ದೃಢವಾಗಿ ನಂಬಿದ್ದ ಅವನು ಧರ್ಮಮಾರ್ಗದಲ್ಲಿಯೆ ತನ್ನ ಜೀವನವನ್ನು ನಡೆಯಿಸಿಕೊಂಡು ಬಂದಿದ್ದನು. ಇವೆಲ್ಲಕ್ಕಿಂತ ಹೆಚ್ಚಾಗಿ, ತನ್ನ ಸರ್ವಶಕ್ತಿಗಳನ್ನು ಸಂಪೂರ್ಣವಾಗಿ ಪರಮಾತ್ಮನ ಸೇವೆಯಲ್ಲಿ ವಿನಿಯೋಗಿಸುವುದೆ ತನ್ನ ಆದ್ಯ ಕರ್ತವ್ಯ, ಹಾಗೆ ಮಾಡದೆ ಹೋದಲ್ಲಿ ತನ್ನ ಬಾಳು ಸಫಲವಾದಂತಾಗುವುದಿಲ್ಲ ಎನ್ನುವ ಒಂದು ಅರಿವನ್ನೂ ಅವನು ನಿಚ್ಚಳವಾಗಿ ಉಳಿಸಿಕೊಂಡು ಬಂದಿದ್ದನು.

ಪ್ಯಾರಡೈಜ್ ಲಾಸ್ಟ್ ಮಹಾಕಾವ್ಯವು ಪಾಶ್ಚಾತ್ಯ ಮಹಾಕಾವ್ಯದ ರೀತಿಯನ್ನವಲಂಬಿಸಿಯೆ ಬರೆದುದಾದರೂ ಹೋಮರ್, ವರ್ಜಿಲ್ ಮೊದಲಾದವರ ಕೃತಿಗಳನ್ನು ಮೀರಿದ ಒಂದು ಉದ್ದೇಶವನ್ನು ಮಿಲ್ಟನ್ ತನ್ನೆದುರು ಇಟ್ಟುಕೊಂಡಿದ್ದನು. ಸೃಷ್ಟಿಕರ್ತನು ನಿಷೇಧಿಸಿದ ಫಲ ವಿಶೇಷವನ್ನು ಸವಿಯುವುದರಲ್ಲಿ ಮಾನವನು ತೋರಿದ ಪ್ರಪ್ರಥಮ ಅವಿಧೇಯತೆ, ಆ ಅವಿಧೇಯತೆಯ ಫಲವಾಗಿ

ಮಾನವ ಲೋಕವನ್ನೇ ಮುತ್ತಿದ ಭಯಂಕರ ಪರಿಣಾಮ
ಗಳು, ನಂತರ ಕ್ರೈಸ್ತನ ಮಹಾತ್ಯಾಗದಿಂದ ಸಾಧ್ಯವಾದ
ಮಾನವನ ಉದ್ಧಾರ— ಇದು **ಪ್ಯಾರಡೈಜ್ ಲಾಸ್ಟಿನ**
ಕಾವ್ಯವಸ್ತುವಾದರೂ, ಅದರ ನಿಜವಾದ ಉದ್ದೇಶ—
ಮಿಲ್ಟನ್ನನೇ ಹೇಳಿದಂತೆ— ಪರಮಾತ್ಮನ ರೀತಿ ನೀತಿಗಳ
ನ್ಯಾಯಪರತೆಯನ್ನು ಮಾನವರಲ್ಲಿ ಬಿಂಬಿಸುವದಾಗಿತ್ತು.
ಪ್ಯಾರಡೈಜ್ ಲಾಸ್ಟಿನಲ್ಲಿ ಮಿಲ್ಟನ್ ತಾನು ಹೇಳಿದ ಕಥೆ
ಯನ್ನು ಅಕ್ಷರಶಃ ಸತ್ಯವೆಂದು ನಂಬಿದ್ದನೆನ್ನುವದು ನಿಜ;
ಆದರೆ ಆ ಕಥೆಯ ಹಿಂದಣ ಒಂದು ತತ್ವವನ್ನು ಸೃಷ್ಟಿಯ
ಆಗುಹೋಗುಗಳಲ್ಲಿರುವ ಪರಮಾತ್ಮನ ಕೈವಾಡವನ್ನು
ಒಡೆದು ತೋರಿಸುವ ಒಂದು ಮಹತ್ವಾಕಾಂಕ್ಷೆ ಮಿಲ್ಟನ್ನನಲ್ಲಿ-
ದ್ದಿತೆಂಬುದೂ ನಿರ್ವಿವಾದ. ಇದೇ ತೆರನಾದ ಒಂದು ಉದ್ದೇಶ
ವನ್ನು **'ರಾಮಾಯಣದರ್ಶನ'**ದ ಕರ್ತಾರರಾದ ಕುವೆಂಪು
ರವರಲ್ಲಿಯೂ ನಾವು ಕಾಣುತ್ತೇವೆ. ಅವರೇ ಎತ್ತಿ
ತೋರಿದಂತೆ ಅವರ ಕೃತಿ :

"ಇತಿಹಾಸಮಲ್ತು; ಬರಿ ಕಥೆಯಲ್ತು; ಕಥೆ ತಾಂ
ನಿಮಿತ್ತ ಮಾತ್ರಂ, ಆತ್ಮಕೆ ಶರೀರದೋಲಂತೆ.
ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ
ರಾಮರೂಪದ ಪರಾತ್ಪರನ ಪುರುಷೋತ್ತಮನ
ಲೋಕಲೀಲಾದರ್ಶನಂ."

ಪ್ಯಾರಡೈಜ್ ಲಾಸ್ಟಿನ ಕಥೆಯನ್ನು ಸಂಗ್ರಹರೂಪವಾಗಿ
ಹೀಗೆ ಹೇಳಬಹುದು :

ಸಂಪುಟ ೧. **ಪ್ಯಾರಡೈಜ್ ಲಾಸ್ಟಿನ** ಕಥೆ ಆದಿಯಿಂದ ಅಂತ್ಯದ ವರೆಗೆ ಏಕಸೂತ್ರವಾಗಿ ಹೇಳಲ್ಪಡದೆ ಮಧ್ಯದಲ್ಲಿ ಪ್ರಾರಂಭವಾಗುತ್ತದೆ. ಇದು ಪಾಶ್ಚಾತ್ಯ ಮಹಾ ಕಾವ್ಯದ ಸಂಪ್ರದಾಯಗಳಲ್ಲೊಂದಾಗಿದೆ. ನಾವು ಇಲ್ಲಿ ಮೊತ್ತಮೊದಲು ಕಾಣುವುದು ಕತ್ತಲೆಯಲ್ಲಿ ಮುಳುಗಿದ, ದುಃಖದ ಬೀಡಾದ ನರಕದ ದೃಶ್ಯವನ್ನು. ಪರಮೇಶ್ವರನ ವಿರುದ್ಧ ಬಂಡೆಬ್ಬಿಸಿದ ಮಹಾಪರಾಧಕ್ಕಾಗಿ ಸ್ವರ್ಗದಿಂದ ಹೊರದೂಡಲ್ಪಟ್ಟ ಸೇಟನ್ ಮತ್ತು ಅವನ ಅನುಯಾಯಿಗಳು ನರಕದಲ್ಲಿ ಬಿದ್ದು ಒಂಬತ್ತು ದಿನಗಳಾಗಿವೆ. ಭಯಂಕರವಾಗಿ ಉರಿಯುತ್ತಿರುವ ಜ್ವಾಲೆಗಳ ಮಧ್ಯದಲ್ಲಿ, ಅಗ್ನಿಸರೋವರಗಳಲ್ಲಿ ಅವರೆಲ್ಲರೂ ಮೂಢರಾಗಿ ಬಿದ್ದುಕೊಂಡಿದ್ದಾರೆ. ಸೇಟನನೊಬ್ಬನೆ ಎಚ್ಚರಗೊಂಡು ಸುತ್ತಲೆಲ್ಲ ತನ್ನ ದೃಷ್ಟಿಯನ್ನು ಹರಿಬಿಟ್ಟು ಅಸಹಾಯಕರಾದ ತನ್ನ ಅನುಯಾಯಿಗಳನ್ನು ನೋಡುತ್ತಾನೆ. ಸೋತು ನರಕಕ್ಕೆ ದೂಡಲ್ಪಟ್ಟಿದ್ದರೂ ಅವನ ದುರಭಿಮಾನ—ಮಹತ್ವಾಕಾಂಕ್ಷೆಗಳು ಅಳಿದಿಲ್ಲ. ಸಿಂಹಗರ್ಜನೆಯಿಂದ ತನ್ನವರೆಲ್ಲರನ್ನೂ ಎಬ್ಬಿಸಿ ಅವರಲ್ಲಿ ಹೊಸ ಆಸೆ-ಉತ್ಸಾಹಗಳನ್ನು ತುಂಬಲು ಪ್ರಯತ್ನಿಸುತ್ತಾನೆ. ಸೇಡಿನ ಭಾವನೆ ಅವರಲ್ಲಿ ಪ್ರಜ್ವಲಿಸುವಂತೆ ಮಾಡಿ ಸ್ವರ್ಗವನ್ನು ಮರಳಿ ಪಡೆವ, ಅದಿಲ್ಲದೆ ಹೋದರೆ ಬೇರೊಂದು ರೀತಿಯಿಂದ ತನ್ನ ವೈರಿಯಾದ ಪರಮೇಶ್ವರನಿಗೆ ಕೇಡನ್ನು ಬಗೆವ ಮಾರ್ಗವನ್ನು ಹುಡುಕಬೇಕೆನ್ನುವ ತನ್ನ ವಿಚಾರವನ್ನು ಅವರ ಮುಂದಿಡುತ್ತಾನೆ; ಮತ್ತು ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಲು ಸಭೆಗೂಡ

ಬೇಕೆಂದು ಇಚ್ಛಿಸುತ್ತಾನೆ. ಕ್ಷಣಾರ್ಧದಲ್ಲಿ ಭವ್ಯವಾದ ಪ್ಯಾಂಡೆಮೋನಿಯಮ್ ಅರಮನೆ ಕಟ್ಟಲ್ಪಡುತ್ತದೆ. ಮುಖಂಡ ರೆಲ್ಲರೂ ಅಲ್ಲಿ ಒಟ್ಟುಗೂಡುತ್ತಾರೆ.

ಸಂಪುಟ ೨. ಸಭೆಯಲ್ಲಿ ಮೊತ್ತಮೊದಲು ಚರ್ಚೆಗೆ ಬರುವ ವಿಷಯವೆಂದರೆ, ಸ್ವರ್ಗವನ್ನು ಮರಳಿ ಪಡೆಯಲು ಮತ್ತೊಮ್ಮೆ ಪರಮೇಶ್ವರನೊಂದಿಗೆ ಯುದ್ಧವನ್ನು ಹೂಡ ಬೇಕೋ, ಬೇಡವೋ ಎನ್ನುವುದು. ಯುದ್ಧದ ವಿಚಾರಕ್ಕೆ ಕೆಲ ಮುಖಂಡರು ಬೆಂಬಲವಿತ್ತರೆ ಮತ್ತೆ ಕೆಲವರು ಅದನ್ನು ವಿರೋಧಿಸುತ್ತಾರೆ. ಕೊನೆಗೆ **ಬೀಲ್ಜುಬಬ್** ಸಭೆಯೆದುರು ಒಂದು ಸೂಚನೆಯನ್ನು ಮಂಡಿಸುತ್ತಾನೆ. ಅದೆಂದರೆ ಹೊಸದಾಗಿ ಸೃಷ್ಟಿಗೊಂಡ ಮಾನವನನ್ನು ಮತ್ತು ಅವನಿಗೆ ಕೊಡಲ್ಪಟ್ಟ ಸುಖಮಯವಾದ ಜಗತ್ತನ್ನು ಹಾಳು ಮಾಡು ವುದು, ತನ್ಮೂಲಕ ಪರಮೇಶ್ವರನ ಮೇಲಿನ ಸೇಡನ್ನು ತೀರಿಸಿ ಕೊಳ್ಳುವುದು. ಈ ವಿಚಾರ ಎಲ್ಲರಿಗೂ ಒಪ್ಪಿತವಾಗುತ್ತದೆ. ಆದರೆ ರಕ್ಷಕ ದೇವತೆಗಳ ಕಣ್ಣು ತಪ್ಪಿಸಿ ಆ ಜಗತ್ತನ್ನು ಹುಡು ಕಲು ಯಾರನ್ನು ಕಳುಹುವದೆನ್ನುವ ಪ್ರಶ್ನೆ ಅವರ ಮುಂದೆ ಬಂದಾಗ ಸೇಟನನ್ನುಳಿದು ಯಾರೂ ಆ ಕೆಲಸಕ್ಕೆ ಧೈರ್ಯ ಮಾಡುವುದಿಲ್ಲ. ತಾನೊಬ್ಬನೆ ಈ ಭಯಂಕರವಾದ ಕಾರ್ಯವನ್ನು ಕೈಕೊಂಡು ನೆರವೇರಿಸುವುದಾಗಿ ಸೇಟನ ಭರವಸೆ ಕೊಡುತ್ತಾನೆ. ಅವನ ಗುಣಗಾನದೊಂದಿಗೆ ಸಭೆ ಮುಕ್ತಾಯಗೊಳ್ಳುತ್ತದೆ. ಎಲ್ಲರೂ ತಮ್ಮ ಮನ

ಬಂದಂತೆ ವೇಳೆ ಕಳೆಯಲು ಪ್ಯಾಂಡೆಮೋನಿಯಮ್ಮಿನಿಂದ ತೆರಳುತ್ತಾರೆ.

ಇತ್ತ ಸೇಟನ್ ತೀವ್ರಗತಿಯಿಂದ ಸಾಗುತ್ತ ನರಕದ ಹೆಬ್ಬಾಗಿಲಿಗೆ ಬರುತ್ತಾನೆ. ಮತ್ತು ಅಲ್ಲಿ ಭದ್ರವಾದ ಕಾವ ಲಿಟ್ಟಿರುವ **ಪಾಪ** ಮತ್ತು **ಮೃತ್ಯು** ಇವರನ್ನು ಕಾಣುತ್ತಾನೆ. ಮೃತ್ಯುವಿನೊಡನೆ ಸಂಘರ್ಷಣೆ ನಡೆಯುವಷ್ಟರಲ್ಲಿ ಅವನು ಪಾಪದೇವತೆಯಿಂದ ತನಗೆ ಹುಟ್ಟಿದ ಮಗನೆಂದು ಸೇಟನ ನಿಗೆ :ತಿಳಿದುಬರುತ್ತದೆ. ಮೃತ್ಯುವಿನ ತಾಯಿ ಪಾಪ ದೇವತೆ ಸೇಟನನಿಂದಲೇ ಹುಟ್ಟಿದವಳು; ಅವನ ಪ್ರೇಮ ಪಾತ್ರಳೂ ಅಹುದು. ಹೀಗಾಗಿ ನರಕದಿಂದ ಪಾರಾಗುವು ದರಲ್ಲಿ ಸೇಟನನಿಗೆ ತೊಂದರೆಯಾಗುವುದಿಲ್ಲ.

ಹೊರಬಂದಾಗ ಅಂತ್ಯವಿಲ್ಲದ, ಪಾರವಿಲ್ಲದ ಒಂದು ಮಹಾಸಾಗರದಂತೆ ಹಬ್ಬಿದ ತಮೋಲೋಕ ಸೇಟನನ ದೃಷ್ಟಿಗೆ ಬೀಳುತ್ತದೆ. ಇದು ಅರಾಜಕತೆಯ ರಾಜ್ಯ. ಎಲ್ಲೆಲ್ಲಿಯೂ ಅವ್ಯವಸ್ಥೆ, ಅಶಾಂತಿ, ಮಹಾಭೂತಗಳ ಸಂಘರ್ಷಣೆ ತೆರಪಿಲ್ಲದೆ ನಡೆದಿದೆ. **ತಮೋರಾಜ** ಮತ್ತು **ನಿಶಾದೇವತೆ** ಇಲ್ಲಿಯ ರಾಜರಾಣಿಯರು. ಸೇಟನನು ಬಹು ಪ್ರಯಾಸದಿಂದ ತನ್ನ ಪ್ರಯಾಣವನ್ನು ಮುಂದುವರಿಸಿ ಇವರಿದ್ದಲ್ಲಿಗೆ ಬಂದು ಸೇರುತ್ತಾನೆ. ಮತ್ತು ಸ್ವರ್ಗದ ಅಥವಾ ಭೂಲೋಕದ ದಾರಿಯನ್ನು ತನಗೆ ತೋರಲು ಅವರಲ್ಲಿ ಕೇಳಿಕೊಳ್ಳುತ್ತಾನೆ. ಕೇಡು, ಹಾನಿಗಳಲ್ಲಿಯೇ

ಸಂತೋಷವನ್ನು ಪಡೆಯುತ್ತಿದ್ದ ತಮೋರಾಜನಿಗೆ ಸೇಟನ ನನ್ನು ಕಂಡು ಆನಂದವಾಗುತ್ತದೆ. ಮತ್ತು ಸಂತೋಷ ದಿಂದ ಅವನಿಗೆ ಭೂಲೋಕದ ಸೃಷ್ಟಿಯ ವಿಚಾರವನ್ನು, ಅದು ಇರುವ ಸ್ಥಳವನ್ನು ತಿಳಿಸಿಕೊಡುತ್ತಾನೆ. ಸೇಟನ್ ಅದೆಲ್ಲವನ್ನು ಕೇಳಿಕೊಂಡು ಇಮ್ಮಡಿ ಉತ್ಸಾಹದಿಂದ ಮುಂದೆ ಹಾರುತ್ತಾನೆ. ಪಾಪ, ಮೃತ್ಯು ಅವನನ್ನು ಹಿಂಬಾ ಲಿಸುತ್ತಾರೆ.

ಸಂಪುಟ ೩. ಇತ್ತ ದೇವತೆಗಳ ಮಧ್ಯದಲ್ಲಿ ಸಿಂಹಾಸನಸ್ಥ ನಾಗಿ ತನ್ನ ಸೃಷ್ಟಿಯೆಲ್ಲವನ್ನೂ ನಿರೀಕ್ಷಿಸುತ್ತಿದ್ದ ಪರಮೇ ಶ್ವರನಿಗೆ ಸೇಟನನು ಭೂಲೋಕದತ್ತ ಧಾವಿಸುತ್ತಿರುವುದು ಕಾಣಿಸುತ್ತದೆ. ಆಗ ಆತನು ತನ್ನ ಪುತ್ರನಿಗೆ ಅವನನ್ನು ತೋರಿಸಿ ಸೇಟನನು ತನ್ನ ದುಷ್ಟಕಾರ್ಯದಲ್ಲಿ ಯಶಸ್ವಿಯಾ ಗುವನೆಂಬ ವಿಷಯವನ್ನು ತಿಳಿಸಿ ಹೇಳುತ್ತಾನೆ. ಇದಲ್ಲದೆ, ಮಾನವನನ್ನು ತಾನು ಸಾಕಷ್ಟು ಸಶಕ್ತನನ್ನಾಗಿ, ಸ್ವತಂತ್ರ ನನ್ನಾಗಿ ನಿರ್ಮಿಸಿರುವುದರಿಂದ ಮುಂಬರುವ ಆತನ ಪತ ನದ ಹೊಣೆ ಅವನ ಮೇಲೆಯೇ ಇದೆ ಎನ್ನುವ ಮಾತನ್ನು ಸ್ಪಷ್ಟಗೊಳಿಸುತ್ತಾನೆ. ಮತ್ತು ಮಾನವನ ಅಧಃಪಾತಕ್ಕೆ ಸೇಟನನ ಕುಹಕತನ ಕಾರಣವಾಗಲಿರುವುದರಿಂದ ಅವ ನನ್ನು ಕೊನೆಗೆ ತಾನು ಕ್ಷಮಿಸಲಿರುವುದಾಗಿಯೂ ಆಶ್ವಾಸನ ವನ್ನೀಯುತ್ತಾನೆ. ಹೀಗಿದ್ದರೂ ತಪ್ಪಿಗೆ ತಕ್ಕ ಶಿಕ್ಷೆಯಾಗಲೇ ಬೇಕಾಗುವುದರಿಂದ ಮಾನವನ ಮೇಲೆ ಕೆಲ ಅನಿಷ್ಟ ಪರಿಣಾಮಗಳಾಗುವುದನ್ನು ಯಾರಿಂದಲೂ ತಪ್ಪಿಸಲಾಗುವು

ದಿಸ್ಲಿ; ಅವನು ಶಿಕ್ಷೆಯನ್ನು ಅನುಭವಿಸಲೇಬೇಕು; ಅಥವಾ ಅವನ ಪರವಾಗಿ ಮತ್ತಾರಾದರೂ ಆ ಶಿಕ್ಷೆಗೆ ಗುರಿಯಾಗ ಬೇಕು — ಎನ್ನುವದು ಪರಮೇಶ್ವರನ ನಿರ್ಧಾರವಾಗಿರು ತ್ತದೆ. ಈ ನಿರ್ಧಾರವನ್ನು ಕೇಳಿದ ದೇವಪುತ್ರನು ಸ್ವಸಂತೋಷದಿಂದ ಮಾನವನ ಉದ್ಧಾರಕ್ಕಾಗಿ ತಾನು ಶಿಕ್ಷೆಯನ್ನನುಭವಿಸಲು ಮುಂದೆ ಬರುತ್ತಾನೆ. ಪರಮೇಶ್ವ ರನು ತನ್ನ ಪುತ್ರನ ಈ ಕೃತಿಯನ್ನು ಬಹುವಾಗಿ ಮೆಚ್ಚಿ ಸಮಸ್ತ ದೇವತೆಗಳನ್ನು ಮೀರಿದ ಒಂದು ಗೌರವವನ್ನು ಅವನಿಗೆ ಕೊಡುತ್ತಾನೆ. ಎಲ್ಲರೂ ತಂದೆ ಮಕ್ಕಳನ್ನು ಕೊಂಡಾಡುತ್ತಾರೆ.

ಇತ್ತ ಸೇಟನನು ಊರಿಯಲ್ ಎಂಬ ರಕ್ಷಕದೇವತೆ-ಯನ್ನು ಛದ್ಮವೇಷದಿಂದ ವಂಚಿಸಿ ಅವನಿಂದ ಭೂಲೋಕದ ಹಾದಿಯನ್ನು, ಮಾನವನ ವಾಸಸ್ಥಳವನ್ನು ಅರಿತುಕೊಳ್ಳು ತ್ತಾನೆ ಮತ್ತು ಆ ದಿಶೆಯಲ್ಲಿ ತನ್ನ ಪ್ರಯಾಣವನ್ನು ಮುಂದುವರಿಸುತ್ತಾನೆ.

ಸಂಪುಟ ೪. ನಿಫೇಟಿಸ್ ಶಿಖರದಲ್ಲಿ ನಿಂತು ಭೂಲೋಕ ವನ್ನು ನಿರೀಕ್ಷಿಸುತ್ತಿದ್ದಂತೆ ಸೇಟನನ ಮನಸ್ಸು ಭಾವನೆ ಗಳ ಹೊಯ್ದಾಟಕ್ಕೆ ಸಿಕ್ಕಿಬೀಳುತ್ತದೆ. ಕ್ರೋಧ, ಅಸೂಯೆ ಗಳ ಕಾಳ್ಗಿಚ್ಚಿನಲ್ಲಿ ಸಿಕ್ಕು ಪ್ರದೀಪ್ತವಾದ ಅವನ ದೈವೀ ಶರೀರ ಕಪ್ಪಿಡುತ್ತದೆ. ಮೊದಲಿದ್ದ ಉತ್ಸಾಹ ಮಾಯವಾಗಿ ಒಂದು ವಿಧವಾದ ನಿರಾಶೆ ಅವನನ್ನು ಮುತ್ತುತ್ತದೆ. ಆದರೆ

ಅದಮ್ಯವಾದ ದುರಹಂಕಾರದಿಂದ ತುಂಬಿದ ಅವನ ಹೃದಯ ದಲ್ಲಿ ಪಶ್ಚಾತ್ತಾಪಕ್ಕೆ ಎಡೆಯಿಲ್ಲ. "Evil, be thou my Good" ಎಂದು ಒಳ್ಳೆಯದಕ್ಕೆ ಶರಣು ಹೊಡೆದು ಕೇಡನ್ನೇ ಅಪ್ಪಿಕೊಳ್ಳುತ್ತಾನೆ.

ಪ್ಯಾರಡೈಜಿನ ಗಡಿಯವರೆಗೂ ಬಂದು ಸೇಟನ್ ಪೂರ್ವದಿಕ್ಕಿಗಿರುವ ಅದರ ಬಾಗಿಲವನ್ನು ನೋಡುತ್ತಾನೆ. ಮತ್ತು ಒಂದೇ ಜಿಗಿತಕ್ಕೆ ಅಲ್ಲಿಗೆ ಹಾರಿ ಒಳಕ್ಕೆ ನುಗ್ಗುತ್ತಾನೆ. ಅಸಂಖ್ಯ ಜೀವರಾಶಿಯ ಮಧ್ಯದಲ್ಲಿ ಅಲ್ಲಿನ ರಾಜ ರಾಣಿಯ ರಂತೆ ಒಪ್ಪುತ್ತಿದ್ದ **ಆ್ಯಡಮ್** ಮತ್ತು **ಈವ್** ಅವನ ಕಣ್ಣಿಗೆ ಬೀಳುತ್ತಾರೆ. ಬೇರೆ ಬೇರೆ ಪ್ರಾಣಿಗಳ ರೂಪವನ್ನು ಧರಿಸಿ ಅವರ ಸುತ್ತು ಸುಳಿದಾಡುತ್ತ ಸೇಟನನು ಅವರಾಡುವ ಮಾತುಗಳನ್ನು ಕೇಳಿಕೊಳ್ಳುತ್ತಾನೆ. ಜ್ಞಾನವೃಕ್ಷ (Tree of Knowledge) ದ ಫಲಗಳನ್ನು ಅವರು ತಿನ್ನಬಾರದೆಂದು ವಿಧಿಸಿರುವ ಪರಮೇಶ್ವರನ ಕಟ್ಟಪ್ಪಣೆಯ ವಿಷಯ ಆ್ಯಡಮ್– ಈವ್‌ರ ಮಾತುಕತೆಗಳಿಂದ ಸೇಟನನಿಗೆ ತಿಳಿದು ಬರುತ್ತದೆ. ಮತ್ತು ಪರಮಾತ್ಮನಿಗೆ ಆ್ಯಡಮ್–ಈವ್‌ರು ಅವಿಧೇಯರಾಗಿ ನಡೆದುಕೊಳ್ಳುವಂತೆ ಮಾಡುವುದೇ ತನ್ನ ಕಾರ್ಯವೆಂದು ಅವನಿಗೆ ಸ್ಪಷ್ಟವಾಗುತ್ತದೆ.

ಇತ್ತ ಸೇಟನನ ಚಟುವಟಿಕೆಗಳನ್ನು ನಿರೀಕ್ಷಿಸುತ್ತಲೆ ಇದ್ದ **ಊರಿಯಲ್** ಪ್ಯಾರಡೈಜ್‌ದ ರಕ್ಷಕನಾದ **ಗೇಬ್ರಿ-ಯಲ್**‌ನನ್ನು ಎಚ್ಚರಿಸುತ್ತಾನೆ. ಅಷ್ಟೊತ್ತಿಗೆ ರಾತ್ರಿಯಾದುದ-

ರಿಂದ ಗೇಬ್ರಿಯಲ್ಲಿನು ಆ್ಯಡಮ್-ಈವ್ಹರ ರಕ್ಷಣೆಗೆ ಯೋಗ್ಯ ವಾದ ಕ್ರಮಗಳನ್ನು ಕೂಡಲೆ ಕೈಕೊಂಡು ಈರ್ವರು ಬಲಿಷ್ಠರಾದ ದೇವತೆಗಳನ್ನು ಆ್ಯಡಮ್‌ನ ಕುಟೀರವನ್ನು ರಕ್ಷಿಸಲು ನಿಯಮಿಸುತ್ತಾನೆ. ಅವರು, ಮಲಗಿದ ಈವ್ಹಳ ಕಿವಿಯಲ್ಲಿ ಏನನ್ನೋ ಉಸಿರುತ್ತಿದ್ದ ಸೇಟನನನ್ನು ಹಿಡಿದು ಗೇಬ್ರಿಯಲ್‌ನಿದ್ದಲ್ಲಿಗೆ ತರುತ್ತಾರೆ. ಸೇಟನನು ಗೇಬ್ರಿಯಲ್ ನೊಡನೆ ಕಾದುವುದಕ್ಕೆ ಸಿದ್ಧನಾಗುತ್ತಿದ್ದಾಗ ತಾನು ಸೋಲು ವದು ನಿಶ್ಚಿತವೆಂದು ಕೆಲ ಸೂಚನೆಗಳಿಂದ ಅವನಿಗೆ ತಿಳಿದು ಬರುತ್ತದೆ. ಒಡನೆಯೇ ಅಲ್ಲಿಂದ ಅವನು ಕಾಲು ಕೀಳುತ್ತಾನೆ.

ಸಂಪುಟ ೫-೬. ಬೆಳಗಾಗಲು, ಈವ್ಹಳು "ಜ್ಞಾನವೃಕ್ಷದ ಫಲಗಳನ್ನು ಸೇವಿಸಿ ದೇವತೆಗಳಂತೆ ನೀವಾಗಬಾರದೇಕೆ?" ಎನ್ನುವ ಒಂದು ಆಹ್ವಾನವನ್ನು ತಾನು ಕನಸಿನಲ್ಲಿ ಕೇಳಿದುದಾಗಿ ಆ್ಯಡಮ್‌ನಿಗೆ ತಿಳಿಸುತ್ತಾಳೆ. ಆ್ಯಡಮ್‌ನು ಅಂತಹ ದುಷ್ಟವಿಚಾರಗಳಿಗೆ ಸೋಲದಿರಲು ಅವಳನ್ನು ಎಚ್ಚರಿಸುತ್ತಾನೆ. ನಂತರ ಇಬ್ಬರೂ ಕೂಡಿ ದಿನದ ದುಡಿಮೆಗಾಗಿ ಹೊರಡುತ್ತಾರೆ. ಆ ಹೊತ್ತಿಗೆ ಪರಮೇಶ್ವ ರನು ಆ್ಯಡಮ್‌ನನ್ನು ಎಚ್ಚರಿಸಲೋಸುಗ, ಅವನಿಗೆ ಅವನ ಶತ್ರುವಿನ ಸಾದ್ಯಂತ ಸಮಾಚಾರವನ್ನು ತಿಳಿಸಲೋಸುಗ **ರಾಫೇಲ್** ಎಂಬ ದೇವತೆಯನ್ನು ಪ್ಯಾರಡೈಜಿಗೆ ಕಳುಹಿಸಿ ಕೊಡುತ್ತಾನೆ. ಆ್ಯಡಮ್-ಈವ್ಹರು ಬಹು ಸಂತೋಷದಿಂದ **ರಾಫೇಲ್**ನನ್ನು ಸ್ವಾಗತಿಸಿ ತಮ್ಮ ಕುಟೀರಕ್ಕೆ ಅವನನ್ನು

ಕರೆತಂದು ಅವನಿಗೆ ಆತಿಥ್ಯವನ್ನು ನೀಡುತ್ತಾರೆ. ಆಗ ರಾಫೇಲ್ ಅವರಿಗೆ ಸೇಟನನ ವಿಷಯವನ್ನು ವಿವರವಾಗಿ ತಿಳಿಸುತ್ತಾನೆ. ದೇವಲೋಕದಲ್ಲಿ ನಡೆದ ಘನಘೋರ ಯುದ್ಧ, ಅದರ ಭೀಕರ ಪರಿಣಾಮಗಳು — ಇವುಗಳ ವರ್ಣನೆ ಇಲ್ಲಿ ಬರುತ್ತದೆ.

ಸಂಪುಟ ೭–೮. ಆ್ಯಡಮ್‌ನ ಪ್ರಾರ್ಥನೆಯನ್ನು ಮನ್ನಿಸಿ **ರಾಫೇಲ್** ಅವನಿಗೆ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿದ ರೀತಿ ಹಾಗೂ ಕಾರಣಗಳನ್ನು ತಿಳಿಸುತ್ತಾನೆ. ಆ್ಯಡಮ್‌ನು ಅಷ್ಟಕ್ಕೆ ತೃಪ್ತನಾಗದೆ ಗ್ರಹಗಳ ಗತಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಅವನಿಂದ ತಿಳಿಯಬಯಸುತ್ತಾನೆ. ಮತ್ತು ರಾಫೇಲನ ಸಹವಾಸದಲ್ಲಿ ಆದಷ್ಟು ಹೆಚ್ಚು ವೇಳೆ ಕಳೆಯುವ ಉದ್ದೇಶದಿಂದ ಅವನಿಗೆ ತನ್ನ ಹುಟ್ಟಿನಿಂದ ಮೊದಲು ಮಾಡಿ ಎಲ್ಲ ವೃತ್ತಾಂತವನ್ನು ಸ್ವಾರಸ್ಯವಾಗಿ ವರ್ಣಿಸುತ್ತಾನೆ. ಅದೆಲ್ಲವನ್ನು ಆಸ್ಥೆಯಿಂದ ಕೇಳಿಕೊಂಡು ರಾಫೇಲ್ ಪರಮೇಶ್ವರನ ಆಜ್ಞೆಗಳನ್ನು ಮೀರದಂತೆ ಮತ್ತೊಮ್ಮೆ ಅವನನ್ನು ಎಚ್ಚರಿಸಿ ದೇವಲೋಕಕ್ಕೆ ತೆರಳುತ್ತಾನೆ.

ಸಂಪುಟ ೯. ರಾತ್ರಿಯಾಗಲು ಸೇಟನನು ಮಂಜಿನ ರೂಪದಲ್ಲಿ ಪ್ಯಾರಡೈಜನ್ನು ಮರಳಿ ಸೇರುತ್ತಾನೆ. ಮತ್ತು ಮಲಗಿದ ಸರ್ಪವೊಂದರಲ್ಲಿ ಅಂತರ್ಹಿತನಾಗುತ್ತಾನೆ. ಸೇಡಿನ ಭಾವನೆ ಅವನಲ್ಲಿ ಜಾಗ್ರತವಾಗಿರುವುದಾದರೂ

ದೇವಲೋಕಕ್ಕಾಗಿ ಒಂದು ಆಸೆ, ಮಾನವನ ಸುಖಕ್ಕಾಗಿ ಒಂದು ಅಸೂಯೆ ಅವನನ್ನು ಕೆಲಕ್ಷಣ ಕಾಡುತ್ತವೆ. ಕೊನೆಗೆ ಪರಮೇಶ್ವರನ ಸೃಷ್ಟಿಯನ್ನು ಹಾಳುಮಾಡುವುದ ರಲ್ಲಿಯೇ ತನ್ನ ಜೀವನದ ಸಾಫಲ್ಯವಿದೆಯೆನ್ನುವ ನಿರ್ಣಯಕ್ಕೆ ಅವನು ಬರುತ್ತಾನೆ.

ಆ್ಯಡಮ್, ಈವ್ಹ ಬೆಳಗಿನಲ್ಲೆದ್ದು ತಮ್ಮ ದೈನಂದಿನ ಕರ್ಮಗಳಿಗಾಗಿ ಉದ್ಯುಕ್ತರಾಗುತ್ತಿರುವಾಗ ಈವ್ಹ ಹೊಸ ದೊಂದು ಸೂಚನೆಯನ್ನು ಆ್ಯಡಮ್‌ನೆದುರು ಇಡುತ್ತಾಳೆ. ಅದೆಂದರೆ ತಾವಿಬ್ಬರೂ ಕೆಲಸಗಳನ್ನು ಹಂಚಿಕೊಂಡು ಬೇರೆ ಬೇರೆಯಾಗಿ ದುಡಿಯಬೇಕೆನ್ನುವುದು. ಅದಕ್ಕೆ ಆ್ಯಡಮ್ ಒಪ್ಪುವದಿಲ್ಲ. ಈವ್ಹಳು ತನ್ನಿಂದ ದೂರವಿದ್ದರೆ ಅವಳನ್ನು ತಮ್ಮ ಶತ್ರುವು ಮೋಸಗೊಳಿಸಲು ಪ್ರಯತ್ನಿಸಬಹುದು ಎನ್ನುವ ಹೆದರಿಕೆ ಅವನಿಗಿರುತ್ತದೆ. ಆದರೆ ತನ್ನ ಶಕ್ತಿಯಲ್ಲಿ ಸಂಪೂರ್ಣ ನಂಬಿಗೆಯುಳ್ಳ ಈವ್ಹ ತನ್ನ ಸೂಚನೆಗೇ ಅಂಟಿಕೊಳ್ಳುತ್ತಾಳೆ. ಆ್ಯಡಮ್ ಕೊನೆಗೆ ಅದನ್ನು ಸ್ವೀಕರಿಸಬೇಕಾಗುತ್ತದೆ.

ಸರ್ಪರೂಪಿಯಾದ ಸೇಟನ್ ಈವ್ಹಳನ್ನು ಹುಡುಕಿ ಕೊಂಡು ಬರುತ್ತಾನೆ. ಮತ್ತು ಅವಳ ರೂಪಾತಿಶಯದ ಹೊಗಳಿಕೆಯಿಂದ ಅವಳನ್ನು ಸಂತೋಷಗೊಳಿಸುತ್ತಾನೆ. ಸರ್ಪವು ಮಾತನಾಡುವುದನ್ನು ಕಂಡು ಆಶ್ಚರ್ಯಚಕಿತ ಳಾದ ಈವ್ಹ ಅಂತಹ ಶಕ್ತಿಯನ್ನು ಸಾಧಿಸುವದು ಹೇಗೆ

ಶಕ್ಯವಾಯಿತೆನ್ನುವುದನ್ನು ತಿಳಿಯಬಯಸುತ್ತಾಳೆ. ಆಗ ಸೇಟನ ತಾನೊಂದು ಅಸ್ಪೃಶ್ಯವೃಕ್ಷದ ಫಲವನ್ನು ಸೇವಿಸಿದು ದಾಗಿಯೂ ಮತ್ತು ಅದರಿಂದಲೇ ಅಸಾಮಾನ್ಯ ಶಕ್ತಿಯನ್ನು ತಾನು ಪಡೆದುದಾಗಿಯೂ ಅವಳಿಗೆ ಹೇಳುತ್ತಾನೆ. ಈವ್ಳಿಗೆ ಆ ವೃಕ್ಷವನ್ನು ಕಾಣುವ ಇಚ್ಛೆಯಾಗುತ್ತದೆ. ಸೇಟನನು ಅವಳನ್ನು ಜ್ಞಾನವೃಕ್ಷದ ಬಳಿ ಕರೆದು ತಂದಾಗ ಆ ವೃಕ್ಷದ ಹಣ್ಣುಗಳನ್ನು ತಾವು ತಿನ್ನಬಾರದೆಂದು ಪರಮೇಶ್ವರನ ಕಟ್ಟಪ್ಪಣೆಯಾಗಿರುವ ವಿಷಯವನ್ನು ಈವ್ ಅವನಿಗೆ ತಿಳಿಸುತ್ತಾಳೆ. ಸೇಟನನು ಬಹಳ ಚಾತುರ್ಯದಿಂದ ವಾದಿಸಿ ಅವಳ ವಿಚಾರಗಳನ್ನು ಬದಲಿಸುತ್ತಾನೆ. ಈವ್ ಅವನ ಪ್ರಭಾವಕ್ಕೊಳಗಾಗಿ ಜ್ಞಾನವೃಕ್ಷದ ಹಣ್ಣನ್ನು ಕಿತ್ತು ತಿಂದುಬಿಡುತ್ತಾಳೆ. ಆ ಹಣ್ಣಿನ ಸವಿ ಅವಳನ್ನು ಉನ್ಮಾದಿತಳನ್ನಾಗಿ ಮಾಡುತ್ತದೆ. ಆ ವೇಳೆಗೆ ಅವಳಿದ್ದಲ್ಲಿಗೆ ಆ್ಯಡಮ್ ಬರಲು ಅವನಿಗೂ ಹಣ್ಣನ್ನು ಕೊಡಮಾಡಿ ಅದನ್ನು ಸವಿಯಲು ಅವನನ್ನು ಈವ್ ಕೇಳಿಕೊಳ್ಳುತ್ತಾಳೆ. ಈವ್ಳ ಮಹಾಪರಾಧದಿಂದ ಆ್ಯಡಮ್‌ನಿಗೆ ಬಲವಾದ ಆಘಾತವಾದರೂ ಅವಳ ಮೋಹಕ್ಕೊಳಗಾಗಿ ಅವಳಿಗೆ ಬಂದದ್ದು ತನಗೂ ಬರಲಿ ಎನ್ನುವ ಒಂದು ನಿಶ್ಚಯದಿಂದ ಈವ್ಳ ಮಾತಿಗೆ ಒಪ್ಪುತ್ತಾನೆ. ಮತ್ತು ಹಣ್ಣನ್ನು ಸೇವಿಸುತ್ತಾನೆ. ಅಲ್ಲಿಗೆ ಮಾನವನ ಪತನ ಪೂರ್ತಿಗೊಂಡಂತಾಗುತ್ತದೆ.

ಈ ಪತನದ ದುಷ್ಪರಿಣಾಮಗಳು ಆಗಿಂದಾಗಲೇ ತೋರಿಬರುತ್ತವೆ. ನಿರ್ಮಲ ಸಹಜ ಪ್ರೇಮದಿಂದಿದ್ದ

ಆ್ಯಡಮ್ ಈವ್‌ರಲ್ಲಿ ಅಸಹ್ಯವಾದ ಒಂದು ವಿಷಯಲಾಲಸೆ ಉತ್ಪನ್ನವಾಗುತ್ತದೆ. ನಗ್ನತೆಯ ಒಂದು ಕಲ್ಪನೆಯೂ ಅವರಲ್ಲಿ ಮೂಡಿಬರುತ್ತದೆ. ತಮ್ಮ ತಪ್ಪು ಅದೆಷ್ಟು ಘೋರವಾದುದೆಂದು ತಿಳಿದೊಡನೆಯೇ ಆ್ಯಡಮ್ - ಈವ್‌ರು ಒಬ್ಬರೊಬ್ಬರ ಮೇಲೆ ಹರಿಹಾಯತೊಡಗುತ್ತಾರೆ. ಅವರಲ್ಲಿ ಕಲಹ ವೈಮನಸ್ಸುಗಳಿಗೆ ಮೊದಲಾಗುತ್ತದೆ.

ಸಂಪುಟ ೧೦. ಮಾನವನ ಅವಿಧೇಯತೆಯನ್ನರಿತ ಕೂಡಲೆ ರಕ್ಷಕದೇವತೆಗಳು ಪ್ಯಾರಡೈಜ್‌ನ್ನು ತ್ಯಜಿಸಿ ದೇವಲೋಕಕ್ಕೆ ಹೊರಟುಹೋಗುತ್ತಾರೆ. ಪರಮೇಶ್ವರನು ಅಪರಾಧಿಗಳ ತಪ್ಪನ್ನು ನಿರ್ಣಯಿಸಿ ಅವರನ್ನು ದಂಡಿಸಲು ತನ್ನ ಪುತ್ರನನ್ನು ಕಳುಹಿಸಿಕೊಡುತ್ತಾನೆ. 'ಆ್ಯಡಮ್, ಈವ್, ಸೇಟನ ಇವರೆಲ್ಲರಿಗೂ ದಂಡನೆ ವಿಧಿಸಲ್ಪಡುತ್ತವೆ. ಸೇಟನನು ಬಹುಕಾಲ ಭೂಮಿಯಲ್ಲಿ ನಿಂತಿರುವುದನ್ನರಿತ ಪಾಪದೇವತೆ ಅವನು ತನ್ನ ಕಾರ್ಯದಲ್ಲಿ ಯಶಸ್ವಿಯಾಗಿರಲೇಬೇಕು ಎಂದು ತರ್ಕಿಸುತ್ತಾಳೆ. ಮತ್ತು ತನ್ನ ಮಗನಾದ ಮೃತ್ಯುವಿನೊಂದಿಗೆ ಭೂಲೋಕಕ್ಕಾಗಿ ಪ್ರಯಾಣ ಬೆಳೆಸುತ್ತಾಳೆ. ನರಕದಿಂದ ಭೂಲೋಕದವರೆಗೂ ಒಂದು ಮಹಾಸೇತುವೆ ಸಿದ್ಧವಾಗುತ್ತದೆ. ಮಾರ್ಗದಲ್ಲಿ ಪಾಪ–ಮೃತ್ಯು ಇವರಿಗೆ ಸೇಟನನ ಭೆಟ್ಟಿಯಾಗುತ್ತದೆ. ಆನಂದೋತ್ಸಾಹಗಳಿಂದ ಕೂಡಿದ ಸೇಟನ್ ನರಕದಲ್ಲಿಯ ತನ್ನ ಅರಮನೆಗೆ ಆಗಮಿಸುತ್ತಾನೆ. ಆದರೆ ಅವನಿಗೆ ಅಲ್ಲಿ ಸಿಗುವ ಸ್ವಾಗತ ಸರ್ಪಗಳ ಫೂತ್ಕಾರ ಮಾತ್ರ. ಏಕೆಂದರೆ ದೇವ

ಪುತ್ರನ ದಂಡನೆಯ ಪರಿಣಾಮವಾಗಿ ಎಲ್ಲ ಪತಿತ ದೇವತೆಗಳು, ಸೇಟನನು ಕೂಡ, ಒಮ್ಮೆಲೆ ಸರ್ಪಗಳ ಆಕಾರವನ್ನು ಹೊಂದಿರುತ್ತಾರೆ. ಅಸಹ್ಯವಾದ ನೋವು, ಯಾತನೆ ಅವರೆಲ್ಲರಿಗಾಗಿ ಕಾದಿರುತ್ತದೆ.

ಇತ್ತ ಪ್ಯಾರಡೈಜಿನಲ್ಲಿ ಪ್ರಕೃತಿಯ ಮೇಲೆ ಮೃತ್ಯುವಿನ ಹಾವಳಿ ನಡೆಯುತ್ತದೆ. ಅದನ್ನು ಪರಮೇಶ್ವರ ನೋಡುತ್ತಿರುತ್ತಾನೆ. ಸದ್ಯ ಅವನು ಈ ನಾಶಕ್ಕೆ ತಡೆಹಾಕುವುದಿಲ್ಲವಾದರೂ ಕೊನೆಯಲ್ಲಿ ಈ ದುಷ್ಟಶಕ್ತಿಗಳು ದೇವಪುತ್ರನಿಂದ ಪರಾಜಯ ಹೊಂದುವುದು ಖಂಡಿತ ಎಂದು ದೇವತೆಗಳೆಲ್ಲರೆದುರು ಅವನು ಸಾರುತ್ತಾನೆ.

ಭೂಲೋಕದಲ್ಲಿ ಆ್ಯಡಮ್‌ನು ಬಹು ದುಃಖದಲ್ಲಿ ಕಾಲಕಳೆಯುತ್ತಿರುತ್ತಾನೆ. ಪರಮೇಶ್ವರನ ಶಾಪದಿಂದ ಖಿನ್ನರಾದ ಆ್ಯಡಮ್-ಈವ್‌ರು ಆತ್ಮಹತ್ಯೆಯ ವಿಚಾರವನ್ನು ಕೂಡ ಮಾಡುತ್ತಾರೆ. ಆದರೆ ಕೊನೆಗೆ ಆ ವಿಚಾರವನ್ನು ಬಿಟ್ಟುಕೊಟ್ಟು ಪಶ್ಚಾತ್ತಾಪ ಪುನೀತರಾಗಿ ಪರಮೇಶ್ವರನಿಗೆ ಶರಣುಹೋಗುವುದೇ ಉತ್ತಮ ಮಾರ್ಗವೆನ್ನುವ ನಿರ್ಧಾರಕ್ಕೆ ಅವರು ಬರುತ್ತಾರೆ.

ಸಂಪುಟ ೧೧-೧೨. ಆ್ಯಡಮ್ ಈವ್‌ರು ಪಶ್ಚಾತ್ತಾಪ ಪಡುತ್ತಿರುವುದನ್ನು ದೇವಪುತ್ರನು ಪರಮೇಶ್ವರನ ಲಕ್ಷ್ಯಕ್ಕೆ ತರುತ್ತಾನೆ. ಮತ್ತು ತಾನು ಅವರ ಪಾಪದ ಹೊರೆಯನ್ನು

ಹೊರಲು ಸಿದ್ಧನಿರುವುದರಿಂದ ಅವರನ್ನು ಕ್ಷಮಿಸಿಬಿಡಬೇಕೆಂದು ಪರಮೇಶ್ವರನಲ್ಲಿ ಕೇಳಿಕೊಳ್ಳುತ್ತಾನೆ. ಪರಮೇಶ್ವರನು ಆ್ಯಡಮ್-ಈವ್ಹರನ್ನು ಕ್ಷಮಿಸಲು ಸಿದ್ಧನಿರುವನಾದರೂ ಅವರಿಗೆ ದಂಡನೆಯನ್ನು ವಿಧಿಸದಿರಲು ಒಪ್ಪುವದಿಲ್ಲ. ಮಾನವನು ಪ್ಯಾರಡೈಜಿನಿಂದ ಹೊರಬೀಳಲೇಬೇಕು ಎನ್ನುವುದು ಅವನ ನಿರ್ಧಾರವಾಗುತ್ತದೆ ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಮೈಕೇಲನಿಗೆ ಆಜ್ಞೆಯಾಗುತ್ತದೆ. ಪ್ಯಾರಡೈಜನ್ನು ಬಿಟ್ಟುಹೋಗುವಾಗ ಆ್ಯಡಮ್-ಈವ್ಹರಿಗೆ ತಡೆಯಲಾರದ ವ್ಯಥೆಯಾಗುತ್ತದೆ. ಆದರೆ ಆ ವ್ಯಥೆಯನ್ನು ಶಮನಗೊಳಿಸಲು ಮೈಕೇಲನು, ಪರಮೇಶ್ವರನ ಆಜ್ಞೆಯಂತೆ, ನಡೆಯಲಿರುವ ಘಟನೆಗಳ ಒಂದು ಮುನ್ನೋಟವನ್ನು ಅವರಿಗೆ ದಯಪಾಲಿಸುತ್ತಾನೆ ಕ್ರೈಸ್ತನ ಬರುವಿಕೆ, ತನ್ಮೂಲಕವಾಗಿ ಸಾಧ್ಯವಾಗಲಿರುವ ಮಾನವನ ಉದ್ಧಾರ ಮೊದಲಾದವುಗಳ ಜ್ಞಾನದಿಂದ ಆ್ಯಡಮ್‌ನಿಗೆ ಆ ದುಃಖದಲ್ಲಿಯೂ ಒಂದು ಶಾಂತಿ ದೊರಕುತ್ತದೆ. ಕೊನೆಗೆ ಮೈಕೇಲ್ ಆ್ಯಡಮ್-ಈವ್ಹರನ್ನು ಕೈಹಿಡಿದು ಪ್ಯಾರಡೈಜಿನಿಂದ ಹೊರಗೆ ಕರೆತರುತ್ತಾನೆ ಪ್ಯಾರಡೈಜನ್ನು ಕಾಯ-ಲೋಸುಗ ರಕ್ಷಕದೇವತೆಗಳು ತಮ್ಮ ತಮ್ಮ ಸ್ಥಾನಗಳನ್ನು ಆಕ್ರಮಿಸುತ್ತಾರೆ.

ಇಲ್ಲಿಗೆ ಈ ಮಹಾಕಾವ್ಯ ಮುಕ್ತಾಯಗೊಳ್ಳುತ್ತದೆ.

ಡಾಂಟೆ (Dante) ಮಹಾಕವಿಯ ಡಿವ್ಹೈನ್ ಕಾಮೆಡಿ (Divine Comedy) ಯಂತೆ ಮಿಲ್ಟನ್ನನ

ಕಾವ್ಯವೂ ಕ್ರಿಶ್ಚಿಯನ್ ಧರ್ಮದ ನಂಬುಗೆಗಳನ್ನಾಧರಿಸಿ ಬರೆದುದಾದರೂ ಮೂಲಭೂತವಾದ ಮತ್ತು ಮಾನವನಿಗೆ ಅತ್ಯಂತ ನಿಕಟವಾದ ಪ್ರಶ್ನೆಗಳನ್ನು ಅದು ಎದುರಿಸುವುದ ರಿಂದ ಕ್ರಿಶ್ಚಿಯನ್ನರಲ್ಲದವರಿಗೂ, ಮಾನವನ ಪತನದ ವಿವರಣೆಯನ್ನು ಅಕ್ಷರಶಃ ನಂಬಲಾರದವರಿಗೂ ಅದು ಗ್ರಾಹ್ಯ ವಾಗಿದೆ. ಪರಮಾತ್ಮನ ಸ್ವರೂಪದ ಎರಡು ದರ್ಶನಗಳನ್ನು ನಮಗೆ ಮಿಲ್ಟನ್ ಈ ಕಾವ್ಯದಲ್ಲಿ ತೋರಿದ್ದಾನೆ. ಅವನ ಮೊದಲನೆಯ ದರ್ಶನದಲ್ಲಿ ಈಶ್ವರನು ಕರುಣಾಮೂರ್ತಿ. ಮಾನವನನ್ನು ತನ್ನ ಪ್ರತಿರೂಪವಾಗಿ ಹುಟ್ಟಿಸಿದುದಲ್ಲದೆ ಈಶ್ವರನು ಅವನಿಗೆ ಸರ್ವವಿಧದ ಸ್ವಾತಂತ್ರ್ಯವನ್ನು, ಸಕಲ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟನು. ತನ್ನ ಕಟ್ಟಾಜ್ಞೆಯನ್ನು ಕಡೆಗಣಿಸಿ, ಅವಿಧೇಯತೆಯ ಪರಮಾವಧಿಯನ್ನು ಮಾನವನು ಮುಟ್ಟಿದರೂ ಔದಾರ್ಯದಿಂದ ಅವನನ್ನು ಕ್ಷಮಿಸಿದನು ಮತ್ತು ಅವನು ಮತ್ತೆ ಸ್ವರ್ಗಸುಖವನ್ನು ಅನುಭವಿಸುವದಕ್ಕೆ ಆಸ್ಪದ ಮಾಡಿಕೊಟ್ಟನು. ಮಾನವನ ಉದ್ಧಾರಕ್ಕಾಗಿ ತನಗೆ ಅತ್ಯಂತ ಪ್ರಿಯನಾದ ದೇವಪುತ್ರನನ್ನು ಸಹ ಕಷ್ಟಕ್ಕೆ ಗುರಿಮಾಡುವುದಕ್ಕೆ ಒಪ್ಪಿಕೊಂಡನು. ಆದರೆ ಈಶ್ವರನು ಕರುಣಾಮೂರ್ತಿಯಿದ್ದಂತೆ ನ್ಯಾಯಮೂರ್ತಿಯೂ ಅಹುದು. ಅವನ ನ್ಯಾಯಪ್ರಿಯತೆಯ ದರ್ಶನವನ್ನೂ ಮಿಲ್ಟನ್ ನಮಗೆ ಮಾಡಿಸಿದ್ದಾನೆ. ಮಾನವನು ತನ್ನ ಸ್ವಾತಂತ್ರ್ಯದ ದುರುಪಯೋಗಮಾಡಿ ಸೇಟನನನ್ನು ಬೆಂಬತ್ತಿದಾಗ ಪರಮೇಶ್ವರನು ಅವನನ್ನು ಕಠೋರವಾಗಿ ದಂಡಿ-ಸಲೇಬೇಕಾಯಿತು. ಅದೇ ರೀತಿ, ದೇವಲೋಕದಲ್ಲಿ ತನಗಿದ್ದ-

ಉಚ್ಚಗೌರವದಿಂದ ತೃಪ್ತನಾಗದೆ ಸೇಟನ್ ಈಶ್ವರನ ಅಧಿಕಾರವನ್ನೆ ವಿರೋಧಿಸಿದಾಗ ಅವನಿಗೂ ಅವನ ಅನುಯಾಯಿಗಳಿಗೂ ತಕ್ಕ ಶಾಸ್ತಿಯಾಗಲೇಬೇಕಾಯಿತು. ಮತ್ತು ದೇವಲೋಕದಿಂದ ಭ್ರಷ್ಟರಾಗಿ ಅವರು ನರಕವನ್ನು ಸೇರಬೇಕಾಯಿತು. ಮಿಲ್ಟನ್ನನು ಚಿತ್ರಿಸಿದಂತೆ ಈಶ್ವರನ ನಿಯಂತ್ರಣ ದಬ್ಬಾಳಿಕೆಯದಲ್ಲ. ಮಾನವನಿಗಾಗಲಿ ಅಥವಾ ದೇವತೆಗಳಿಗಾಗಲಿ ವಿಶಾಲವಾದ ಸ್ವಾತಂತ್ರ್ಯವಿದ್ದೇ ಇತ್ತು. ಆ ಸ್ವಾತಂತ್ರ್ಯದ ಸುಖವನ್ನನುಭವಿಸಲು ಅನಂತವಾದ ಅನುಕೂಲತೆಗಳನ್ನು ಸಹ ಅವರಿಗೆ ಕಲ್ಪಿಸಿಕೊಡಲಾಗಿತ್ತು. ಆದರೆ ಆ ಸ್ವಾತಂತ್ರ್ಯದ ದುರುಪಯೋಗಕ್ಕೆ ಅವರು ಮನಸ್ಸು ಮಾಡಿದುದರಿಂದ ಅವರ ಅವನತಿಯಾಯಿತು. ಹೀಗಾಗಿ ಅವರ ಅವನತಿಯ ಹೊಣೆ ಸಂಪೂರ್ಣವಾಗಿ ಅವರ ಮೇಲೆಯೇ ಇರುವುದಲ್ಲದೆ ಪರಮಾತ್ಮನಲ್ಲಿ ಯಾವ ದೋಷವನ್ನೂ ಆರೋಪಿಸುವಂತಿಲ್ಲ. ಇದರಿಂದಾಗಿಯೇ ಪರಮಾತ್ಮನ ನ್ಯಾಯವನ್ನು ಸಮ್ಮತಿಸಿ ವಿವರಿಸುವುದೇ **ಪ್ಯಾರಡೈಜ್ ಲಾಸ್ಟಿನ** ಮುಖ್ಯ ಉದ್ದೇಶ ಎಂದು ಮಿಲ್ಟನ್ ಹೇಳಿದ್ದಾನೆ.

ಪ್ಯಾರಡೈಜ್ ಲಾಸ್ಟ್ ಮಹಾಕೃತಿಯನ್ನು ಸೃಷ್ಟಿಸಿದ ಕವಿಯ ಕಲ್ಪನಾಶಕ್ತಿ ಎಂತಹರನ್ನೂ ದಂಗುಬಡಿಸುವಂತಹದಿದೆ. ವಿಸ್ತಾರ–ಭವ್ಯತೆಗಳಲ್ಲಿ ಮಿಲ್ಟನ್ನನ ಕಾವ್ಯವಸ್ತುವನ್ನು ಸರಿಗಟ್ಟುವುದು ಮತ್ತೊಂದಿಲ್ಲವೆಂದೇ ಹೇಳಬೇಕು. ದೇವಲೋಕ, ಭೂಲೋಕ, ನರಕಗಳನ್ನೊಳಗೊಂಡ ಅನಂತವಿಶ್ವದ ವಿರಾಟ್‌ದರ್ಶನವನ್ನೆ ಕವಿ ಇಲ್ಲಿ ನಮಗೆ ಮಾಡಿಸಿದ್ದಾನೆ.

ಇಲ್ಲಿನ ಪಾತ್ರಗಳು ಕೂಡ ಸಾಮಾನ್ಯವಾದವುಗಳಲ್ಲ. ಪರ ಮೇಶ್ವರನನ್ನೊಳಗೊಂಡ ದೇವಗಣಗಳು, ಪತಿತದೇವತೆಗಳು, ಆದಿಮಾನವರು–ಇವರೆಲ್ಲರ ಚಿತ್ರಣದಲ್ಲಿ ವ್ಯಕ್ತವಾದ ಕವಿಯ ವಿಲಕ್ಷಣ ಪ್ರತಿಭೆ ನಮ್ಮನ್ನು ಬೆರಗುಗೊಳಿಸುತ್ತದೆ. ದೇವಲೋಕದ ಉಜ್ವಲವೈಭವ, ನವೋದಿತಸೃಷ್ಟಿಯ ನಿರ್ಮಲಸೌಂದರ್ಯ, ಹೃದಯವಿದಾರಕವಾದ ನರಕದ ಭಯಾನಕತೆ – ಎಲ್ಲವನ್ನೂ ಸುತ್ತಿಕೊಂಡು ಮಿಲ್ಟನ್ನನ ಕಲ್ಪನೆ ಇಲ್ಲಿ ಚೆಲ್ಲುವರಿದಿದೆ. ಮಿಲ್ಟನ್ನನ ಕಾವ್ಯವಸ್ತು ವ್ರ ಅಪೂರ್ವವಾಗಿದ್ದಂತೆ, ಅವನ ಕಲ್ಪನೆ ಭವ್ಯವಾಗಿದ್ದಂತೆ, ಅವನ ಕಾವ್ಯದ ಭಾಷೆ, ಶೈಲಿಗಳೂ ಕೂಡ ತಮ್ಮದೇ ಆದ ನಿಲುವನ್ನು ಹೊಂದಿವೆ. ಲ್ಯಾಟಿನ್, ಗ್ರೀಕ್ ಭಾಷೆ–ಸಾಹಿತ್ಯ ಗಳ ಸಂಸ್ಕಾರದಿಂದ ಸಮೃದ್ಧವಾದ ಮಿಲ್ಟನ್ನನ ಕಾವ್ಯಶೈಲಿ ವಸ್ತುವಿನ ಗಾಂಭೀರ್ಯ–ಉದಾತ್ತತೆಗಳನ್ನು ಆಳ–ವಿಸ್ತಾರ ಗಳನ್ನು ಬಹು ಸಮರ್ಥ ರೀತಿಯಲ್ಲಿ ಓದುಗರ ಮನಸ್ಸಿನ ಮೇಲೆ ಬಿಂಬಿಸುತ್ತದೆ.

ಪ್ಯಾರಡೈಜ್ ಲಾಸ್ಟ್ ಮಾನವನ ಪತನದ ಕಥೆಯನ್ನು ಹೇಳುವುದರಿಂದ ಮಾನವನೇ ಅದರ ಮಧ್ಯವರ್ತಿ ಪಾತ್ರ ಎಂದು ಸಹಜವಾಗಿ ತಿಳಿಯುವಂತಿದೆ. ಆದರೆ ಮೊದಲನೆಯ ಕೆಲ ಸಂಪುಟಗಳಲ್ಲಿ ಸೇಟನನ ಪಾತ್ರ ಅತ್ಯಂತ ಪ್ರಭಾವಿ ಯಾಗಿ ಚಿತ್ರಿತವಾಗಿರುವುದರಿಂದ, ಕೆಲವರು ಸೇಟನನದೆ ಇಲ್ಲಿಯ ಮುಖ್ಯ ಪಾತ್ರವಾಗಿದೆ ಎನ್ನುವ ಒಂದು ವಿಮರ್ಶೆ ಯನ್ನು ಮಾಡಿದ್ದಾರೆ. ಮತ್ತೆ ಕೆಲವರು ಅವಕ್ಕೂ ಮುಂದೆ

ಹೋಗಿ ಮಿಲ್ಟನ್ನನು ಸೇಟನನ ಪಕ್ಷದವ; ಅವನನ್ನೇ ಎತ್ತಿ ಹಿಡಿದಿದ್ದಾನೆ ಎನ್ನುವ ರಭಸದ ಟೀಕೆಯನ್ನೂ ಮಾಡಿದ್ದುಂಟು. ಆದರೆ ಬೌರಾರವರು ಹೇಳುವಂತೆ ಹಾಗೂ ಸ್ವಪ್ರಕಟಿತವಾದ ಕವಿಯ ಉದ್ದೇಶಕ್ಕನುಸಾರವಾಗಿ ಇಲ್ಲಿ ಮಾನವನ ಆಗು ಹೋಗುಗಳೇ ಮುಖ್ಯ ವಿಷಯುವಾಗಿವೆಯೆನ್ನುವುದರಲ್ಲಿ ಸಂದೇಹವಿಲ್ಲ. ಆ್ಯಡಮನನ್ನು ನಾಯಕನನ್ನಾಗಿ ಆರಿಸುವುದ ರಲ್ಲಿ ಮಿಲ್ಟನ್ನನು ಹೋಮರ್ ವ್ಹರ್ಜಿಲ್ಲರ ಸಂಪ್ರದಾಯುವನ್ನು ಮೀರಿದ ಒಂದು ನಾವೀನ್ಯವನ್ನು ತೋರಿದ್ದಾನೆ.

ಮಿಲ್ಟನ್ನನ ಈ ಮಹಾಕಾವ್ಯದ ವಸ್ತುವಿನಂತೆ ಅದರ ಸಾಹಿತ್ಯ-ಶೈಲಿಯೂ ಕೂಡ ಭವ್ಯವಾಗಿದೆ. ಅಪೂರ್ವವಾದ ವಸ್ತುವೊಂದನ್ನು ತನ್ನ ಕಾವ್ಯಕ್ಕಾಗಿ ಮಿಲ್ಟನ್ ಆರಿಸಿ ಕೊಂಡಂತೆ ಅದರ ನಿರ್ವಹಣೆಗಾಗಿ ಅಪೂರ್ವವಾದ ಶೈಲಿ ಯನ್ನೂ ಅವನು ನಿರ್ಮಿಸಿಕೊಂಡಿದ್ದಾನೆ. ಸ್ಪೆನ್ಸರ್ ಮೊದ ಲಾದ ಪೂರ್ವಕವಿಗಳಿಂದ ಮಿಲ್ಟನ್ ಸ್ಫೂರ್ತಿಗೊಂಡುದು ನಿಜವಾದರೂ ಅವನ ಕಾವ್ಯದ ಭಾಷೆ ಸಂಪೂರ್ಣವಾಗಿ ಅವನದೇ ಆಗಿದೆ. ಅದನ್ನು ಹದಗೊಳಿಸುವದರಲ್ಲಿ ಕವಿ ತನ್ನ ಸರ್ವಶಕ್ತಿಯನ್ನು ವಿನಿಯೋಗಿಸಿದ್ದಾನೆ. ಮಿಲ್ಟನ್ನನ ವ್ಯಕ್ತಿತ್ವದ ಶಕ್ತಿಯುತವಾದ ಪ್ರಭಾವವನ್ನು ನಾವು ಅವನ ಶೈಲಿಯಲ್ಲಿ ಕಾಣುತ್ತೇವೆ ಅವನ ವ್ಯಕ್ತಿತ್ವ ಉಳಿದ ಕವಿಗಳ ವ್ಯಕ್ತಿತ್ವಕ್ಕಿಂತ ಭಿನ್ನವಾಗಿ ಒಡೆದು ತೋರುವಂತೆ ಅವನ ಶೈಲಿಯೂ ಕೂಡ ತನ್ನದೇ ಆದ ವೈಶಿಷ್ಟ್ಯಗಳನ್ನೊಳಗೊಂಡಿದೆ. ಇಂಗ್ಲಿಷ್ ಕಾವ್ಯದ ಮಹಾಪ್ರವಾಹ ಅವನ ಕಾವ್ಯವನ್ನು

ತಾಗುವುದಿಲ್ಲ. ತನ್ನದೇ ಆದ ಪಾತ್ರದಲ್ಲಿ ಅದು ಹರಿದಿದೆ.

ಪ್ಯಾರಡೈಜ್ ಲಾಸ್ಟಿನ ಭಾಷೆ ಇಂಗ್ಲೀಷಾದರೂ ಅದು ಗ್ರೀಕ್, ಲ್ಯಾಟಿನ್, ಇಟ್ಯಾಲಿಯನ್ ಭಾಷೆಗಳ ರಚನಾ ವೈಶಿಷ್ಟ್ಯಗಳನ್ನು ಧಾರಾಳವಾಗಿ ಬಳಸಿಕೊಂಡಿದೆ. ಅದಕ್ಕೆಂದೇ ಇದನ್ನೊಂದು ಹೊಸ ಭಾಷೆಯೆಂದು **ಡಾ. ಜಾನ್‌ಸನ್**‌ರವರು ಕರೆದಿದ್ದಾರೆ. ಈ ಭಾಷೆಯ ಸುಸಂಸ್ಕೃತ ಬಗೆಯನ್ನು ವರ್ಣಿಸುತ್ತ **ಮಾರ್ಕ್ ಪೆಟಿಸನ್**‌ರವರು "ಮಿಲ್ಟನ್ನನ ಸಾಹಿತ್ಯಗುಣಗಳ ಸಮ್ಯಗ್ದರ್ಶನ ಪರಿಪಕ್ವ ಪಾಂಡಿತ್ಯಕ್ಕೆ ಮೀಸಲಾಗಿರುವ ಒಂದು ಉತ್ತಮೋತ್ತಮವಾದ ಪ್ರತಿಫಲ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ಯಾರಡೈಜ್ ಲಾಸ್ಟಿಗಾಗಿ ಮಿಲ್ಟನ್ ಬಳಸಿಕೊಂಡಿರುವ ಮುಕ್ತಛಂದ ಇಂಗ್ಲಿಷ ಸಾಹಿತ್ಯದಲ್ಲಿಯೇ ಶ್ರೇಷ್ಠವಾದುದು ಎಂದು **ಟಿ. ಎಸ್. ಎಲಿಯಟ್**‌ರವರು ತಮ್ಮದೊಂದು ಲೇಖನದಲ್ಲಿ ಹೇಳಿದ್ದಾರೆ. ನಾದಮಯವೂ, ಅರ್ಥಗರ್ಭಿತವೂ ಆದ ಈ ಕಾವ್ಯಶೈಲಿಯನ್ನು ಅನೇಕ ವಿಮರ್ಶಕರು ಮೆಚ್ಚಿ ಕೊಂಡಿದ್ದಾರೆ; ಕಾವ್ಯದ ಮೊದಲಿನಿಂದ ತುದಿಯ ವರೆಗೆ ಕಂಡುಬರುವ ಗಾಂಭೀರ್ಯವನ್ನು ಭವ್ಯತೆಯನ್ನು ಕಂಡು ಆಶ್ಚರ್ಯಪಟ್ಟಿದ್ದಾರೆ. ನಿಜಕ್ಕೂ ಶಬ್ದಗಳ ಆಯ್ಕೆ–ಜೋಡಣೆ ಗಳಲ್ಲಿ, ಲಯ–ಧ್ವನಿಗಳ ನಿರ್ಮಾಣದಲ್ಲಿ, ಸಾತತ್ಯ–ವಿರಾಮ ಸಂಯೋಜನೆಯಲ್ಲಿ ಮಿಲ್ಟನ್ನನಲ್ಲಿ ಕಾಣಬರುವ ಪರಿಣತಿ ಯನ್ನು ಮಿಕ್ಕಕಡೆ ಅದೇ ಪ್ರಮಾಣದಲ್ಲಿ ಸಹಜವಾಗಿ ನಾವು ಕಾಣಲಾರೆವು.

ಭವ್ಯತೆ ಮಿಲ್ಟನ್ನನ ಈ ಮಹಾಕಾವ್ಯದ ಜೀವಾಳವೆಂದು ಹೇಳಬಹುದು. ಕಾವ್ಯ-ವಸ್ತುವಿನ ವಿಸ್ತಾರದಲ್ಲಿ, ಕವಿಯ ಉದ್ದೇಶದಲ್ಲಿ ನಮಗೆ ಕಂಡುಬರುವ ಭವ್ಯತೆ ಈ ವಸ್ತುವಿನ ನಿರ್ವಹಣೆ, ಉದ್ದೇಶದ ಸಾಧನೆಯಲ್ಲಿಯೂ ಕಂಡುಬರುತ್ತದೆ. ಮಹಾಕಾವ್ಯದ ಸಂಪ್ರದಾಯಕ್ಕನುಗುಣವಾಗಿ ಅದ್ಭುತ ವರ್ಣನೆಗಳೂ ಇಲ್ಲಿ ನಮಗೆ ಹೇರಳವಾಗಿ ನೋಡಸಿಗುತ್ತವೆ. ಸೇಟನನ ಢಾಲನ್ನು ಕವಿ ವರ್ಣಿಸಿದುದನ್ನು, ಉದಾಹರಣೆಗಾಗಿ ನಾವು ನೋಡಬಹುದು :

..........the broad circumference
Hung on his shoulders like the moon,
whose orb
Through optic glass the Tuscan artist
views
At ev'ning from the top of Fesole',
Or in Valdarno, to descry new lands,
Rivers or mountains in her spotty globe.

ಏಡನ್ ತೋಟದ ವರ್ಣನೆ ಮತ್ತೊಂದು ಉದಾಹರಣೆ :

Not that fair field
Of Enna, where Proserpin gath'ring flow'rs
Herself a fairer flow'r by gloomy Dis
Was gather'd, which cost Ceres all that
pain

To seek her through the world; nor
that sweet Grave
Of Daphne by Orontes, and th' inspir'd
Castalian spring might with this Paradise
Of Eden strive; nor that Nyseian Isle
Girt with the river Triton, where old
Cham,
Whom Gentiles Ammon call and Lybian
Jove,
Hid Amalthea and her florid son
Young Bacchus from his stepdame
Rhea's eye;
Nor where Abassin Kings their issue
guard.
Mount Amara, though this by some
suppos'd
True paradise under the Ethiop Line
By Nilus head, enclos'd with shining Rock
A whole day's journey high, but wide
remote
From this Assyrian Garden..........

ಈ ಉದಾಹರಣೆ ಎತ್ತಿ ತೋರಿಸುವಂತೆ, ಮಿಲ್ಟನ್ನನ ಕಾವ್ಯ ಅವನ ಅನುಭವ, ಆದರ್ಶಗಳ ಪ್ರತೀಕವಿದ್ದಂತೆ, ಅವನ ವಿದ್ವತ್ತು, ಸಾಹಿತ್ಯಾಭ್ಯಾಸಗಳ ಒಂದು ನಿದರ್ಶನವೂ ಆಗಿದೆ. **ಪ್ಯಾರಡೈಜ್ ಲಾಸ್ಟ್** ಮಾನವನ ಪತನದ ಕಥೆಯನ್ನು

ಹೇಳುವುದರ ಜೊತೆಗೆ ಗ್ರೀಕ್, ಲ್ಯಾಟಿನ್ ಸಾಹಿತ್ಯಗಳ ಒಂದು ವಿಹಾರವನ್ನೂ ಒದಗಿಸುತ್ತದೆ.

ಸೌಂದರ್ಯವನ್ನು, ಭವ್ಯತೆಯನ್ನು ವರ್ಣಿಸುವಂತೆ ಭೀಭತ್ಸವನ್ನು ಕೂಡ ಮಿಲ್ಟನ್ ಪ್ರಭಾವಿಯಾಗಿ ಚಿತ್ರಿಸಬಲ್ಲ. ಉದಾಹರಣೆಗಾಗಿ, ಮೃತ್ಯುವಿನ ಈ ವರ್ಣನೆಯನ್ನು ನಾವು ನೋಡಬಹುದು.

.....black it stood as Night,
Fierce as ten Furies, terrible as Hell.....

'ವಿಸ್ತಾರ, ಮಿಲ್ಟನ್ ಕವಿಯ ಹೆಗ್ಗಳಿಕೆ' ಯೆಂದು ವಿಮರ್ಶಕರೊಬ್ಬರು ಬರೆದಿದ್ದಾರೆ. ಈ ಮಾತಿನ ಸತ್ಯತೆಯನ್ನು **ಪ್ಯಾರಡೈಜ್ ಲಾಸ್ಟಿನ** ಮಹೋಪಮೆಗಳಲ್ಲಿ ನಾವು ಕಾಣಬಹುದು.

ಸೇಟನ್ ನರಕದ ಬಾಗಿಲತ್ತ ಹಾರಿಹೋಗುವಾಗ ಅವನ ಭವ್ಯಾಕೃತಿ ಕವಿಗೆ ಕಂಡುದು ಹೀಗೆ :

As when far off at sea a fleet describ'd
Hangs in the clouds, by equinoctial winds
Close sailing from Bengala, or the isles
Of Ternate and Tidore, whence
merchants bring
Their spicy drugs; they on the
trading flood

Through the wide Ethiopian to the cape
Ply stemming nightly toward the pole,
so seem'd
Far off the flying Fiend.

ಕಾವ್ಯದ ಪ್ರಾರಂಭದಲ್ಲಿ, ಮಿಲ್ಟನ್ ತನ್ನ ಕವಿತೆ ಯಾವಾಗಲೂ ಮಹೋನ್ನತವಾದ ಮಾರ್ಗದಲ್ಲಿಯೇ ಕ್ರಮಿಸು ವಂತಹದು ಎಂದು ಹೇಳಿಕೊಂಡಿದ್ದಾನೆ. ಅವನ ಈ ಮಾತು ಬಹುಮಟ್ಟಿಗೆ ಸತ್ಯವಾದುದೆನ್ನುವುದು **ಪ್ಯಾರಡೈಜ್ ಲಾಸ್ಟಿನ** ಓದುಗರಿಗೆ ಕಂಡುಬರದಿರದು.

೧೮ ಹಾಗೂ ೧೯ ನೆಯ ಶತಮಾನಗಳಲ್ಲಿ ವಿಶೇಷವಾದ ಮೆಚ್ಚುಗೆಯನ್ನು ಪಡೆದ **ಪ್ಯಾರಡೈಜ್ ಲಾಸ್ಟ್** ಇತ್ತೀಚೆಗೆ **ಟಿ. ಎಸ್. ಎಲಿಯಟ್, ಎಫ್. ಆರ್. ಲೀವಿಸ್, ಹರ್ಬರ್ಟ್ ರೀಡ್** ಮೊದಲಾದವರಿಂದ ಕಟುವಾದ ಟೀಕೆಗೆ ಒಳಗಾಗಿದೆ. ಎಲಿಯಟ್‌ರವರು ಮಿಲ್ಟನ್ನನ ಭಾಷೆಯನ್ನು ನಿರ್ಜೀವಭಾಷೆಯೆಂದು ಕರೆದು, ಅದರ ಕೃತ್ರಿಮತೆಯನ್ನು ಎತ್ತಿತೋರಿಸಿದ್ದಾರೆ. **ಲೀವಿಸ್**‌ರವರು ಮಿಲ್ಟನ್ನನಲ್ಲಿ ಸಂವೇದನೆಯ ಕಾರ್ಪಣ್ಯವನ್ನು ಕಂಡಿದ್ದಾರೆ "ಮಿಲ್ಟನ್ನನು ಶಬ್ದಗಳ ಮುಖಾಂತರ ಅನುಭವವನ್ನು ಮುಟ್ಟಲು ಯತ್ನಿಸುವುದಿಲ್ಲ; ಶಬ್ದಗಳನ್ನು ಅನುಭವಿಸುವುದರಲ್ಲಿಯೇ ತೃಪ್ತಿ ಹೊಂದುತ್ತಾನೆ" ಎಂದು ಮುಂತಾಗಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ **ಟಿಲ್‌ಯಾರ್ಡ**ರವರು ಹೇಳಿದಂತೆ, ಈ ಟೀಕೆಗಳು ಮಿಲ್ಟನ್ನನ ಉದ್ದೇಶವನ್ನು, ಅವನ ಕಾವ್ಯ

ಪ್ರತಿಭೆಯ ವಿಶಿಷ್ಟಸ್ವರೂಪವನ್ನು ಲಕ್ಷ್ಯಕ್ಕೆ ತಂದುಕೊಳ್ಳುವು-ದಿಲ್ಲ. ಮಿಲ್ಟನ್ನನು ಒಂದು ದರ್ಶನವನ್ನು ನಿಲುಕಲು ಅವನು ನಿರ್ಮಿಸಿಕೊಂಡ ಭಾಷೆ ಉತ್ತಮ ಸಾಧನವಾಗಿ ಪರಿಣಮಿಸಿ ದುದನ್ನು ನಾವು ಕಡೆಗಣಿಸುವಂತಿಲ್ಲ. ನಮಗೆ ಮಿಲ್ಟನ್ನನ ಶೈಲಿ ಕೃತ್ರಿಮವೆನಿಸಿದರೂ ಕವಿಗೆ ಅದು ಸಹಜವಾಗಿತ್ತೆನ್ನು ವುದನ್ನು, ಅವಶ್ಯವಾಗಿತ್ತೆನ್ನುವುದನ್ನು ಮರೆಯುವಂತಿಲ್ಲ.

ಮಿಲ್ಟನ್ ತನಗಾಗಿ ತನ್ನದೇ ಆದ ಶೈಲಿಯನ್ನು ನಿರ್ಮಿಸಿಕೊಂಡು **ಪ್ಯಾರಡೈಜ್ ಲಾಸ್ಟ**ನ್ನು ಬರೆದಾಗ ಯಾವು ದೊಂದು ಕಾವ್ಯಪ್ರಸ್ಥಾನವನ್ನು ಸ್ಥಾಪಿಸಲು ಅವನು ಬಯಸಿರ ಲಿಲ್ಲ. ಆದರೂ ಕೂಡ ಸಹಜವಾಗಿ ಅವನ ಕಾವ್ಯದ ಶೈಲಿಯ ಪ್ರಭಾವಕ್ಕೆ ೧೮ ನೆಯ ಮತ್ತು ೧೯ ನೆಯ ಶತ ಮಾನದ ಕೆಲವೊಂದು ಕವಿಗಳು ಒಳಗಾದರು. ಆದರೆ ಮಿಲ್ಟನ್ನನ ಘನವಾದ ಉದ್ದೇಶ, ಪ್ರತಿಭೆ ಅವರಲ್ಲಿರದಿದ್ದುದ ರಿಂದ ಅವರ ಕಾವ್ಯ ಒಳ್ಳೆಯ ಕಾವ್ಯವಾಗಲಿಲ್ಲ. ಅವನ ಅನುಕರಣೆ ಅವರಿಗೆ ಒಳ್ಳೆಯದನ್ನು ಮಾಡಲಿಲ್ಲ; ಆದರೆ ಇದಕ್ಕಾಗಿ ಮಿಲ್ಟನ್ನನನ್ನು ನಾವು ಹಳಿದರೆ ಅದು ತಪ್ಪಾದೀತು.

೮. ಕೊನೆಯ ದಿನಗಳು

೧೬೬೩ ರಲ್ಲಿ ಮಿಲ್ಟನ್ ಮೂರನೆಯ ಸಲ ಮದುವೆಯಾದನು. ಅವನ ಮೂರನೆಯ ಹೆಂಡತಿಯ ಹೆಸರು ಎಲಿಜಬೆತ್ ಮಿನ್ಶಲ್. ಅವಳು ಮಿಲ್ಟನ್ನನಿಗಿಂತಲೂ ೩೦ ವರ್ಷ ಚಿಕ್ಕವಳಾಗಿದ್ದಳು ಆದರೂ ಮಿಲ್ಟನ್ ಅವಳೊಡನೆ ಸುಖಿಯಾಗಿದ್ದ. ತನ್ನ ವೃದ್ಧಾಪ್ಯದ ದಿನಗಳಲ್ಲಿ ತನ್ನ ಹೆಂಡತಿ ತನಗೆ ಬಹಳ ಅನುಕೂಲಳಾಗಿದ್ದಳೆಂದೂ ಪ್ರೇಮ, ಕರುಣೆಗಳೊಂದಿಗೆ ತನ್ನೊಡನೆ ನಡೆದುಕೊಳ್ಳುತ್ತಿದ್ದಳೆಂದೂ ಸ್ವತಃ ಮಿಲ್ಟನ್ನನೇ ಒಂದೆಡೆಗೆ ಬರೆದಿದ್ದಾನೆ. ಈ ಮಾತನ್ನು ತನ್ನ ಹೆಣ್ಣು ಮಕ್ಕಳ ಬಗ್ಗೆ ಮಿಲ್ಟನ್ ಹೇಳಿಲ್ಲವೆಂಬುದನ್ನು ಇಲ್ಲಿ ನಾವು ಉಲ್ಲೇಖಿಸಬಹುದು. ತನ್ನ ಮಕ್ಕಳು ತನ್ನೊಡನೆ ನಿರ್ದಯರಾಗಿ ನಡೆದುಕೊಂಡರೆಂದು ಮಿಲ್ಟನ್ ದೂರಿದ್ದಾನೆ. ಒಬ್ಬ ಚರಿತ್ರಕಾರರು ಹೇಳುವಂತೆ ಮಿಲ್ಟನ್ನನ ಹೆಣ್ಣುಮಕ್ಕಳಲ್ಲೊಬ್ಬಳಿಗೆ ಸ್ನೇಹಿತರೊಬ್ಬರು ಅವಳ ತಂದೆಯ ಮೂರನೆಯ ಮದುವೆಯ ವಿಷಯವನ್ನು ಹೇಳಿದಾಗ “ಅದೇನು ಒಳ್ಳೆಯ ಸುದ್ದಿ, ಅವನ ಮರಣದ ಸುದ್ದಿಯನ್ನಾದರೂ ನೀವು ತಂದಿದ್ದರೆ ಚೆನ್ನಾಗಿತ್ತು!” ಎಂದು ಉದ್ಗಾರ ತೆಗೆದಳಂತೆ. ಮಿಲ್ಟನ್ನನನ್ನು ಅವನ ಹೆಣ್ಣು ಮಕ್ಕಳು ದ್ವೇಷಿಸುವುದಕ್ಕೆ ಕೆಲ ಕಾರಣಗಳೂ ಇದ್ದವು. ಎಳೆಯ

ವಯಸ್ಸಿನಲ್ಲಿ ಅವರು ಅವನಿಗಾಗಿ ತಮಗೆ ಅರ್ಥವಾಗದ ಪುಸ್ತಕಗಳನ್ನು ಓದಬೇಕಾಗುತ್ತಿತ್ತು. ಅವನು ಕಾವ್ಯವನ್ನು ರಚಿಸಿ ಹೇಳುವಾಗ ಬರೆದುಕೊಳ್ಳಬೇಕಾಗುತ್ತಿತ್ತು. ಇದೆಲ್ಲವೂ ಸಾಮಾನ್ಯ ವ್ಯಕ್ತಿಗಳಾದ ಅವರಿಗೆ ತಾಪದಾಯಕವೆನಿಸಿರಬೇಕು. ಇವಲ್ಲದೆ ಮಿಲ್ಟನ್ನನು ಬಹುಮಟ್ಟಿಗೆ ಸ್ತ್ರೀದ್ವೇಷಿಯಾಗಿದ್ದನೆಂದು ಕಂಡುಬರುತ್ತದೆ. ಮಾನವನ ಪತನಕ್ಕೆ ಸ್ತ್ರೀಯೇ ಹೆಚ್ಚಾಗಿ ಕಾರಣಳಾಗಿದ್ದಳೆಂದು ನಂಬಿದ ಅವನು ಅವಳಲ್ಲಿ ಅಷ್ಟೊಂದು ಆದರವುಳ್ಳವನಾಗಿರುವುದು ಸಹಜವಾಗಿದ್ದಿಲ್ಲ. ಅವನ ಈ ದೃಷ್ಟಿಯ ಪರಿಣಾಮವೂ ಕೆಲಮಟ್ಟಿಗೆ ಅವನ ಹೆಣ್ಣುಮಕ್ಕಳ ಮೇಲೆ ಆಗಿರಬಹುದಾಗಿ ತೋರುತ್ತದೆ.

೧೬೭೧ ರಲ್ಲಿ ಮಿಲ್ಟನ್ "**ಪ್ಯಾರಡೈಜ್ ರಿಗೇನ್ಡ್**" (Paradise Regained) ಮತ್ತು "**ಸ್ಯಾಮ್ಸನ್ ಎಗೊನಿಸ್ಟಿಸ್**" (Samson Agonistes) ಎಂಬ ಮತ್ತೆರಡು ಕೃತಿಗಳನ್ನು ಪ್ರಕಟಿಸಿದ. ಇವುಗಳಲ್ಲಿ **ಪ್ಯಾರಡೈಜ್ ರಿಗೇನ್ಡ್** ೧೬೬೬ರ ಕೊನೆಗೇ ಬರೆದು ಪೂರೈಸಲ್ಪಟ್ಟದ್ದಿತು ಒಂದು ದೃಷ್ಟಿಯಿಂದ **ಪ್ಯಾರಡೈಜ್ ರಿಗೇನ್ಡ್, ಪ್ಯಾರಡೈಜ್ ಲಾಸ್ಟಿ**ನ ಪ್ರವರ್ತನ (Continuation) ಎನ್ನಬಹುದಾದರೂ ಇನ್ನೊಂದು ದೃಷ್ಟಿಯಿಂದ ಅನು ಮೊದಲಿನ ಮಹಾಕಾವ್ಯದ ಸಂಗಾತಿ ಎಂದು ಹೇಳಬಹುದು. **ಪ್ಯಾರಡೈಜ್ ಲಾಸ್ಟಿ**ನ ಒಂದು ವಿಶಾಲವಾದ ಚೌಕಟ್ಟು, ಘನವಾದ ಉದ್ದೇಶ **ಪ್ಯಾರಡೈಜ್ ರಿಗೇನ್ಡಿ**ಗೂ ಇವೆ. ಕಾವ್ಯವಸ್ತುವಿನಲ್ಲಿಯೂ ಒಂದು ಸುಸಂಬದ್ಧತೆ ಇದೆ.

ಮಾನವನ ಪತನದ ಕಥೆಯನ್ನು **ಪ್ಯಾರಡೈಜ್ ಲಾಸ್ಟ್** ಹೇಳಿದರೆ **ಪ್ಯಾರಡೈಜ್ ರಿಗೇನ್ಡ್** ಮಾನವನ ವಿಜಯವನ್ನು ವರ್ಣಿಸುತ್ತದೆ. ಸೇಟನನು ಒಡ್ಡಿದ ಬಹುವಿಧದ ಮೋಹಜಾಲವನ್ನು ಕ್ರಿಸ್ತನು – ಪರಿಪೂರ್ಣಮಾನವನು – ಧೈರ್ಯ ಸ್ಥೈರ್ಯಗಳಿಂದ ಎದುರಿಸಿ ಅವನನ್ನು ಸೋಲಿಸುವುದರ ಕಥೆಯೇ **ಪ್ಯಾರಡೈಜ್ ರಿಗೇನ್ಡಿ**ನ ಕಥೆ. ಇದು ನಾಲ್ಕು ಸಂಪುಟಗಳಲ್ಲಿದೆ.

ಪ್ಯಾರಡೈಜ್ ರಿಗೇನ್ಡಿನ ಜೊತೆಗೇ ಪ್ರಕಾಶಿತವಾದ **ಸ್ಯಾಮ್ಸನ್ ಎಗೋನಿಸ್ಟಿಸ್** (Samson Agonistes) ನಾಟಕ ಮಿಲ್ಟನ್ನನ ಸಾಹಿತ್ಯಸೃಷ್ಟಿಯಲ್ಲಿ ವಿಶೇಷವಾದ ಮಹತ್ವವನ್ನು ಪಡೆದಿದೆ. ಇದೊಂದು ಶಕ್ತಿಯುತವಾದ ದುರಂತ ನಾಟಕ. ಗ್ರೀಕ್ ಟ್ರ್ಯಾಜಡಿಯ ರಚನೆಯನ್ನಿಲ್ಲಿ ಮಿಲ್ಟನ್ ಬಳಸಿಕೊಂಡಿದ್ದರೂ ಈ ನಾಟಕ ಅವನ ವಿಚಾರ-ನಂಬುಗೆಗಳ ಒಂದು ಉತ್ತಮ ವಾಹಕವಾಗಿ ಪರಿಣಮಿಸಿದೆ. "ಮತ್ತಾವ ಕಾವ್ಯದಲ್ಲಿಯೂ ಮಿಲ್ಟನ್ ತನ್ನನ್ನೇ ಇಷ್ಟೊಂದು ತುಂಬಿಲ್ಲ" ಎಂದು **ಹಚಿನ್‌ಸನ್** ಈ ನಾಟಕದ ಬಗ್ಗೆ ಹೇಳಿದ್ದಾರೆ. ಸ್ಯಾಮ್ಸನ್ ಮತ್ತು ಮಿಲ್ಟನ್ ಇವರೀರ್ವರಲ್ಲಿ ಕಂಡುಬರುವ ಹೋಲಿಕೆಯಲ್ಲಿ ಈ ಮಾತಿನ ಸತ್ಯವನ್ನು ನಾವು ಕಾಣುತ್ತೇವೆ. ಸ್ಯಾಮ್ಸನ್ನನಂತೆ ಮಿಲ್ಟನ್ನನು ಕೂಡಾ ತನ್ನ ಕೊನೆಯ ದಿನಗಳಲ್ಲಿ ಪಾರತಂತ್ರ್ಯ, ದೃಷ್ಟಿಹೀನತೆಗಳ ಕಷ್ಟಗಳನ್ನನುಭವಿಸಿದ. ಅಷ್ಟೇ ಅಲ್ಲದೆ, ಇಸ್ರೇಲದಂತೆ ತನ್ನ ದೇಶವೂ ಕೂಡ ಸ್ವಾತಂತ್ರ್ಯವನ್ನು ಕಳೆದುಕೊಂಡು ಅರಸುಗಳ ದಾಸ್ಯದಲ್ಲಿ ಕೊಳೆಯುತ್ತಿರುವವನ್ನು ಕಂಡು ಪರಿತಪಿಸಿದ. ಅವನ ಆ

ನೋವೇ ಈ ನಾಟಕದಲ್ಲಿ ಹರಿದುಬಂದಿದೆ ಎಂದು ಹೇಳ ಬಹುದು. ಆದರೆ ಎಂತಹ ಕಷ್ಟದಲ್ಲಿಯೂ, ಎಂತಹ ನಿರಾಶೆ ಯಲ್ಲಿಯೂ ಮಿಲ್ಟನ್ ಈಶ್ವರನಲ್ಲಿ ತಾನಿರಿಸಿದ ಶ್ರದ್ಧೆಯಿಂದ ಚಲಿಸಿದವನಲ್ಲ; ಅವನಲ್ಲಿ ಅನ್ಯಾಯವನ್ನು ಕಂಡವನಲ್ಲ. ಮಿಲ್ಟನ್ನನ ಈ ಅಚಲಶ್ರದ್ಧೆ, ವಿಶ್ವಾಸಗಳನ್ನು **ಸ್ಯಾಮ್ಸನ್ ಎಗೊನಿಸ್ಟಿಸ್**ದಲ್ಲಿ ಕೂಡ ನಾವು ಸ್ಪಷ್ಟವಾಗಿ ಕಾಣುತ್ತೇವೆ.

ಈ ನಾಟಕದ ಘಟನೆಗಳೆಲ್ಲ ಒಂದೇ ದಿನ ನಡೆದು ಹೋಗುತ್ತವೆ. ನಾಟಕದ ಪ್ರಾರಂಭದಲ್ಲಿ **ಗಾಝಾದ** ಸೆರೆಮನೆಯೆದುರು ಕುಳಿತು ದುಃಖಿಸುತ್ತಿರುವ ಸ್ಯಾಮ್ಸನ್ನ ನನ್ನು ನಾವು ಕಾಣುತ್ತೇವೆ. ಫಿಲಿಸ್ಟಿನ್ನರ ದೇವತೆಯಾದ **ಡೇಗನ್ನನ** ಉತ್ಸವದ ನಿಮಿತ್ತ ಅವನಿಗೆ ಸ್ವಲ್ಪ ವಿರಾಮ ದೊರ ಕಿರುತ್ತದೆ. ಆದರೆ ಈ ವಿರಾಮ ಕೇವಲ ದೇಹಕ್ಕೆ ಮಾತ್ರ; ಮನಸ್ಸು ಒಂದೇ ಸಮನೆ ತಳಮಳಿಸುತ್ತಲೇ ಇರುತ್ತದೆ. ಇಸ್ರೇಲದ ರಕ್ಷಕನಾಗಬೇಕಿದ್ದ ತಾನು ಫಿಲಿಸ್ಟಿನ್ನರ ದಾಸ್ಯದಲ್ಲಿ ಕೊಳೆಯುತ್ತ, ತನ್ನ ಸಿಂಹಸಾಮರ್ಥ್ಯವನ್ನು ಪಶುವಿನೋಪಾದಿ ಯಲ್ಲಿ ವೈರಿಗಳಿಗಾಗಿ ಶ್ರಮಿಸುತ್ತಿರುವದನ್ನು ನೆನೆದು ಅವನಿಗೆ ಅತೀವ ದುಃಖವಾಗುತ್ತದೆ. ಆದರೆ ತನ್ನ ದುಃಸ್ಥಿತಿಗಾಗಿ ತನ್ನನ್ನುಳಿದು ಮತ್ತಾರನ್ನೂ ಆತ ದೂಷಿಸುವು ದಿಲ್ಲ. ತನ್ನ ಶಕ್ತಿಯ ರಹಸ್ಯಸ್ಥಾನವನ್ನು ಹೆಂಡತಿ ಡಿಲೈಲಳಿಗೆ ಹೇಳಿ ತನ್ನ ನಾಶವನ್ನು ತಾನೇ ತಂದೊಡ್ಡಿಕೊಂಡಿರುವುದನ್ನು ಅವನು ಮರೆತಿರುವುದಿಲ್ಲ. ದೃಷ್ಟಿಹೀನತೆ ಸ್ಯಾಮ್ಸನ್ನನ ಪರಮದುಃಖಕ್ಕೆ ಕಾರಣವಾಗಿರುತ್ತದೆ. ಬೆಳಕನ್ನೇ ಕಳೆದು

ಕೊಂಡು ಕೊನೆಯವರೆಗೂ ಕತ್ತಲೆಯಲ್ಲಿಯೇ ಕೊಳೆಯಬೇಕಾಗಿ ಬಂದ ತನ್ನ ದುಃಸ್ಥಿತಿಯನ್ನು ಮಿಲ್ಟನ್ ಸ್ಯಾಮ್ಸನ್ನನ ಮೂಲಕ ತೋಡಿಕೊಂಡಿದ್ದಾನೆ:

> " ಓ! ಕತ್ತಲು, ಕತ್ತಲು, ಕತ್ತಲು,
> ಉರಿವ ನಡುಹಗಲಲ್ಲಿ ಮತ್ತೆ ಮರಳದ ಕತ್ತಲು,
> ಬೆಳಗಿನಾಸೆಯು ನಾಶಗೈಯುವ ಪೂರ್ಣಗ್ರಹಣದ
> ಕತ್ತಲು. "

ಈ ಹೊತ್ತಿಗೆ ಸ್ಯಾಮ್ಸನ್ನನನ್ನು ಮೇಳ (Chorus) ದವರು ಕೂಡಿಕೊಳ್ಳುತ್ತಾರೆ. ಇಸ್ರೇಲದವರೇ ಆದ ಅವರು ಸ್ಯಾಮ್ಸನ್ನನನ್ನು ಬಹಳ ಗೌರವದಿಂದ ಕಾಣುತ್ತಾರೆ. ಅವನ ಅಸಾಮಾನ್ಯ ಶಕ್ತಿ, ಅದ್ಭುತ ಸಾಧನೆಗಳನ್ನರಿತ ಅವರು ಸದ್ಯದ ಅವನ ದುಃಸ್ಥಿತಿಯನ್ನು ಕಂಡು ಮರುಗುತ್ತಾರೆ: **ಸ್ಯಾಮ್ಸನ್** ಮೇಳದವರಲ್ಲಿ ತನ್ನ ಅಂತರಂಗವನ್ನು ತೋಡಿ ಕೊಳ್ಳುತ್ತಾನೆ. ತನ್ನಲ್ಲಿಯ ಶಕ್ತಿ-ಜ್ಞಾನಗಳ ಒಂದು ವಿಸಂಗತತೆಯೇ ತನ್ನ ಪತನದ ಕಾರಣವೆಂದು ಅವನ ಭಾವನೆಯಾಗಿದೆ. ಇಸ್ರೇಲದ ಆಗುಹೋಗುಗಳನ್ನು ಕುರಿತು ಸ್ಯಾಮ್ಸನ್ ಮೇಳದವರೊಡನೆ ನಡೆಯಿಸಿದ ಮಾತುಕತೆಗಳಲ್ಲಿ ಮಿಲ್ಟನ್ನನ ಉತ್ಕಟ ಸ್ವಾತಂತ್ರ್ಯಪ್ರೇಮದ ಒಂದು ಶಕ್ತಿಯುತವಾದ ಅಭಿವ್ಯಕ್ತಿಯನ್ನು ನಾವು ಕಾಣುತ್ತೇವೆ.

ಸ್ಯಾಮ್ಸನ್ ಮೇಳದವರೊಡನೆ ಮಾತನಾಡುವಾಗ ಅಲ್ಲಿಗೆ ಸ್ಯಾಮ್ಸನ್ನನ ತಂದೆ **ಮನೋಹವನ** ಆಗಮನವಾಗುತ್ತದೆ.

ಮನೋವ್ ದುಃಖದ ಭರದಲ್ಲಿ ತನ್ನ ಮಗನನ್ನು ಈ ದುಃಸ್ಥಿತಿಗೆ ಒಯ್ದ ದೈವವನ್ನು ಹಳಿಯುತ್ತಾನೆ. ಆದರೆ ಸ್ಟ್ಯಾವ್ಸನ್ ತನ್ನ ತಂದೆ ದೈವವನ್ನು ದೂಷಿಸುವದನ್ನು ಒಪ್ಪುವುದಿಲ್ಲ. ಮನೋವ್ ಅಂದು ನಡೆಯಲಿರುವ **ಡೇಗನ್** ದೇವತೆಯ ಮಹೋತ್ಸವವನ್ನು ಪ್ರಸ್ತಾಪಿಸಿ ಅದು ನಡೆಯುವದಕ್ಕೆ ಸ್ಟ್ಯಾವ್ಸನ್ನನೇ ಕಾರಣನಾದುದನ್ನು ವಿವರಿಸುತ್ತಾನೆ. ಮನೋವನ ದೃಷ್ಟಿಯಲ್ಲಿ ಸ್ಟ್ಯಾವ್ಸನ್ನನ ಪ್ರಮಾದದ ದುಷ್ಪರಿಣಾಮಗಳಲ್ಲಿ ಇದೇ ಮುಖ್ಯವಾದುದು. ಏಕೆಂದರೆ, ಸ್ಟ್ಯಾವ್ಸನ್ನನ ಅಪಜಯದಿಂದಲೇ ಡೇಗನ್ನನ ಮಹತ್ವ ಹೆಚ್ಚಾಗಿದೆ ಆದರೆ ಈಶ್ವರನು ಡೇಗನ್ನನ ಈ ಏರಾಟವನ್ನು ಬೇಗನೆ ಕುಗ್ಗಿಸುವನೆಂಬ ಆತ್ಮವಿಶ್ವಾಸ ಸ್ಟ್ಯಾವ್ಸನ್ನನಿಗಿದೆ. ಮನೋವ್ ಸ್ಟ್ಯಾವ್ಸನ್ನನನ್ನು ಹಣ ತೆತ್ತು ಸೆರೆಯಿಂದ ಬಿಡಿಸುವ ಆಸೆಯನ್ನಿಟ್ಟುಕೊಂಡಿರುತ್ತಾನೆ. ಮತ್ತು ಅದನ್ನು ಸ್ಟ್ಯಾವ್ಸನ್ನನೆದುರು ಆಡಿಯೂ ತೋರಿಸುತ್ತಾನೆ. ಆದರೆ ಸ್ಟ್ಯಾವ್ಸನ್ ಬಿಡುಗಡೆಯನ್ನು ಬಯಸುವದಿಲ್ಲ; ತನ್ನ ಅಪರಾಧಕ್ಕೆ ಶಿಕ್ಷೆಯೆಂದು ಸೆರೆಯೇ ಇರಲೆಂದು ತಂದೆಯನ್ನು ಕೇಳಿಕೊಳ್ಳುತ್ತಾನೆ. ಮನೋವ್ ಪಶ್ಚಾತ್ತಾಪದ ಮಾರ್ಗವನ್ನು ಮಗನಿಗೆ ತೋರಿಸಿಕೊಟ್ಟು ತನ್ನ ಪ್ರಯತ್ನಗಳನ್ನು ಮುಂದುವರಿಸಲು ಹೊರಡುತ್ತಾನೆ. ಮೇಳದವರು ಒಕ್ಕೊರಲಿನಿಂದ ಸ್ಟ್ಯಾವ್ಸನ್ನನ ಜೀವನಕ್ಕೆ ಶಾಂತಿ–ಸಾರ್ಥಕ್ಯಗಳನ್ನೊದಗಿಸಲು ದೇವನಲ್ಲಿ ಮೊರೆಯಿಡುತ್ತಾರೆ.

ಇಷ್ಟು ಹೊತ್ತಿಗೆ **ಡಿಲೈಲ್** ಸ್ಟ್ಯಾವ್ಸನ್ ಇದ್ದಲ್ಲಿಗೆ

ಬರುತ್ತಾಳೆ. ಅವಳ ಆಗಮನದ ಸುದ್ದಿಯನ್ನು ಕೇಳಿ ಸ್ಯಾಮ್ಸನ್ನನ ರೋಷ ಕೆರಳುತ್ತದೆ. ಅವಳು ತನ್ನ ಹತ್ತಿರ ಬರದಿರಲಿ ಎಂದು ಕಠೋರವಾಗಿ ಅವನು ಎಚ್ಚರಿಕೆ ಕೊಡುತ್ತಾನೆ. ಆದರೆ ಡಿಲೈಲ್ ಅವನನ್ನು ಸಂತಯಿಸಲು ಪ್ರಯತ್ನಿಸುತ್ತಾಳೆ. ತನ್ನಿಂದೇನಾದರೂ ಸಹಾಯವಾಗಬಹುದೇ ಎಂದು ಸ್ಯಾಮ್ಸನ್ನನನ್ನು ಕೇಳುತ್ತಾಳೆ. ಡಿಲೈಲ್ ತನ್ನಿಂದ ತಪ್ಪಾದುದನ್ನು ಒಪ್ಪುವಳಾದರೂ ತನ್ನ ತಪ್ಪಿಗೆ ಸ್ಯಾಮ್ಸನ್ನನೇ ಕಾರಣನೆಂದು ಒತ್ತಿ ಹೇಳುತ್ತಾಳೆ. ತಾನು ಸ್ಯಾಮ್ಸನ್ನನ ಶಕ್ತಿರಹಸ್ಯವನ್ನು ವೈರಿಗಳಿಗೆ ಹೇಳಿಕೊಟ್ಟುದುದು ಅವನಿಗಾಗಿದ್ದ ತನ್ನ ಪ್ರೀತಿಗಾಗಿ, ಅವನು ತನ್ನಿಂದ ಎಂದೂ ದೂರಾಗದಿರಲಿ ಎನ್ನುವ ಉದ್ದೇಶದಿಂದ ಎಂದು ಮುಂತಾಗಿ ಡಿಲೈಲ್ ತನ್ನ ಕೃತಿಯನ್ನು ಸಮರ್ಥಿಸಿಕೊಳ್ಳುತ್ತಾಳೆ. ಆದರೆ ಸ್ಯಾಮ್ಸನ್ ಇವಾವುವನ್ನೂ ಒಪ್ಪುವದಿಲ್ಲ. “ಐಶ್ವರ್ಯದ ಆಸೆಗಾಗಿಯೇ ನೀನು ಈ ಹೀನ ಕೃತ್ಯವನ್ನು ಎಸಗಿದ್ದೀಯೆ” ಎಂದು ಬಿರುಸಾಗಿ ಅವಳಿಗೆ ಹೇಳಿಬಿಡುತ್ತಾನೆ. “ನಿನ್ನನ್ನೊಮ್ಮೆ ಮುಟ್ಟಿಯಾದರೂ ಸಂತೋಷಬಡುತ್ತೇನೆ” ಎಂದು ಡಿಲೈಲ್ ಸ್ಯಾಮ್ಸನ್ನನನ್ನು ಬೇಡಿಕೊಳ್ಳುತ್ತಾಳೆ. ಸ್ಯಾಮ್ಸನ್ ಅದಕ್ಕೂ ಒಪ್ಪದಾಗಲು ಅವಳ ಅಭಿಮಾನ ಜಾಗ್ರತವಾಗುತ್ತದೆ. ತಾನು ಮಾಡಿದ್ದು ತನ್ನ ದೇಶದ, ತನ್ನ ಜನರ ಹಿತಕ್ಕಾಗಿ; ಆದರಿಂದ ತನಗೆ ಶಾಶ್ವತವಾದ ಕೀರ್ತಿ ಲಭಿಸಿದೆ ಎನ್ನುವ ತನ್ನ ನಿಜವಾದ ವಿಚಾರಗಳನ್ನು ಪ್ರಕಟಗೊಳಿಸಿ, ಖತಿಗೊಂಡು ಡಿಲೈಲ್ ಅಲ್ಲಿಂದ ಹೊರಟುಹೋಗುತ್ತಾಳೆ.

ಡಿಲ್ಯೆಲಳ ನಿರ್ಗಮನದ ನಂತರ **ಗಾಥದ ಹರಫನ** ಆಗಮನವಾಗುತ್ತದೆ. ಅಸಹಾಯ ಸ್ಥಿತಿಯಲ್ಲಿರುವ ಸ್ಯಾಮ್ಸನ್‌ನನ್ನು ಕಂಡು ಕೀಳು ನುಡಿಗಳಿಂದ ಅವನನ್ನು ಜರಿಯುವದೇ **ಹರಫನ** ಬರುವಿಕೆಯ ಉದ್ದೇಶವಾಗಿರುತ್ತದೆ. ಆದರೆ ಹರಫನ ನುಡಿಗಳಿಂದ ಸ್ಯಾಮ್ಸನ್ ಖತಿಗೊಳ್ಳುವುದಿಲ್ಲ. ಅದಲ್ಲದೆ ಯುದ್ಧಕ್ಕಾಗಿ, ಅಂತಹ ಸ್ಥಿತಿಯಲ್ಲಿಯೂ ಅವನಿಗೆ ಕರೆ ಕೊಡುತ್ತಾನೆ. ಅಂಜುಗುಳಿಯಾದ ಹರಫ ಅವಮಾನಿತನಾಗಿ ಅಲ್ಲಿಂದ ಕಾಲ್ದೆಗೆಯುತ್ತಾನೆ.

ಮುಂದೆ ಕೆಲ ನಿಮಿಷಗಳಲ್ಲಿ ಅಧಿಕಾರಿಯೊಬ್ಬನು ಅಲ್ಲಿಗೆ ಬಂದು ಡೇಗನ್ನನ ಉತ್ಸವದ ನಿಮಿತ್ತ ಅಂದು ನಡೆಯಲಿರುವ ಆಟಪಾಟಗಳಲ್ಲಿ ಸ್ಯಾಮ್ಸನ್ ಭಾಗವಹಿಸಿ ಶಕ್ತಿಪ್ರದರ್ಶನವನ್ನು ನಡೆಯಿಸಬೇಕು ಎನ್ನುವ ಇಸ್ರೇಲಿ ಸರ್ದಾರರ ಆಜ್ಞೆಯನ್ನು ಅವನಿಗೆ ತಲುಪಿಸುತ್ತಾನೆ. ಸ್ಯಾಮ್ಸನ್ ಮೊದಲಿಗೆ ಒಪ್ಪುವದಿಲ್ಲವಾದರೂ ಭಾಗವಹಿಸುವುದು ವಿಹಿತವೆಂದು ಅಂತಃಪ್ರೇರಣೆಯಾದುದರಿಂದ ಎರಡನೆಯ ಸಲ ಅಧಿಕಾರಿ ಕರೆಯಬಂದಾಗ ಅವನೊಡನೆ ಹೊರಡುತ್ತಾನೆ.

ಈ ವೇಳೆಗೆ ಮನೋವ್ ಪುನರಾಗಮಿಸುತ್ತಾನೆ. ಸ್ಯಾಮ್ಸನ್ನನನ್ನು ಸೆರೆಯಿಂದ ಬಿಡಿಸಲು ಅವನು ನಡೆಯಿಸಿದ ಪ್ರಯತ್ನಗಳಿಗೆ ಕೆಲಮಟ್ಟಿಗೆ ಯಶ ದೊರಕಿರುವುದರಿಂದ ಮನೋವ್ ಆನಂದದಲ್ಲಿಯೇ ಇರುತ್ತಾನೆ. ಮೇಳದವರೊಡನೆ, ಸ್ಯಾಮ್ಸನ್ನನಿಗೆ ಬರಲಿರುವ ಸುದಿನಗಳ ಬಗ್ಗೆ ಆತ ಮಾತನಾಡತೊಡಗುತ್ತಾನೆ. ಈ ಸಂಭಾಷಣೆ ನಡೆದಾಗ

ದೂರದಿಂದ ಭಯಂಕರವಾದ ಧ್ವನಿಗಳು ತೂರಿಬರುತ್ತವೆ. ಆ ಧ್ವನಿಗಳ ಕಾರಣವೇನಿರಬಹುದು ಎಂದು ಮೇಳದವರು ಮತ್ತು ಮನೋವ್ ತರ್ಕಿಸುತ್ತಿರುವಾಗ ದೂತನೊಬ್ಬ ಅವರಿದ್ದಲ್ಲಿಗೆ ಬರುತ್ತಾನೆ. ಅವನಿಂದ ನಡೆದ ಸಂಗತಿ ಹೊರಬೀಳುತ್ತದೆ. ಸ್ಯಾಮ್ಸನ್ ಶಕ್ತಿಪ್ರದರ್ಶನ ನಡೆಯಿಸಿದ ನಂತರ, ವಿಶ್ರಾಂತಿ ಬೇಕೆಂದು ಹೇಳಿಕೊಂಡು ಅಲ್ಲಿನ ವಿಶಾಲವಾದ ಸಭಾಗೃಹದ ಆಧಾರಗಳಾಗಿದ್ದ ಎರಡು ಸ್ತಂಭಗಳಿಗೆ ಒರಗಿ ನಿಂತಿದ್ದ. ಮತ್ತು ಸಭಿಕರಿಗೆ ಏನು ನಡೆದಿದೆಯೆನ್ನುವುದು ತಿಳಿಯುವ ಮೊದಲೇ ತನ್ನ ಅಸಾಮಾನ್ಯ ಶಕ್ತಿಯ ಬಲದಿಂದ ಅವೆರಡೂ ಸ್ತಂಭಗಳನ್ನು ಅಲುಗಾಡಿಸಿ ಇಡಿಯ ಸಭಾಗೃಹವನ್ನೇ ಅಲ್ಲಿ ಕುಳಿತವರ ಮೇಲೆ, ತನ್ನ ಮೇಲೆ ಕೆಡವಿಕೊಂಡು ಬಿಟ್ಟಿದ್ದ. ಡೇಗನ್ನನ ಉತ್ಸವಕ್ಕೆಂದು ಅಲ್ಲಿ ನೆರೆದಿದ್ದ ಅಸಂಖ್ಯಾತ ಫಿಲಿಸ್ಟಿನ್ ಸರ್ದಾರರು ಸ್ಯಾಮ್ಸನ್ನನೊಡನೆ ತಕ್ಷಣ ನಾಶಹೊಂದಿದ್ದರು. ಸ್ಯಾಮ್ಸನ್ ಸತ್ತುಹೋಗಿದ್ದ. ಆದರೆ ವೈರಿಗಳನ್ನು ನಾಶಮಾಡಿಯೇ ಇಹಲೋಕವನ್ನು ತ್ಯಜಿಸಿದ್ದ. ಅದರಿಂದಾಗಿ ಅವನ ದೇಶಕ್ಕೆ ಒಳ್ಳೆಯದಾಗಿತ್ತು; ಅವನ ಬಾಳು ಕೂಡ ಸಾರ್ಥಕ್ಯವನ್ನು ಹೊಂದಿತ್ತು.

ಈ ಎಲ್ಲ ಸಂಗತಿಗಳನ್ನು ಕೇಳಿ ತಿಳಿದ ಮನೋವ್ ತನ್ನ ದುಃಖವನ್ನು ಹತ್ತಿಕ್ಕಿಕೊಂಡು ಉಳಿದವರಿಗೆ ಸಮಾಧಾನ ಹೇಳುತ್ತಾನೆ; ಸ್ಯಾಮ್ಸನ್ನನ ಬಾಳಿನ ಗೆಲುವನ್ನು ತಿಳಿಸಿ ಹೇಳುತ್ತಾನೆ.

"ಕಣ್ಣೀರ ಸುರಿಸುವುದಕಿಲ್ಲಿ ಏನಿಲ್ಲ,
ಜೋರಾಡಿ, ಎದೆಬಡಿದು ಅಳಲಿಕಿಲ್ಲ;
ಅಳುಕು, ಅಪಕೀರ್ತಿ, ತಾತ್ಸಾರ
ದೂಷಣೆಗಳಂ ನಾವಿಲ್ಲಿ ಕಾಂಬುದಿಲ್ಲ.
ಇಲ್ಲಿರುವುದೆಲ್ಲ ಒಳಿತು– ಚೆನ್ನು,
ಶಾಂತಿಯುಲಿ ಕೊನೆಗೊಳ್ಳ ಸಾವು ಹೊನ್ನು"

"ಮಿಲ್ಟನ್ ನಾಟ್ಯರಚನೆಯಲ್ಲಿ ಶ್ರೇಷ್ಠವಾದ ಒಂದು ಸಾಧನೆಯನ್ನು ದೊರಕಿಸುವುದು ಸಾಧ್ಯವಿದ್ದಿಲ್ಲ" ಎಂದು **ಡಾ. ಜಾನ್‌ಸನ್**‌ರವರು ಅಭಿಪ್ರಾಯ ಪಟ್ಟಿದ್ದಾರೆ. ಸಾಮಾನ್ಯ ವಾಗಿ ಮಿಲ್ಟನ್ನನ ವಿಷಯದಲ್ಲಿ ನಾವು ಈ ಮಾತನ್ನು ಒಪ್ಪಬೇಕಾಗುತ್ತದೆ ಎನ್ನುವುದು ನಿಜ. ಏಕೆಂದರೆ, **ಕೋಮಸ್, ಸ್ಯಾಮ್ಸನ್ ಎಗೊನಿಸ್ಟಿಸ್** ನಾಟಕಗಳನ್ನು ಮಿಲ್ಟನ್ ರಚಿಸಿದನಾದರೂ ಶೇಕ್ಸಪಿಯರನ ಪರಕಾಯಪ್ರವೇಶ ಶಕ್ತಿ, ಮಾನವ ಸ್ವಭಾವದ ಪರಿಪರಿಯಾದ ಅನುಭವ ಮಿಲ್ಟನ್ನನಲ್ಲಿ ನಮಗೆ ನೋಡಲು ಸಿಗುವದಿಲ್ಲ. ಮಿಲ್ಟನ್ ಯಾವಾಗಲೂ ತನ್ನ ವಿಚಾರ–ನಂಬುಗೆಗಳಿಂದಲೇ ಪರಿವೃತನಾಗಿರುವವ; ತನ್ನ ಪ್ರತಿಯೊಂದು ಕೃತಿಯಲ್ಲಿ ನೇರವಾಗಿ ತನ್ನ ಅಭಿವ್ಯಕ್ತಿ ಯನ್ನು ಸಾಧಿಸಬಯಸುವವ. ಹೀಗಾಗಿ ನಮಗೆ ಅವನ ಕೃತಿಗಳಲ್ಲಿ ಅಲ್ಲಲ್ಲಿ ನಾಟಕೀಯ ಅಂಶಗಳು ಕಾಣಸಿಗುತ್ತಿದ್ದರೂ ನಾಟಕವನ್ನೇ ತನ್ನ ಅಭಿವ್ಯಕ್ತಿಯ ಮುಖ್ಯ ಸಾಧನವನ್ನಾಗಿ ಇಟ್ಟುಕೊಂಡು ಮಿಲ್ಟನ್ ಸಾಧನೆಯ ಒಂದು ಪರಾಕಾಷ್ಠೆ ಯನ್ನು ಮುಟ್ಟುತ್ತಿದ್ದನೆಂದು ಹೇಳಲಾಗುವುದಿಲ್ಲ.

ಸಾಮಾನ್ಯ ಸ್ಥಿತಿ ಹೀಗಿದ್ದರೂ **ಸ್ಯಾಮ್ಸನ್ ಎಗೊನಿಸ್ಟಿಸ್** ಓದುವುದಕ್ಕೂ, ಅಭಿನಯಿಸುವುದಕ್ಕೂ ಒಂದು ಒಳ್ಳೆಯ ನಾಟಕ ಎಂದು ಹೇಳಲು ಬಲವಾದ ಕಾರಣಗಳಿವೆ. ಅದೆಷ್ಟೋ ದೃಷ್ಟಿಗಳಿಂದ ಮಿಲ್ಟನ್ ತನ್ನಲ್ಲಿ ಮತ್ತು ಸ್ಯಾಮ್ಸನ್ನನಲ್ಲಿ ಒಂದು ಅಭಿನ್ನತೆಯನ್ನು ಕಂಡುಕೊಂಡಿದ್ದುದರಿಂದ ಮತ್ತು ಸ್ಯಾಮ್ಸನ್ನನನ್ನೇ ಮುಖ್ಯವಾಗಿಟ್ಟುಕೊಂಡು ನಾಟಕವನ್ನು ರಚಿಸಿದುದರಿಂದ ಅವನ ನಾಟಕವಸ್ತುವಿಗೆ ಬಲ ಬಂದಿದೆ. ಗ್ರೀಕ್ ನಾಟಕದ ಪಡಿಕಟ್ಟೂ ಮಿಲ್ಟನ್ನನಿಗೆ ಅನುಕೂಲವಾಗಿ ಪರಿಣಮಿಸಿದೆ. ಸ್ಯಾಮ್ಸನ್ನನ ವ್ಯಕ್ತಿತ್ವ ದರ್ಶನದಲ್ಲಿ, ಡಿಲೈಲಳ ಪಾತ್ರಚಿತ್ರಣದಲ್ಲಿ, ಮೇಳದವರ ಮಾತುಗಳ ಸಂಯೋಜನೆಯಲ್ಲಿ ಮಿಲ್ಟನ್ ನಾಟಕೀಯ ದೃಷ್ಟಿಯಿಂದ ಯಶಸ್ವಿಯಾಗಿದ್ದಾನೆನ್ನುವುದು ಕಂಡುಬರದಿರದು.

ಕೊನೆಯ ದಿನಗಳಲ್ಲಿಯೂ ಮಿಲ್ಟನ್ನನು ತನ್ನ ಬಾಳನ್ನು ಬಹು ವ್ಯವಸ್ಥಿತವಾಗಿ ನಡೆಯಿಸಿಕೊಂಡು ಬಂದನು. ಬೆಳಿಗ್ಗೆ ಬಹು ಬೇಗ (ಬೇಸಿಗೆಯಲ್ಲಿ ಬೆಳಗಿನ ನಾಲ್ಕು ಗಂಟೆಗೆ, ಚಳಿಗಾಲದಲ್ಲಿ ಐದು ಗಂಟೆಗೆ) ಏಳುವುದು ಅವನಿಗೆ ಅಭ್ಯಾಸವಾಗಿಬಿಟ್ಟಿದ್ದಿತು. ಸಾಮಾನ್ಯವಾಗಿ ಅವನ ದೈನಂದಿನ ಕಾರ್ಯಕ್ರಮ ಹಿಬ್ರೂ ಧರ್ಮಗ್ರಂಥಗಳನ್ನು ಓದಿಸಿ ಕೇಳುವುದರಿಂದ ಪ್ರಾರಂಭವಾಗುತ್ತಿತ್ತು. ಸುಮಾರು ಏಳು ಗಂಟೆಗೆ ಸಹಾಯಕ ಬಂದು ಮಿಲ್ಟನ್ನನಿಗಾಗಿ ಓದುತ್ತಿದ್ದ ಮತ್ತು ಅವನು ಹೇಳಿದುದನ್ನು ಬರೆದುಕೊಳ್ಳುತ್ತಿದ್ದ. ಈ ಕಾರ್ಯಕ್ರಮ ಮಧ್ಯಾಹ್ನದ ಊಟದ ಸಮಯದವರೆಗೂ ನಡೆಯು

ತ್ತಿತ್ತು. ನಂತರ ತೋಟದಲ್ಲಿ ಅಡ್ಡಾಡುವುದರಿಂದಾಗಲಿ ಅಥವಾ ಮತ್ತಾವ ರೀತಿಯಿಂದಾಗಲಿ ಮಿಲ್ಟನ್ ಶಾರೀರಿಕ ದಣಿವು ಪಡೆಯುತ್ತಿದ್ದನು. ಸಂಭಾಷಣೆ, ಸಂಗೀತ ಇವು ಮಿಲ್ಟನ್ನನ ಮುಖ್ಯ ಮನೋರಂಜಕ ಸಾಧನಗಳಾಗಿದ್ದುವು. ಸಂಜೆಯ ಆರು ಗಂಟೆಯುವರೆಗೂ ಮತ್ತೆ ಓದಿಸಿ ಕೇಳುವುದು ನಡೆಯುತ್ತಿತ್ತು. ಆರು ಗಂಟೆಯ ನಂತರ ಸ್ನೇಹಿತರು ಬರುತ್ತಿದ್ದರು. ೮ ಗಂಟೆಯುವರೆಗೂ ಅವರೊಡನೆ ಮಾತುಕತೆ ನಡೆಯುತ್ತಿದ್ದವು. ಎಂಟು ಗಂಟೆಗೆ ರಾತ್ರಿಯ ಊಟ, ನಂತರ ನಿದ್ರೆ.

ಮಿಲ್ಟನ್ನನ ಈ ಕಾರ್ಯಕ್ರಮವನ್ನು ನೋಡಿದರೆ ತನ್ನ ಮುಪ್ಪಿನ ದಿನಗಳಲ್ಲಿಯೂ ಕೂಡ ಮಿಲ್ಟನ್ ತನ್ನ ಮಾನಸಿಕ ಅಭಿವೃದ್ಧಿಯತ್ತ ಎಷ್ಟೊಂದು ಲಕ್ಷ್ಯವನ್ನೀಯುತ್ತಿದ್ದನೆನ್ನು ವುದು ಗೊತ್ತಾಗುವಂತಿದೆ. ಕಟ್ಟುನಿಟ್ಟಿನ ಅವನ ಸ್ವಭಾವದ ನಿದರ್ಶನವೊಂದನ್ನು ಕೂಡ ಇಲ್ಲಿ ನಾವು ಕಾಣುತ್ತೇವೆ.

೧೬೭೪ರ ನವಂಬರ್ ೮ನೆಯ ದಿನಾಂಕದಂದು ಮಿಲ್ಟನ್ ಕೊನೆಯ ಉಸಿರೆಳೆದನು. ನೋವಿಲ್ಲದೆ, ಶಾಂತಮುದ್ರೆಯಿಂದ ಮಿಲ್ಟನ್ ಇಹಲೋಕವನ್ನು ತೊರೆದನೆಂದು ನೋಡಿದವರು ಹೇಳಿದ್ದಾರೆ. ಈಶ್ವರನ ಆಜ್ಞೆಗಳನ್ನು ಯಾವಾಗಲೂ ಆನಂದ ದಿಂದ ಪಾಲಿಸಿದ ಮಿಲ್ಟನ್ ಅವನ ಕೊನೆಯ ಆಜ್ಞೆಯನ್ನು ಕೂಡ ಬಹು ಸಂತೋಷದಿಂದ ನೆರವೇರಿಸಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

೯. ಉಪಸಂಹಾರ

"ಮಿಲ್ಟನ್! ಅದೊಂದು ಯುಗ ಯುಗಗಳಲ್ಲಿಯೂ ಪ್ರತಿಧ್ವನಿಸುವ ಹೆಸರು" ಎಂದು ಉದ್ಗರಿಸಿ **ಟೆನಿಸನ್** ಕವಿ ಮಿಲ್ಟನ್ನನ ಬಗೆಗೆ ತನ್ನಲ್ಲಿದ್ದ ಮೆಚ್ಚುಗೆ-ಗೌರವಗಳನ್ನು ವ್ಯಕ್ತಪಡಿಸಿದ್ದಾನೆ. ನಿಜಕ್ಕೂ ಮಿಲ್ಟನ್ನನ ಜೀವನದಲ್ಲಿ, ಸಾಹಿತ್ಯದಲ್ಲಿ ಮೆಚ್ಚಬೇಕಾದದ್ದು ಬಹಳಷ್ಟಿದೆ. ಮಿಲ್ಟನ್ನನ ಜೀವನದಲ್ಲಿ ಎದ್ದು ಕಾಣುವ ಉಜ್ವಲ ದೇಶಪ್ರೇಮ, ಅಪ್ರತಿಮ ಈಶ್ವರನಿಷ್ಠೆ, ನಿರಂತರ ಸಾಧನೆ, ಸ್ವಾತಂತ್ರ್ಯದಾಹ ಬೇರೆಡೆಗೆ ಸಿಗುವುದು ಅಪರೂಪ. ಅವನ ಸಾಹಿತ್ಯದಲ್ಲಿ ಪಂಕ್ತಿ ಪಂಕ್ತಿಗೆ, ವಾಕ್ಯ ವಾಕ್ಯಕ್ಕೆ ನಮಗೆಟಕುವ ಉತ್ತುಂಗ ಭಾವ, ವಿಚಾರ ವೃಂದವನ್ನು ಕೂಡ ನಾವು ಬೇರೆಡೆಗೆ ಅಷ್ಟೊಂದು ಸಮೃದ್ಧ ಸ್ಥಿತಿಯಲ್ಲಿ ಕಾಣಲಾರೆವು. ಅವನ ಜೀವನ ಹಾಗೂ ಸಾಹಿತ್ಯಗಳಲ್ಲಿಯ ಏಕಸೂತ್ರತೆ ಕೂಡ ಅವನದೇ. **ಸರ್ ವಾಲ್ಟರ ರ್‍ಯಾಲೆ**ಯವರು ಹೇಳಿದಂತೆ ಒಬ್ಬನೇ ಒಬ್ಬ ಮಿಲ್ಟನ್ನನನ್ನು ಅವನ ಜೀವನದ ತುಂಬೆಲ್ಲ ನಾವು ಕಾಣುತ್ತೇವೆ. ಮಿಲ್ಟನ್ನನ ತತ್ವನಿಷ್ಠೆ ಅವನ ವೈರಿಗಳು ಕೂಡ ಮೆಚ್ಚುವಂತಿತ್ತು.

ಹೀಗೆಂದಾಗ, ಮಿಲ್ಟನ್ನನಲ್ಲಿ ಯಾವ ದೋಷಗಳೂ ಇರಲಿಲ್ಲ ಎಂದು ಹೇಳಿದಂತಾಗುವದಿಲ್ಲ. **ಟಿ. ಎಸ್.**

ಎಲಿಯಟ್‌ರವರು ಮಿಲ್ಟನ್ನನ ಬಗ್ಗೆ ಬರೆಯುತ್ತ ಅವನ ವ್ಯಕ್ತಿತ್ವದ ಬಗೆಗಿರುವ ತಮ್ಮ ಅಪ್ರೀತಿಯನ್ನು ಒಪ್ಪಿಕೊಂಡಿದ್ದಾರೆ. ಅದೇ ರೀತಿ ಇನ್ನುಳಿದ ವಿಮರ್ಶಕರು ಕೂಡ ಕೆಲವೊಂದು ದೋಷಗಳನ್ನು ಮಿಲ್ಟನ್ನನಲ್ಲಿ ಎತ್ತಿ ತೋರಿಸಿದ್ದುಂಟು. **ಗ್ರಿಯರ್ಸನ್**‌ರವರು "ಮಿಲ್ಟನ್‌ನು ಮಾನವ ಜಾತಿಯನ್ನು ಬಹಳ ನಿರ್ದಯದಿಂದ ಕಂಡಿದ್ದಾನೆ" ಎನ್ನುವ ಒಂದು ಮಾತನ್ನು ಆಡಿದ್ದಾರೆ. ಮಿಲ್ಟನ್ನನ ಸ್ತ್ರೀ ದ್ವೇಷ, ಪರಧರ್ಮ ವಿಚಾರಗಳ ಬಗ್ಗೆ ಅವನಲ್ಲಿದ್ದ ಅಸಹಿಷ್ಣುತೆ, ತನ್ನದೇ ಸತ್ಯವೆನ್ನುವ ಅವನ ಒಂದು ಹಟ, ತತ್ವದ ಹೆಸರಿನಲ್ಲಿ ನಡೆದ ಕ್ರೌರ್ಯಕ್ಕಾಗಿ ಅವನು ಕೊಟ್ಟ ಸಮರ್ಥನೆ ಇವುಗಳಿಂದಾಗಿ ಮಿಲ್ಟನ್ನನ ಬಗ್ಗೆ ಒಮ್ಮೊಮ್ಮೆ ವಿರೋಧ ಭಾವನೆ ಹುಟ್ಟುವುದು ಸಹಜವಾಗಿದೆ. ಆದರೆ ಒಟ್ಟಿನಲ್ಲಿ ಅವನ ವ್ಯಕ್ತಿತ್ವದ ಒಂದು ದರ್ಶನವನ್ನು ನಾವು ಮಾಡಿಕೊಂಡಾಗ ಅವನಲ್ಲಿ ಅನೇಕ ಉತ್ತಮ ಗುಣಗಳು ಮನೆಮಾಡಿಕೊಂಡಿದ್ದವೆನ್ನುವುದು, ಅದರಂತೆಯೇ ದೋಷಗಳಿಗಿಂತ ಗುಣಗಳು ಎಷ್ಟೋ ಪಾಲು ಹೆಚ್ಚಾಗಿದ್ದುವೆನ್ನುವುದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಎಂತಲೇ, ಇಂಗ್ಲಂಡಿಗೆ ಮಿಲ್ಟನ್ ಸಲ್ಲಿಸಿದ ಮಹಾನ್‌-ಸೇವೆಯನ್ನರಿತ **ವರ್ಡ್ಸ್‌ವರ್ಥ್** ಕವಿ ಅವನನ್ನು ನೆನೆದು, "ಮಿಲ್ಟನ್! ಈ ಹೊತ್ತಿನಲ್ಲಿ ನೀನು ಬದುಕಿರಬೇಕಿತ್ತು!" ಎಂದು ಉದ್ಗಾರ ತೆಗೆದಿದ್ದಾನೆ.

ಮುಖ್ಯ ಆಧಾರ ಗ್ರಂಥಗಳು

1 The Poetical Works of John Milton
O. U. P.

2 Life of John Milton
—D. Masson

3 The Lives of the English Poets.
—Dr. Johnson

4 A Milton Hand book
—J. H. Hanford

5 Milton & Wordsworth
—Herbert Grierson

6 Milton & the English Mind
—F. E. Hutchinson

7 Milton *—Stop ford Brooke*

8 John Milton *—Rex Warner*

9 Milton *—Mark Pattison*

10 Milton *—Walter Raleigh*

11 Milton *—E. M. W. Tillyard*

12 Milton *—John Baily*

ಉಪನ್ಯಾಸ ಗ್ರಂಥಮಾಲೆ
ಇತ್ತೀಚಿನ ಪ್ರಕಟನೆಗಳು

+++++++

ಹರಿಹರನ ಮೂರು ರಗಳೆಗಳು
—ಎಂ. ಎಸ್. ಲಠ್ಠೆ

ಪ್ರಾಚ್ಯವಸ್ತು ಸಂಶೋಧನೆ
—ಅ. ಸುಂದರ

ನವೋದಿತ ಬಂಗ್ಲಾದೇಶ
—ಎ. ಎಂ. ರಾಜಶೇಖರಯ್ಯ

ಕನ್ನಡದಲ್ಲಿ ಶತಕ ಸಾಹಿತ್ಯ
—ಬಿ. ವ್ಹಿ. ಗುಂಜೆಟ್ಟಿ

ಕನ್ನಡ ಲಲಿತ ಪ್ರಬಂಧಗಳು
—ವ್ಹಿ. ಎನ್. ಸಿಂಪಿ

ಇಕ್ಕೇರಿ ಅರಸರು
—ಕೆ. ಗುಂಡಾ ಜೋಯಿಸ್

ಭೂಕಂಪಗಳು ಹಾಗೂ ಜ್ವಾಲಾಮುಖಿಗಳು
—ಎಂ. ಎಫ್. ಕರೆಣ್ಣವರ

ಟೀಕಾಚಾರ್ಯರು
—ಪಿ. ಎಂ. ಗಲಗಲಿ

ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು
—ಟಿ. ಎಂ. ಪಂಡಿತ

ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ